"2000 ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ, ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಗೃಹ ಸಚಿವರ ಪರವಾಗಿ) :— ಮಾನ್ಯ ಅಧ್ಯಕ್ಷರೆ, 2000ರ ಕರ್ನಾಟಕ ವ್ಯವಸ್ಥಿತ ಅಪರಾಧಗಳ ನಿಯಂತ್ರಣ, ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. **ಅನುಬಂಧ** 11

(iii) ಕರ್ನಾಟಕ ಪೌರ ನಿಗಮಗಳ (ಎರಡನೆಯ ತಿದ್ದುಪಡಿ), ವಿಧೇಯಕ, 2000
(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಗೃಹ ಸಚಿವರ ಪರವಾಗಿ) :— 2000 ಕರ್ನಾಟಕ ಪೌರ ನಿಗಮಗಳ (ಎರಡನೆಯ ತಿದ್ದುಪಡಿ), ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"2000 ಕರ್ನಾಟಕ ಪೌರ ನಿಗಮಗಳ (ಎರಡನೆಯ ತಿದ್ದುಪಡಿ), ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) (ಗೃಹ ಸಚಿವರ ಪರವಾಗಿ) :— 2000 ಕರ್ನಾಟಕ ಪೌರ ನಿಗಮಗಳ (ಎರಡನೆಯ ತಿದ್ದುಪಡಿ), ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. **ಅನುಬಂಧ** 11I

(ಬಿ) <u>ಪರ್ಯಾಲೋಚನಾ ಪ್ರಸ್ತಾವ</u>

(i) ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ - 2000

ಅಧ್ಯಕ್ಷರು :— ನಿನ್ನೆ ಮಾನ್ಯ ಕೆ.ಹೆಚ್. ಹನುಮೇಗೌಡರು ಪ್ರಾರಂಭಿಸಿದ್ದರು. ಈಗ ಮುಂದುವರೆಸಿ.

+ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಸಭಾಧ್ಯಕ್ಷರೆ, ಗ್ರಾಮಾಂತರ ಪ್ರದೇಶದಲ್ಲಿನ ರೈತರ ಮಕ್ಕಳಿಗೆ, ಕೃಷಿ ಕಾರ್ಮಿಕರ ಮಕ್ಕಳಿಗೆ ಕೆಲಸದಲ್ಲಿ ಶೇಕಡ 10ರಷ್ಟು ರಾಜ್ಯ ಸಿವಿಲ್ ಸೇವೆಗಳಲ್ಲಿ ರಿಸರ್ವ್ ಮಾಡಬೇಕೆಂದು ಮಾನ್ಯ ಸಚಿವರು ಶಾಸನ ಸಭೆಯಲ್ಲಿ ಅಮೆಂಡ್‌ಮೆಂಟ್‌ಗೆ ಸೂಚಿಸಿದ್ದಾರೆ. ಅದರ ಬಗ್ಗೆ ನಿನ್ನೆ ಕೆಲವು ವಿಚಾರಗಳನ್ನು ಹೇಳಿದ್ದೆ, ಇನ್ನು ಕೆಲವು ವಿಚಾರಗಳನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರು :— ನಿನ್ನೆ ತಾವು 20 ನಿಮಿಷಗಳ ಕಾಲ ಮಾತನಾಡಿದಿರಿ, ಆದ್ದರಿಂದ ತಾವು ಈಗ ಗರಿಷ್ಠ 15 ನಿಮಿಷಗಳ ಕಾಲ ಮಾತನಾಡಿ, ಏಕೆಂದರೆ ಬೇರೆಯವರೂ ಕೂಡ ಈ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಈ ದೇಶದಲ್ಲಿ ಶೇಕಡ 70ಕ್ಕಿಂತ ಕಡಿಮೆ ರೈತರು ಇಲ್ಲ, ಆದರೆ ಈ ರೈತರ ಮಕ್ಕಳಿಗೆ ಶೇಕಡ 10 ಮೀಸಲಾತಿ ನಿಗದಿ ಮಾಡಬೇಕು ಎನ್ನುವ ಸೂಚನೆ ಸರ್ಕಾರದಿಂದ ಬಂದಿದೆ. ನಾವೇನೂ ಇಲ್ಲದಿರುವುದನ್ನು ಕೇಳುತ್ತಿಲ್ಲ, ರೈತರು ತಲತಲಾಂತರದಿಂದಲೂ ಇಡೀ ದೇಶಕ್ಕೆ ಅನ್ನ ಹಾಕಿದ್ದಾರೆ ಮತ್ತು ಈ ದೇಶದ ಅಭಿವೃದ್ಧಿಗಾಗಿ ಹಗಲು ರಾತ್ರಿ ದುಡಿದಿದ್ದಾರೆ. ಇಂಥ ಮುಗ್ಧ ಜನತೆಯ ಮಕ್ಕಳಿಗೆ ನ್ಯಾಯವಾಗಿ ಏನು ಕೊಡಬೇಕಾಗಿತ್ತೋ ಅದನ್ನು ಕೊಡಬೇಕಾಗುತ್ತದೆ. ನನ್ನ ಅಭಿಪ್ರಾಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕೊಟ್ಟರೆ ಯಾವ ತಪ್ಪಿಲ್ಲ, ಅದು ಅಪರಾಧವೂ ಅಲ್ಲ; ತಲೆತಲಾಂತರಗಳಿಂದಲೂ ಆಗಿರುವ ಅನ್ಯಾಯಕ್ಕೆ ಕೊನೆಯಪಕ್ಷ ಈಗಲಾದರೂ ಅವರಿಗೆ ನ್ಯಾಯ ದೊರಕಿಸಿಕೊಟ್ಟ ಹಾಗೆ ಆಗುತ್ತದೆಂದು ನಾನು ತಿಳಿಸಬಯಸುತ್ತೇನೆ. ನಾನು ನಿನ್ನೆ ಮಾತನಾಡುತ್ತಾ ಇದ್ದಂತಹ ಸಂದರ್ಭದಲ್ಲಿ ಸಂವಿಧಾನದ ಬಗ್ಗೆ ಹೇಳುತ್ತಾ, ಮಾನ್ಯ ದಿವಂಗತ ಅಂಬೇಡ್ಕರ್‌ರವರು ಇದ್ದುದ್ದರಿಂದ ಹರಿಜನ-ಗಿರಿಜನರಿಗೆ ಏನು ನ್ಯಾಯ ಒದಗಿಸಿ ಕೊಡಬೇಕಾಗಿತ್ತೋ ಅದನ್ನು ಒದಗಿಸಿ, ಸಾಮಾಜಿಕ ನ್ಯಾಯವನ್ನು ದೊರಕಿಸಿ ಕೊಟ್ಟು ಆ ಜನಾಂಗ ಇವತ್ತು ತಲೆ ಎತ್ತಿ ನಿಲ್ಲುವಂಥ ಅವಕಾಶವನ್ನು ಮಾಡಿಕೊಟ್ಟರು. ಹೀಗಾಗಿ ಇಡೀ ದೇಶದ ಜನ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಆದರೆ, ನನಗೆ ಬರುವ ಒಂದು ಸಂಶಯ ಏನೆಂದರೆ, ಈ ದೇಶದಲ್ಲಿ 70 ಪರ್ಸೆಂಟ್ ಇರುವ ರೈತರ ಪ್ರತಿನಿಧಿಯೊಬ್ಬರು ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯಲ್ಲಿ ಇದ್ದಾರಾ? ಹಾಗೆ ಇದ್ದಿದ್ದರೆ ನಮ್ಮ ನ್ಯಾಯವಾದ ಬೇಡಿಕೆಯನ್ನು ಅವರು ಏಕೆ ಗಣನೆಗೆ ತೆಗೆದುಕೊಳ್ಳಲಿಲ್ಲ? ಹರಿಜನ-ಗಿರಿಜನರಿಗೆ ಕೊಡಬೇಕಾಗಿತ್ತು, ಆ ಕಾರಣದಿಂದ ಕೊಟ್ಟಿದ್ದೀರಿ, ನಾನು ಇದನ್ನು ಒಪ್ಪುತ್ತೇನೆ; ಆದರೆ ಉಳಿದಿದ್ದನ್ನು ಒಂದೇ ತಕ್ಕಡಿಗೆ ಹಾಕಿ, ಸಮಾನ ಅವಕಾಶ ಹಾಗೆ ಹೀಗೆ ಎಂದು ಹೇಳುತ್ತೀರಿ? ವಿಶೇಷ ಸೌಲಭ್ಯವನ್ನು ವಂಚಿತರಾದ ಜನಾಂಗದ ಮಕ್ಕಳಿಗೆ ಕೊಡಬೇಕು ಎಂದು ಕೇಳಿದರೆ ಯಾವುದೋ ಒಂದು ಆರ್ಟಿಕಲ್ ಓದಿಬಿಡುತ್ತಾರೆ. ಈ ಆರ್ಟಿಕಲ್ ಬರೆದವರು ಯಾರು?

ಅವರು ಈ ಆರ್ಟಿಕಲ್ ಬರೆದಂಥ ಸಂದರ್ಭದಲ್ಲಿ ಈ ದೇಶದ ರೈತರು ಇದ್ದಾರೆ, ತಲೆತಲಾಂತರಗಳಿಂದಲೂ ಹೇಳಿದ ಹಾಗೆ ಕೇಳಿಕೊಂಡು ಹೋಗಿದ್ದಾರೆ, ಅವರೆಂದೂ ಧಂಗೆ ಎದ್ದಿಲ್ಲ, ಅವರೆಂದೂ ವಿರೋಧ ಮಾಡಿಲ್ಲ ಎನ್ನುವ ಕಾರಣಕ್ಕೆ ಈ ಗ್ರಾಮಾಂತರ ಪ್ರದೇಶದ ರೈತರನ್ನು ಇಷ್ಟೊಂದು ನಿರ್ಲಕ್ಷ್ಯದಿಂದ ಕಾಣುವುದು ಈ ನಾಗರೀಕ ಸಮಾಜಕ್ಕೆ ಹಾಗೂ ಪ್ರಜಾತಂತ್ರ ವ್ಯವಸ್ಥೆಯಲ್ಲಿರುವ ಈ ರಾಜ್ಯಕ್ಕೆ ಗೌರವ ಏನು ತರುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಪಟ್ಟಣ ಪ್ರದೇಶದಲ್ಲಿರುವ ಮಕ್ಕಳು ಕಾನ್ವೆಂಟ್ ಸ್ಕೂಲ್‌ಗಳಲ್ಲಿ ಸುಮಾರು 20 ರಿಂದ 50 ಸಾವಿರ ರೂಪಾಯಿಗಳನ್ನು ಕೊಟ್ಟು ಓದುತ್ತಾರೆ. ಒಳ್ಳೆಯ ತರಬೇತಿ ಹೊಂದಿದ ಉಪಾಧ್ಯಾಯರಿಂದ ಅವರಿಗೆ ಪಾಠ-ಪ್ರವಚನ ನಡೆಯುತ್ತದೆ, ಅಲ್ಲಿ ಒಳ್ಳೆಯ ವಾತಾವರಣ ಇರುತ್ತದೆ, ಮನೆಯಲ್ಲೂ ಕೂಡ ಇಡೀ ಕುಟುಂಬದವರೇ ಆ ಮಗುವಿಗೆ ಪಾಠ ಹೇಳಿಕೊಡುತ್ತಾರೆ. ಈ ರೀತಿಯಾಗಿ ಶಾಲೆಯಲ್ಲಿ ಉಪಾಧ್ಯಾಯರು ಪಾಠ ಹೇಳಿಕೊಡುವುದರ ಜೊತೆಗೆ ಮನೆಯಲ್ಲಿ ಕೂಡ ಪಾಠ ಹೇಳಿಕೊಡುವ ಅವಕಾಶವಿರುವುದರಿಂದ ಆ ಮಗುವು ತನಗಿರುವ ಬುದ್ಧಿಯ ಜೊತೆಗೆ ಹೆಚ್ಚು ತಿಳುವಳಿಕೆ ಹಾಗೂ ಹೆಚ್ಚು ಅಂಕಗಳನ್ನು ಗಳಿಸುವುದಕ್ಕೆ ಸಾಧ್ಯವಾಗುತ್ತದೆ. ಇಂಥ ಮಕ್ಕಳಿಗೆ ಸಮಾನವಾಗಿ ಹಳ್ಳಿಯಲ್ಲಿ ಓದುತ್ತಿರುವ ಮಕ್ಕಳನ್ನು ಒಟ್ಟಿಗೆ ಒಂದೇ ತಬ್ಬಿಯಲ್ಲಿ ಹಾಕುವುದು, ಇದು ಸರ್ವಥಾ ನ್ಯಾಯ ಸಮ್ಮತವಲ್ಲವೆಂದು ನಾನು ಹೇಳಬಯಸುತ್ತೇನೆ. ಏಕೆಂದರೆ, ಗ್ರಾಮೀಣ ಮಕ್ಕಳ ಪರಿಸ್ಥಿತಿ ತಮಗೂ ಗೊತ್ತಿದೆ; ಅಲ್ಲಿರುವ ರೈತ ಬೆಳಿಗ್ಗೆ ಎದ್ದು ಹೊಲಕ್ಕೆ ಹೋದರೆ ತಾಯಿಯಾದವಳು ಕೂಡ ಮನೆ ಕೆಲಸ ಮುಗಿಸಿಕೊಂಡು ಊಟ ತೆಗೆದುಕೊಂಡು ಹೊಲದ ಹತ್ತಿರ ಹೊಗುತ್ತಾಳೆ. ಈ ಮಕ್ಕಳು ಶಾಲೆಗೆ ಹೋಗಿ ಓದಿದರೆ, ಇದನ್ನೆಲ್ಲಾ ನೋಡಿಕೊಳ್ಳುವುದಕ್ಕೆ ಆ ತಂದೆ-ತಾಯಿಯವರು ವಿದ್ಯಾವಂತರಲ್ಲ. ಯಾವುದಾದರೂ ಒಂದು ಕುಟುಂಬದಲ್ಲಿ ಏನೋ ಸಾಲ ಮಾಡಿ ತನ್ನ ಮಗುವನ್ನು ಪಟ್ಟಣಕ್ಕೆ ಹೈಸ್ಕೂಲಿಗೆ ಕಳುಹಿಸಿದರೆ ಅವನು ಅಲ್ಲಿ ಸರಿಯಾಗಿ ಸ್ಕೂಲಿಗೆ ಹೋಗುತ್ತಾನೆಯೇ? ಬಿಡುತ್ತಾನೆಯೇ? ಎಂದು ನೋಡಿಕೊಳ್ಳುವುದಕ್ಕೆ ಅಥವಾ ಅವನಿಗೆ ಗೈಡ್ ಮಾಡಿ ನೀನು ಇಂಥ ವಿಷಯವನ್ನು ತೆಗೆದುಕೋ ಎಂದು ಹೇಳುವಂಥ ಸ್ಥಿತಿಯಲ್ಲಿ ಯಾರು ಇದ್ದಾರೆ? ನೀನು ಇಂಥಾದ್ದನ್ನು ಓದಿ ಚೆನ್ನಾಗಿ ಮುದುವರಿಯುವಂತವನಾಗು ಎಂದು ಹೇಳುವಂಥವರು ಮತ್ತು ಕೇಳುವಂಥವರು ಯಾರು ಈ ಬಡಪಾಯಿ ಮಕ್ಕಳಿಗೆ ಇರುವುದಿಲ್ಲ. ಕೆಲವು ಸಂದರ್ಭದಲ್ಲಿ ತಂದೆಯಾದವನು ತನ್ನ ಜಮೀನನ್ನು ಅಡವಿಟ್ಟು ಸಾಲ ಮಾಡಿ ಮಕ್ಕಳ ವಿದ್ಯಾಭ್ಯಾಸಕ್ಕೆಂದು ದುಡ್ಡು ಕಳುಹಿಸುತ್ತೇನೆ. ಅಪರೂಪಕ್ಕೆ ಒಬ್ಬ ಹುಡುಗ ಚೆನ್ನಾಗಿ ಓದಿ ಹೆಚ್ಚು ಅಂಕ ಗಳಿಸಿ ಜೀವನದಲ್ಲಿ ಮುಂದೆ ಬರುವುದಕ್ಕೆ ಪ್ರಯತ್ನಿಸುತ್ತಾನೆ. ಆದರೆ100ಕ್ಕೆ 99 ಹುಡುಗರಿಗೆ ಸರಿಯಾದ ಮಾರ್ಗದರ್ಶನವಿಲ್ಲದೆ, ಅನುಕೂಲ ಇಲ್ಲದೆ, ಹಣದ ಸೌಲಭ್ಯವಿಲ್ಲದೆ, ಅವರು ತಮ್ಮ ವಿದ್ಯಾಭ್ಯಾಸವನ್ನು ಸಮರ್ಪಕವಾಗಿ ಮಾಡದೇ, ಈಗಿರುವ ಪರೀಕ್ಷಾ ಪದ್ಧತಿಯಲ್ಲಿ ಅವರು ವಂಚಿತರಾಗುತ್ತಾರೆ.

ಪಟ್ಟಣ ಪ್ರದೇಶಗಳಲ್ಲಿ ಎಲ್ಲಾ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಓದುವ ಮಕ್ಕಳನ್ನು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸೌಲಭ್ಯವಂಚಿತರಾದ ಮಕ್ಕಳನ್ನು ಒಂದೇ ತಕ್ಕಡಿಯಲ್ಲಿ ಹಾಕಿರುವುದು ಖಂಡಿತವಾಗಿಯೂ ಕೂಡ ರೈತರ ಮಕ್ಕಳಿಗೆ ಹಾಗೂ ರೈತರಿಗೆ ಮಾಡಿದ ಘೋರವಾದ ಅಪರಾಧ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಎಲ್ಲರಿಗೂ ಒಂದೇ ರೀತಿಯ ನುರಿತ ಉಪಾಧ್ಯಾಯರಿಂದ ಪಾಠ ಮಾಡಿ,ದರೆ ಆಗ ಎಲ್ಲಾ ಮಕ್ಕಳು ಸರಿಸಮಾನರು ಆಗುತ್ತಾರೆ ಎಂಬುದನ್ನು ನಾನು ಒಪ್ಪುತ್ತೇನೆ. ಇದಕ್ಕೆ ರೈತರು ಕೂಡ ವಿರೋಧ ಮಾಡಲಾರರು ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಒಂದು ಕಡೆ ಆರ್ಥಿಕ ತೊಂದರೆ, ತರಬೇತಿ ಹೊಂದಿದ ಉಪಾಧ್ಯಾಯರಿಲ್ಲ, ಸರಿಯಾದ ಮಾರ್ಗದರ್ಶನವಿಲ್ಲ, ಆದರೆ ಪಟ್ಟಣದಲ್ಲಿ ಮೇಲ್ಕಾಣಿಸಿದ ಎಲ್ಲಾ ಅಂಶಗಳು ಲಭ್ಯವಿರುವ ಕಾರಣ ಇಬ್ಬರನ್ನು ಹೋಲಿಕೆ ಮಾಡುವುದು ಸರಿಯಲ್ಲ. ನಾನು ಅತ್ಯಂತ ವಿನಯದಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹಾಗೂ ಎಲ್ಲಾ ಸದಸ್ಯರುಗಳಲ್ಲಿ ಹೇಳುಕೊಳ್ಳುವುದೇನೆಂದರೆ, ತಲೆತಲಾಂತರಗಳಿಂದಲೂ ಅನ್ಯಾಯಕ್ಕೆ ಒಳಗಾಗಿರುವ ಈ ಜನಾಂಗಕ್ಕೆ ಇವರ ಕಾಲದಲ್ಲಿ ಈ ಒಂದು ಅವಕಾಶ ಕಲ್ಪಿಸಿಕೊಟ್ಟರೆ, ಕೊನೆಯಪಕ್ಷ ಒಂದಲ್ಲಾ ಒಂದು ಕಡೆ ಸಣ್ಣ-ಪುಟ್ಟ ನೌಕರಿ ತೆಗೆದುಕೊಂಡು ಜೀವನ ಮಾಡುವುದಕ್ಕೆ ಅನುಕೂಲ ಮಾಡಿಕೊಟ್ಟರೆ ಈ ಸರ್ಕಾರಕ್ಕೆ ನಾವು ಋಣಿಯಾಗಿರಬೇಕು ಎನ್ನುವ ಭಾವ ಆ ಮಕ್ಕಳಲ್ಲಿ ಬರುತ್ತದೆ. ಮತ್ತೊಂದು ಮುಖ್ಯವಾದ ವಿಚಾರ ತಮ್ಮಲ್ಲಿ ನಾನು ಹೇಳಬಯಸುವುದೇನೆಂದರೆ, ಮಾನ್ಯ ಅಧ್ಯಕ್ಷರೆ, ಬಹುಶಃ ತಮಗೆ ಗೊತ್ತಿರುವಂತೆ, ಹಿಂದೆ ಹಳ್ಳಿಗಾಡಿನ ಜನ 20, 30, ಎಕರೆ ಇಟ್ಟುಕೊಂಡು ಹೇಗೋ ಜೀವನ ಮಾಡುತ್ತಿದ್ದವರು ಒಂದು ದಿನ ಇದ್ದಕ್ಕಿದ್ದ ಹಾಗೆ ನಾವು ಒಳ್ಳೆಯವರು ಎನಿಸಿಕೊಳ್ಳಲು ಅದನ್ನು ದಾನ ಕೊಟ್ಟು ಬಿಟ್ಟರು. ನಿಮ್ಮ ಜಮೀನು ಇನ್ನು ಮೇಲೆ ಇಷ್ಟರ ಮೇಲೆ ಇರಬಾರದು ಎಂದು ಕಾನೂನು ತಕ್ಷಣ ಪಾಪ ಆ ಜನಗಳು, ಅಸಹಾಯಕ ಜನಗಳು, ಏನೋ ಮಾಡುತ್ತಾರೆ ಮತ್ತೊಬ್ಬರಿಗೆ ಅನುಕೂಲವಾಗುತ್ತದೆಂದು ದಾನ ಕೊಟ್ಟೇ ಬಿಟ್ಟರು. ಆಗ ಏನಾದರೂ ಇಂಥ ಕಾನೂನನ್ನು ತಂದಿದ್ದರೆ ಇದನ್ನು ಸೆಟ್ಲ್‌ಮೆಂಟ್ ಮಾಡುವುದಕ್ಕೆ ಬರುತ್ತಿದ್ದ ಅಧಿಕಾರಿಗಳ ಕತೆ ಏನಾಗುತ್ತಿತ್ತೋ ನನಗಂತೂ ಅರ್ಥವಾಗುತ್ತಿಲ್ಲ! 20-30 ವರ್ಷಗಳ ಹಿಂದೆ ರೈತರು ಸರಿಯಾಗಿ ಎಚ್ಚೆತ್ತುಕೊಂಡಿರಲಿಲ್ಲ. ಅವರ ಮಕ್ಕಳಿಗೆ ಸರಿಯಾದ ಜ್ಞಾನವಿರಲಿಲ್ಲ. ಅಂಥ ಸಂದರ್ಭದಲ್ಲಿ ನೀವು 10 ಎಕರೆ ಮೇಲೆ ಜಮೀನನ್ನು ಇಟ್ಟುಕೊಳ್ಳಬಾರದು ಎಂದು ಹೇಳಿದ್ದಕ್ಕೆ ಆಗ ರೈತರು ದಾನ ಮಾಡಿದರು, ಆಗ ನೀವು ಬಹಳ ದೊಡ್ಡತನದಲ್ಲಿ ನಿರ್ಣಯ ಕೈಗೊಂಡು ಇದಕ್ಕೊಂದು ಕಾನೂನು ತಂದು ಆ ಬಡಪಾಯಿ ರೈತನ ಜಮೀನು ನುಣ್ಣಗೆ ಹರಿದು ಹಂಚಿಬಿಟ್ಟಿರು. ಏಕೆಂದರೆ, ಅವರು ಹೆಚ್ಚು ಸ್ಥಿತಿವಂತರಾಗಬಾರದು, ಅವರು ಹೆಚ್ಚು ದುಡ್ಡನ್ನು ಸಂಪಾದನೆ ಮಾಡಬಾರದು, ಅವರ ಮಕ್ಕಳು ವಿದ್ಯಾವಂತರಾಗಬಾರದು, ಈ ದೃಷ್ಟಿಯಿಂದ ಮಾಡಿರಬೇಕೆಂದು ಕಾಣುತ್ತದೆ. ಆಗ ಎಲ್ಲರಿಗೂ ಜಮೀನು ಕೊಟ್ಟರು,

ಇದರಿಂದ ಎಲ್ಲರಿಗೂ ಜಮೀನು ಸಿಕ್ಕಿತು ಎನ್ನುವ ಸಂತೋಷವಾಯಿತು; ಈ ರೈತ ಯಾವತ್ತೂ ಕೂಡ ತನ್ನಿಂದ ಪರರಿಗೆ ಸಹಾಯ ಮಾಡುವುದರಲ್ಲಿ, ಬಹಳ ಮುಕ್ತಕಂಠದಿಂದ ದಾನ ಮಾಡಿದ ಆ ಮುಗ್ದ ಜನರು ದೊಡ್ಡವರು ಎನ್ನುವ ಮಾತನ್ನು ಹೇಳುತ್ತೇನೆ. ಆದರೆ, ಈ ನಗರ ಪ್ರದೇಶಗಳಲ್ಲಿ ಮಾತ್ರ ಟಾಟಾ, ಬಿರ್ಲಾ, ಇನ್ನು ಎಂಥೆಂಥವರೋ ಅವರ ಹೆಸರುಗಳೇ ನನಗೆ ಗೊತ್ತಾಗುವುದಿಲ್ಲ; ಇಂಥವರು ತಮಗೆ ಬೇಕಾದಷ್ಟು ಸಾವಿರ ಕೋಟಿಯಿಂದ ಹತ್ತು ಸಾವಿರ ಕೋಟಿಯವರೆಗೆ ನಿಮ್ಮಲ್ಲಿ ಹಣ ಇಟ್ಟುಕೊಂಡು ಹೋಗಬಹುದು. ಅವರಿಗೆ ನೂರಾರು ಕಾರುಗಳು ಇದ್ದರೂ ಪರವಾಗಿಲ್ಲ, ಆದರೆ ಅದೇ ಗ್ರಾಮೀಣ ಪ್ರದೇಶದಲ್ಲಿ ಒಬ್ಬ ರೈತನಿಗೆ 20 ಎಕರೆ ಜಮೀನು ಇದೆ ಎಂದರೆ ಇವರ ಕಣ್ಣು ಬೀಳುತ್ತದೆ. ಅವನು ಸ್ವಲ್ಪ ಭೂಮಿ ಇಟ್ಟುಕೊಂಡು ಕಷ್ಟಪಟ್ಟು ದುಡಿದು ಇತರರಂತೆ ತಾನು ಬಾಳಬೇಕು ಎಂದು ಇದ್ದರೆ ಇಂಥವರಿಗೆ ಸರಿಯಾದ ಅವಕಾಶ ಕೊಡದೆ ಇವರನ್ನು ವಂಚಿಸಿದರು. ಈ ರೀತಿ ಮಾಡಿದ್ದು ನ್ಯಾಯವೇ? ಮಾನ್ಯ ಚಂದ್ರೇಗೌಡರವರೆ, ನಾನು ಮಾನ್ಯ ಅಧ್ಯಕ್ಷರ ಮೂಲಕ ನಿಮಗೆ ಈ ಪ್ರಶ್ನೆ ಕೇಳುತ್ತೇನೆ. ಭಾರಿ ದೊಡ್ಡತನದಲ್ಲಿ ನಮ್ಮ ಜಮೀನನ್ನು ಹಂಚಿದಿರಲ್ಲಾ, ಇದು ನ್ಯಾಯವೇ? ನಿಮ್ಮ ಕಡೆ ಕೆಲವರು ಬಹಳ ಬುದ್ಧಿವಂತಿಕೆ ತೋರಿಸಿ, ಕೈಗಾರಿಕೆ ನಡೆಸುತ್ತೇವೆ, ಹಾಗೆ ಹೀಗೆ ಎಂದು ಹೇಳಿ ಅವರು ಉಳಿದುಕೊಂಡರು. ಆದರೆ ನಮ್ಮ ಕಡೆ ಇರುವ ಹೊಲ, ಗದ್ದೆ, ಎಲ್ಲಾ ನುಣ್ಣಗೆ ಹಂಚಿಬಿಟ್ಟಿರಿ. ಆಗ ತಾವು ಏನು ಹೇಳಿದರೆಂದರೆ, ಈ ದೇಶದಲ್ಲಿ ಇರುವ ಜಮೀನು ಎಲ್ಲರಿಗೂ ಸರಿಸಮಾನವಾಗಿ ಹಂಚಿಕೆಯಾಗಬೇಕು ಎಂದು ನಾನು ಇದನ್ನು ಒಪ್ಪುತ್ತೇನೆ, ಏಕೆಂದರೆ, ನಿರ್ಗತಿಕರಿಗೂ ಕೂಡ ಅಲ್ಪಸ್ವಲ್ಪ ಜಮೀನು ಸಿಗುತ್ತದೆಂದು ನಾನು ತಿಳಿದುಕೊಂಡಿದ್ದೆ. ಆದರೆ, ಪಟ್ಟಣ ಪ್ರದೇಶಗಳಲ್ಲಿ 15 ಮಹಡಿಯ ಮನೆ, 20, ಕಾರುಗಳು, 20 ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡವರಿಗೆ ನೀವು ಏನು ಮಾಡಿದಿರಿ? ರೈತರಿಗೆ ಮಾಡಿದ್ದು ಏಕೆ? ಅವರ ಬಗ್ಗೆ ಹೇಳುವವರು, ಕೇಳುವವರು ಯಾರು ಇಲ್ಲವೆಂದು ಮಾಡಿದಿರಾ? ಈ ದಿವಸ ಏನಾದರೂ ಈ ರೀತಿ ಮಾಡುವುದಕ್ಕೆ ಗ್ರಾಮೀಣ ಪ್ರದೇಶದಲ್ಲಿ ನೀವು ಬಂದಿದ್ದರೆ ಹಳ್ಳಿ ಜನ ನಿಮ್ಮನ್ನು ಏನು ಮಾಡುತ್ತಿದ್ದರೋ ಏನೋ? ಏಕೆ ಸ್ವಾಮಿ ನೀವು ಈಗ ಮಾಡುತ್ತಿಲ್ಲ? ಏಕೆ ನೀವು ಮಾತನಾಡುತ್ತಿಲ್ಲ? ಮಾನ್ಯ ಅಧ್ಯಕ್ಷರೆ, ಅವರಿಗೆ ಸ್ವಲ್ಪ ಮಾತನಾಡಿ ಎಂದು ಹೇಳಿ.... ಯಾರು ಮಾಡಿದ್ದು, ಮೇಲಿನವರು ಅಂದರೆ ಸ್ವರ್ಗದಿಂದ ಮಾಡಿದಿರಾ? ಯಾವ ಪಾರ್ಲಿಮೆಂಟು? ಯಾರು ಅಲ್ಲಿಗೆ ಹೋದವರು? ಪಾರ್ಲಿಮೆಂಟಿಗೆ ಹೋಗಿರುವವರು ಯಾರು? ನೀವು ವೋಟು ಕೊಟ್ಟಿಲ್ಲವೇ? ಏಕೆ ಮಾಡಿದ್ದೀರಿ? ಏಕೆ ಆಗಬಾರದು? ಹಳ್ಳಿ ಜಮೀನನ್ನು ನೀವು ಹಂಚಿಕೊಟ್ಟಹಾಗೆ, ಆಸ್ತಿ ಎಲ್ಲರಿಗೂ ಸೇರಬೇಕಾದುದು, ಹಂಚಿದಿರಿ, ನಾನು ಒಪ್ಪುತ್ತೇನೆ. ದೇಶದ ಹಣವೆಲ್ಲಾ ಕೆಲವರಲ್ಲೇ ಸೇರಿದರೆ, ಏಕೆ ಮಾಡಲಿಲ್ಲ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ನಿನ್ನೆ ಮಾನ್ಯ ಬಿ. ಸೋಮಶೇಖರ್‌ರವರು ಇದನ್ನು ಏಕೆ ತಂದಿರಿ? ನೀವು ಅಲ್ಲಿಯೇ ಮಾಡಿಕೊಂಡುಬಿಡಬಹುದೆಂದು ಹೇಳಿದರು. ನಾನು ನಿಮ್ಮಂಥವರು ಮಾತನಾಡಲಿ

ಎಂದೇ ಇದನ್ನು ತಂದಿದ್ದೇನೆ. ನಿಮ್ಮಂಥವರು ಮಾತನಾಡುವುದು ದೇಶಕ್ಕೆ, ಜನರಿಗೆ ಗೊತ್ತಾಗಬೇಕು. ಮಾತನಾಡಲಿ ಎಂದೇ ಈ ಕಾನೂನು ತಂದಿದ್ದು. ನೀವೇ ಕುಳಿತು ಮಾಡುವ ಪ್ರಸಂಗವಿದ್ದರೂ, ಚರ್ಚೆಗೆ ಅವಕಾಶವಿರಬೇಕೆಂಬ ಸದುದ್ದೇಶದಿಂದ ಬಿಲ್ ರೂಪದಲ್ಲಿ ಇದನ್ನು ತಂದಿದ್ದೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಅದೆಲ್ಲಾ ಬೇರೆ ಪ್ರಶ್ನೆ. 35 ಎಕರೆ ಜಮೀನಿದೆ. ನಿನಗೆ ಅರ್ಹತೆ ಇರುವುದು 20 ಎಕರೆಗೆ, 15 ಎಕರೆ ಕೊಡಬೇಕೆಂದು ಹೇಳಿದರೆ ಹೇಗೆ? ನೀವು ತೆಗೆದುಕೊಂಡ ಹೊಲಕ್ಕೆ 200 ರೂಪಾಯಿಗಳನ್ನು ಕೊಟ್ಟಿದ್ದೀರಿ. ತಾವೇನಾದರೂ ಕಾಫಿ ಕುಡಿಯಲು ಹೋಟೆಲ್‌ಗೆ ಹೋದರೆ, ಒಂದು ಲೋಟ ಕಾಫಿಗೆ ಕೊಡುವ ಬೆಲೆಯನ್ನು ಒಂದು ಎಕರೆ ಜಮೀನಿಗೆ ಕೊಟ್ಟಿರಿ. ಗದ್ದೆಗೆ 750 ರೂಪಾಯಿಗಳನ್ನು, ತೋಟಕ್ಕೆ 1,000, 1200 ರೂಪಾಯಿಗಳನ್ನು ಕೊಟ್ಟಿರಿ. ಈ ರೀತಿ ಥ್ರೋ ಅವೇ ಪ್ರೈಸ್ ಅಂದರೆ ಬೇಕಾಬಿಟ್ಟಿ ಬೆಲೆ ಕೊಟ್ಟು ಅವರನ್ನು ಸರ್ವನಾಶ ಮಾಡಿದ್ದೀರಿ. ಹೊಲ, ಗದ್ದೆ ಹಂಚಿದ್ದೀರಿ, ಸಂತೋಷ. ಬಡಬಗ್ಗರು ಬದುಕಿಕೊಳ್ಳಲಿ, ಟೌನ್‌ನಲ್ಲಿ 5, 10, 20 ಸಾವಿರ ಕೋಟಿ ರೂಪಾಯಿಗಳು ಇರುವ ಶ್ರೀಮಂತರಿಗೇಕೆ ಕಾನೂನನ್ನು ಅಪ್ಲೈ ಮಾಡಲಿಲ್ಲ? ಏಕೆ ನ್ಯಾಯ ದೊರಕಿಸಿಕೊಡಲಿಲ್ಲ? ಇವರ ಬಗ್ಗೆ ತಾವು ರಿಪ್ಲೈ ಕೊಡುವಾಗ, ಸಭೆಗೆ ತಿಳಿಸಬೇಕು.

ಶ್ರೀ ಕೆ. ಶ್ರೀನಿವಾಸಗೌಡ ಕುದುವನಹಳ್ಳಿ :— 100 ಎಂಎಲ್ ಸಾರಾಯಿಗೆ 7.50 ರೂಪಾಯಿಗಳು ಒಂದು ಲೀಟರ್ ಹಾಲಿಗೂ 7.50 ರೂಪಾಯಿಗಳು. ಇದ್ಯಾವ ನ್ಯಾಯ? ರೈತನ ಪರಿಸ್ಥಿತಿಯನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು :— ಇದೇ ರೀತಿ ಮಾತನಾಡುತ್ತಿದ್ದರೆ, ಸಮಯ ಸಾಕಾಗುವುದಿಲ್ಲ. ಇದಕ್ಕೆ ಅಲಾಟ್ ಮಾಡಿರುವುದು ಎರಡು ಗಂಟೆಗಳು.

ಶ್ರೀ ಕೆ.ಹೆಚ್. ಹನುಮೇಗೌಡ :— ಇನ್ನುಮೇಲೆ ನನಗೆ ಮಾತನಾಡಲು ಅವಕಾಶ ಕೊಡಲೇಬೇಡಿ. ನಾನು ರೈತರ ಮನೆಯಿಂದ ಬಂದವನು. ರೈತರು ವೋಟು ಕೊಟ್ಟು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾರೆ. ನಾನು ಹೇಳಬೇಕಾದುದನ್ನು ಹೇಳುತ್ತೇನೆ. ನಾನು ಕೈ ಮುಗಿದು ನಿಮ್ಮನ್ನು ಕೇಳುತ್ತೇನೆ, ಮಾತನಾಡಲು ಸಮಯ ಕೊಡಿ. ಸ್ವತಂತ್ರ್ಯ ಬಂದು ಇಷ್ಟು ವರ್ಷಗಳಾಯಿತು. ಪಟ್ಟಣ ಮತ್ತು ಹಳ್ಳಿಗೂ ಇರುವ ವ್ಯತ್ಯಾಸವೇನು? ಉತ್ಪತ್ತಿಯಲ್ಲಿ ಎಷ್ಟು ಭಾಗವನ್ನು ಟೌನ್‌ನ ಸಿವಿಕ್ ಅಮಿನಿಟೀಸ್ ಖರ್ಚು ಮಾಡುತ್ತಿದ್ದೀರಿ? ಎಷ್ಟು ಹಣವನ್ನು ಗ್ರಾಮಾಂತರ ಪ್ರದೇಶಕ್ಕೆ ಖರ್ಚು ಮಾಡುತ್ತಿದ್ದೀರಿ? ಕೆಲವು ಅಲ್ಪ ಸ್ವಲ್ಪ ಹಳ್ಳಿಗಳಲ್ಲಿ ಕೆಲಸವಾಗಿದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಅದು ಹೊರದೇಶದಿಂದ ತಂದ ಹಣ, ಹೇಗೋ ಖರ್ಚು ಮಾಡುತ್ತಿದ್ದೀರಿ. ಆದರೆ, ನಗರದಲ್ಲಿ ಆಗುವ

ಅನುಕೂಲಗಳನ್ನು ಹಳ್ಳಿಗಳಿಗೂ ಕೊಟ್ಟಿದ್ದೀರಾ? ಅದನ್ನು ಅಲ್ಲಿಗೂ ಎಕ್ಸ್‌ಟೆಂಡ್ ಮಾಡಿದ್ದೀರಾ? ಇದರ ಬಗ್ಗೆ ದಯವಿಟ್ಟು ಯೋಚಿಸಿ, ಯಾರು ಆ ದೇಶಕ್ಕೋಸ್ಕರ ದುಡಿಯುತ್ತಾರೆಯೋ, ದೇಶದ ಸಂಪತ್ತನ್ನು ಹೆಚ್ಚಿಸುತ್ತಾರೆಯೋ, ಅವರಿಗೆ ದೇಶದ ಉತ್ಪತ್ತಿಯಲ್ಲಿ ಶೇ.5-10ರಷ್ಟು ಇಡುತ್ತೀರಿ. ಟೌನ್‌ಗೆ ಎಷ್ಟಿಡುತ್ತೀರಿ? ನಾವು, ನೀವು ಇರುವ ಜಾಗವೆಂದು ಅಷ್ಟು ಕೊಡುತ್ತೀರಾ? ಅವರೂ ಬೇರೆಯವರ ಹಾಗೆ ಬಾಳಬೇಡವೇ? ನೀವು ಹಳ್ಳಿಗರಿಗಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ ಎಂಬ ಬಗ್ಗೆ ಸಭೆಗೆ ತಿಳಿಸಬೇಕು. ರೈತರ ಪರಿಸ್ಥಿತಿ ಏನಾಗಿದೆ? ಗಾರಿ, ಭತ್ತವನ್ನು ಬೆಳೆದರೆ ಅದಕ್ಕೂ ರಿಸ್ಟ್ರಿಕ್ಷನ್ ಇದೆ. ಅಷ್ಟು ಕೊಡಬೇಕೆಂದಬ ಕಡ್ಡಾಯವಿದೆ. ನೀವು ಲೆವಿ ಹಾಕುತ್ತೀರಲ್ಲಾ, ಹಳ್ಳಿ ಜನರು ಪುಣ್ಯ ಕಟ್ಟಿಕೊಳ್ಳಲಿ ಎಂದೇ? ಅವನು ಖರ್ಚು ಮಾಡಿರುವ ಹಣ ಎಷ್ಟು? ಅವನ ಸಂಸಾರದ ಗತಿ ಏನು? ಅವನು ಸಾಲ ಹೇಗೆ ತೀರಿಸಬೇಕು? ಲೆಕ್ಕ ಹಾಕಿ ಹೇಳುತ್ತಿರೋ, ನಿಮ್ಮ ಲೇವೆಲ್‌ನಲ್ಲಿ ನೀವು ಲೆವಿ ಹಾಕುತ್ತೀರೋ? ಬೇರೆಯವರು ಇನ್‌ಕಂ ಟ್ಯಾಕ್ಸ್ ಕೊಡುತ್ತಾರೆಂದು ನೀವು ಹೇಳಬಹುದು. ಅದಕ್ಕೂ, ಇದಕ್ಕೂ ಅರ್ಥವಿಲ್ಲ. ಅವನು ಹೊಟ್ಟೆಗಿರಲಿ, ಇಲ್ಲದಿರಲಿ ನೀವು ಇಷ್ಟೆಂದು ಫಿಕ್ಸ್ ಮಾಡಿದರೆ, ಕೊಡಬೇಕಲ್ಲವೆ? ಹೋಗಲಿ, ರೇಟ್‌ನ್ನು ಕರೆಕ್ಟಾಗಿ ಕೊಡುತ್ತೀರಾ? ಮಾನ್ಯ ಸದಸ್ಯರು ಹೇಳಿದಹಾಗೆ, ಒಂದು ಲೀಟರ್ ಹೊಳೆ ನೀರಿಗೆ 12-13 ರೂಪಾಯಿಗಲಿದೆ. ಆದರೆ, ಒಬ್ಬ ರೈತ ಎಮ್ಮೆ, ಹಸು ತಂದು ಸಾಕಿ ಎಲ್ಲಾ ಮಾಡಿದರೆ, ಒಂದು ಲೀಟರ್ ಹಾಲಿಗೆ 7.50 . . . . . . ರೂಪಾಯಿಗಳು ಮಾತ್ರ. 1973ನೇ ಇಸವಿಯಲ್ಲಿ ನಾನು ಕರ್ನಾಟಕ ಮಿಲ್ಕ್ ಮಾರ್ಕೆಟಿಂಗ್ ಫೆಡರೇಷನ್‌ಗೆ ಡೈರೆಕ್ಟರ್ ಆಗಿದ್ದು, ಸಭೆಯಲ್ಲಿ ಹಾಲಿನ ದರವನ್ನು ಜಾಸ್ತಿ ಮಾಡಬೇಕೆಂದು ಪ್ರಸ್ತಾಪ ಬಂದು, ಸಮಿತಿಯವರು ಇಂಥಿಂಥವರು ಹಾಲಿನ ದರ ಎಷ್ಟು ಇರಬೇಕೆಂದು ಗೊತ್ತುಪಡಿಸಬೇಕೆಂದು ಹೇಳಿದರು. ಮುಂದಿನ ಸಭೆಗೆ ಒಬ್ಬ ಅಧಿಕಾರಿ ಬಂದು, ಒಂದು ಲೀಟರ್ ಹಾಲಿಗೆ 52 ಪೈಸೆ ಹೆಚ್ಚಿಸಬಹುದೆಂದು ವರದಿ ಸಲ್ಲಿಸಿದ. ಆಗ ಮಾನ್ಯ ಚೌಡರೆಡ್ಡಿ ಇದ್ದರು. ಮಾನ್ಯ ಚಿಮ್ಮನಕಟ್ಟಿಯರರು ಆಗ ಅನಿಮಲ್ ಹಸ್ಬೆಂಡ್ರಿ ಮಂತ್ರಿಯಾಗಿದ್ದರು. ಆ ಸಭೆಯಲ್ಲಿ ಅವರು ಇರಲಿಲ್ಲ. ನಾನು ಆ ಅಧಿಕಾರಿಯನ್ನು ಅದು ಹೇಗೆಂದು ಕೇಳಿದೆ, ಅದಕ್ಕೆ ಅವನು, ಹನುಮೇಗೌಡರೆ, ಸಾಲ ಕೊಡೋದು, ಎಮ್ಮೆ ತರೋದ್ದು ಎಂದು ಹೇಳಿದ. ಎಮ್ಮೆ ಅಥವಾ ಹಸು ಸಾಕುವವರು ಯಾರೆಂದು ಕೇಳಿದ್ದಕ್ಕೆ, ರೈತರ ಮನೆಯಲ್ಲಿ 4-5 ಮಕ್ಕಳಿರುತ್ತಾರೆ ಎಂದ. ಕಸ ತೆಗೆಯುವವರು ಯಾರೆಂದು ಕೇಳಿದ್ದಕ್ಕೆ, ಬೆಳಿಗ್ಗೆ, ರೊಟ್ಟಿ ಹಾಕಿಕೊಟ್ಟರೆ ರೈತ ಹೊಲಕ್ಕೆ ಹೋಗುತ್ತಾನೆ, ಅವನ ಹೆಂಡತಿ ಕಸ ತೆಗೆಯುತ್ತಾಳೆಂದ. ದುಡ್ಡಿನ ಬಗ್ಗೆ ಕೇಳಿದ್ದಕ್ಕೆ, ರೈತರ ಮನೆಗೇಕೆ ದುಡ್ಡೆಂಡ. ಹುಲ್ಲಿನ ಬಗ್ಗೆ ಕೇಳಿದ್ದಕ್ಕೆ, ಬೋರೆಯಲ್ಲಿ ಗೋಮಾಳವಿದೆ, ಮೇಯಿಸುತ್ತಾರೆಂದ. ಮೇಯಿಸುವವರಾರು ಎಂದಿದ್ದಕ್ಕೆ, ಯಾರೋ ಒಬ್ಬ ಹಿಡಿದುಕೊಂಡು ಹೋಗಿ ಮೇಯಿಸುತ್ತಾನೆಂದ. ದುಡ್ಡಿನ ಬಗ್ಗೆ ಕೇಳಿದರೆ, ಅದಕ್ಕೇಕೆ ದುಡ್ಡು ಎಂದ. ಸಾಯಂಕಾಲ ಕಟ್ಟಿ ಹಾಕುವುದು, ಹಾಲು ಕರೆಯುವುದೆಂದ.

ಮಾನ್ಯ ಅಧ್ಯಕ್ಷರೆ, ನನ್ನ ಬಗ್ಗೆ ನೀವು ತಪ್ಪು ತಿಳಿದುಕೊಳ್ಳಬೇಡಿ, ನಾನು ಅವನಿಗೆ ಹೇಳಿದೆ, ಈ ಮಾತನ್ನೇನಾದರೂ ನೀನು ಹೊರಗಡೆ ಹೇಳಿದ್ದರೆ, ನಿನ್ನ ಕೈಕಟ್ಟಿ, ಕಾಲು ಮುರಿದು ನಾನು ಪೊಲೀಸರಿಗೆ ಶರಣಾಗಿ ಬಿಡುತ್ತಿದ್ದೆ ಎಂದೆ. ರೈತರು, ರೈತರು ಉತ್ಪಾದಿಸುವ ಉತ್ಪನ್ನದ ಬಗ್ಗೆ ಎಷ್ಟರ ಮಟ್ಟಿಗೆ ಜ್ಞಾನವಿದೆ ನಿನಗೆ ಎಂದು ಹೇಳಿ ಗಲಾಟೆ ಮಾಡಿದ ಮೇಲೆ ಒಂದು ಲೀಟರ್ ಹಾಲಿಗೆ 5-6 ರೂಪಾಯಿಗಳನ್ನು ನಿಗದಿಪಡಿಸಲಾಯಿತು. ಹೀಗೆ, ಕನಿಷ್ಠ ರೈತರ ಬಗ್ಗೆ ವಿಚಾರ ಗೊತ್ತಿಲ್ಲದಿದ್ದರೂ ಸಹ, ದರ ನಿಗದಿಪಡಿಸುತ್ತಾರೆ.

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :— ತಾವು ಸಿಟ್ಟಾಗದೇ ಕುಳಿತರೆ ಒಂದು ಮಾತನ್ನು ಹೇಳುತ್ತೇನೆ. ಸುಮ್ಮಸುಮ್ಮನೆ ಸಿಟ್ಟಾದರೆ ನಮಗೆ ಕಷ್ಟವಾಗತ್ತದೆ. ನಿಮ್ಮ ಸ್ನೇಹಿತರು ಎಷ್ಟು ನಿಮ್ಮ ಬಗ್ಗೆ ಕಾಳಜಿಯಿಂದಿದ್ದಾರೆಯೋ, ನಾವು ನಿಮ್ಮ ಬಗ್ಗೆ ಅಷ್ಟೇ ಕಾಳಜಿಯಿಂದಿದ್ದೇವೆ. 1950ನೇ ಇಸವಿಗೂ ಹಿಂದೆ, ರಾಜ್ ಗೋಪಾಲಚಾರಿಯವರು, ಯಾರ್ಯಾರು ಯಾವ್ಯಾವ ಕಸುಬು ಮಾಡುತ್ತಾರೆ, ಅತನೇ ವಿದ್ಯಾಕ್ಷೇತ್ರದಲ್ಲೂ ಕೆಲಸ ಮಾಡಬೇಕು, ಪಾಠ ಹೇಳಬೇಕೆಂದು ಬಿಲ್ ತಂದರು. ಆಗಲೇ ಅವರನ್ನು ತೆಗೆದುಹಾಕಿದರು. ನಂತರ, ಕಾಮ್‌ರಾಜ್ ಬಂದರು. ಆದಕ್ಕೇನು ಹೇಳುತ್ತೀರಿ? ಕೊಂದು ಹಾಕುತ್ತೇನೆಂದು ಹೇಳುತ್ತೀರಿ. ಈಗ ನಿಮ್ಮ ಕೈಯಲ್ಲೀಗುತ್ತದೆಯೇ?

ಶ್ರೀ ಕೆ.ಹೆಚ್. ಹನುಮೇಗೌಡ :— ಏನೋ ಇವರು ಆರ್ಗನೈಜ್ ಆಗಿಲ್ಲ. ಇನ್ನೂ 10 ವರ್ಷಗಳಿಗಾದರೂ..

ಶ್ರೀ ಕೆ.ಹೆಚ್. ರಂಗನಾಥ್ :— ಇವತ್ತಿನ ಬಗ್ಗೆ ಹೇಳಿ. Tomorrow has not yet born. Yesterday has gone. ನಾಳೆ ಏನಾಗುತ್ತದೋ?

ಶ್ರೀ ಕೆ.ಹೆಚ್ ಹನುಮೇಗೌಡ :— ನಾನು ಒಪ್ಪಿಕೊಳ್ಳುತ್ತೇನೆ. ಇವತ್ತಿನ ಸನ್ನಿವೇಶ ನೋಡಿಯೇ ನಾಳೆ ಪರಿಣಾಮವಾಗುವುದು. ಫ್ರೆಂಚ್ ರೆವಲ್ಯೂಷನ್ ಬಗ್ಗೆ ತಾವು ಓದಿ. 150-200 ವರ್ಷಗಳು ರಾಜ ಮನೆತನದವರು ಮಾಡಿರುವ ದ್ರೋಹ, ಅನ್ಯಾಯಗಳನ್ನು ನೋಡಿ ಒಂದು ದಿನ ಫ್ರೆಂಚ್ ಕ್ರಾಂತಿಯಾಯಿತು. ಆ ಜನರ ಸಿಟ್ಟು ಯಾವ ರೀತಿ ಇತ್ತೆಂದರೆ, ಒಂದು ಕಡೆಯಿಂದ ಎಲ್ಲರನ್ನು ಗಿಲೋಟಿನ್‌ಗೆ ಹಾಕಿದರು.

ಶ್ರೀ ಕೆ.ಹೆಚ್. ರಂಗನಾಥ್ :— ಫ್ರೆಂಚ್ ರೆವಲ್ಯೂಷನ್ ಅಂತ ಹೇಳಿದರೆ ಇದೇನು ಫ್ರಾನ್ಸೇ? ದೇವರು ಹನುಮೇಗೌಡರಿಗೆ ಅದನ್ನು ಕೊಟ್ಟಿದ್ದಾನೆ, ನಮಗೆ ಇದನ್ನು ಕೊಟ್ಟಿದ್ದಾನೆ.

11.00 ಎ.ಎಂ.

ಶ್ರೀ ಕೆ.ಹೆಚ್. ಹನುಮೇಗೌಡ :— ಫ್ರಾನ್ಸ್‌ನ 14ನೇ ಲೂಯಿ ತನ್ನ ಅರಮನೆಯಲ್ಲಿರಬೇಕಾದರೆ, ಫ್ರಾನ್ಸಿನ ಜನರು ಊಟಕ್ಕಾಗಿ ಅರಮನೆಗೆ ಬಂದಾಗ ರಾಣಿ ಜನರು ಏತಕ್ಕೆ ಅರಮನೆಗೆ ಬಂದಿದ್ದಾರೆಂದು ಕೇಳಿದಾಗ, ಜನರಿಗೆ ತಿನ್ನಲು ಬ್ರೆಡ್

ಇಲ್ಲವೆಂದು ಇಲ್ಲಿಗೆ . ಬಂದಿದ್ದಾರೆ ಎಂದು ಹೇಳಲಾಯಿತು. ಆಗ ರಾಣಿ ಬ್ರೆಡ್ ಇಲ್ಲದಿದ್ದರೇನಂತೆ, ಕೇಕ್, ಬಿಸ್ಕತ್ ತಿನ್ನಲಿ ಎಂದು ಹೇಳಿದಳಂತೆ, ಆ ರೀತಿಯ ಪರಿಸ್ಥಿತಿ ಬಂದು ಅವರೆಲ್ಲರನ್ನು ಆಹುತಿ ತೆಗೆದುಕೊಂಡಿತು. ಇಂತಹ ಕೆಟ್ಟ ಪರಿಸ್ಥಿತಿ ಈ ದೇಶಕ್ಕೆ ಬರಬಾರದು, ಯಾರು ಅಸಹಾಯಕರೋ, ಯಾರು ಅಸಂಘಟಿತರೋ ಯಾರು ಈ ದೇಶಕ್ಕಾಗಿ ಹಗಲು ರಾತ್ರಿ ದುಡಿಯುತ್ತಿದ್ದಾರೋ ಅವರಿಗೆ ನ್ಯಾಯ ಒದಗಿಸಿ ಕೊಡಬೇಕೆಂದು ನಾನು ಹೇಳಬಯಸುತ್ತೇನೆ. ರೈತರ ಸ್ಥಿತಿಗತಿಗಳ ಬಗ್ಗೆ ಹೇಳಿದರೆ ತಪ್ಪು ತಿಳಿಯಬಾರದು. ಬರ ಬಂದರೆ, ರೈತರು ಸತ್ತರೆ ದೇಶಕ್ಕೆ ಬೆಳೆ ಬೆಳೆಯುವವರಿಲ್ಲ ಹೀಗೆ ಸ್ವಲ್ಪ ಗ್ರಾಂಟ್‌ನ್ನು ಸಾಮಾಜಿಕ ನ್ಯಾಯವೆಂದು 500, 1000, ಒಂದು ಲಕ್ಷ ಸರ್ಕಾರದವರು ಕೂಲಿ ಕೊಟ್ಟಹಾಗೆ ಕೊಡುತ್ತಾರೆ; ರೈತ ಹಾಗೂ ಅವನ ಮಕ್ಕಳೆಲ್ಲಾ ಹೋಗಿ ಮಣ್ಣನ್ನು ಹೊರಬೇಕು. ಇಲ್ಲಿಯಾವುದಾದರೂ ಕಾರ್ಖಾನೆಯಲ್ಲಿ ಅಪಘಾತವಾದರೆ ನೌಕರನಿಗೆ ವಿಮೆ ಇತ್ಯಾದಿ ಸೌಲಭ್ಯಗಳನ್ನು ಕೊಟ್ಟು ಅವನಿಗೆ ಪುನರ್ವಸತಿ ಮಾಡುತ್ತೀರಿ, ಆದರೆ ರೈತನಿಗೆ ಕೂಲಿ ಕೊಡಲಾಗುತ್ತದೆ ಅಷ್ಟೆ ಕೃಷಿ ಬೆಲೆ ಕುಸಿತದಿಂದ ಎಷ್ಟೋ ಜನ ರೈತರು ತಮ್ಮ ಪ್ರಾಣವನ್ನು ಕಳೆದುಕೊಳ್ಳುವಂತಹ ದಾರುಣ ದೃಶ್ಯವನ್ನು ನಾವು ನೋಡುತ್ತಿದ್ದೇವೆ. ನಮ್ಮ ಕಡೆ ನೆಲಗಡಲೆ ಬೆಳೆ ಹಾಕಿದ್ದ ಎರಡು ಜನ ರೈತರು ವಿಷ ಸೇವಿಸಿ ಸತ್ತು ಹೋದರು. ಅಧಿಕಾರಿಗಳು ಬೆಳಿಗ್ಗೆ 10 ಗಂಟೆಗೆ ಬಂದು ಸಂಜೆ 5.30ಕ್ಕೆ ಹೊರಟು ಹೋಗುತ್ತಾರೆ, ಆದರೆ ಈ ರೈತನಿಗೆ ಯಾವುದೇ ನಿಗಧಿತ ಸಮಯವಿಲ್ಲ, ರೈತ ಹಾಗೂ ಅತನ ಹೆಂಡತಿ ಬೆಳಿಗ್ಗೆ 5 ಗಂಟೆಗೆ ಎದ್ದರೆ ರಾತ್ರಿ 11 ಗಂಟೆಯವರೆವಿಗೂ ಅವರಿಗೆ ದುಡಿಮೆ, ಅವರು ಪಡುವ ಶ್ರಮವೆಷ್ಟು? ಅವರಿಗಿರುವ ಮಾನಸಿಕ ಒತ್ತಡವೆಷ್ಟು? ಇಷ್ಟೆಲ್ಲಾ ಕಟಪಟ್ಟು ಈ ದೇಶಕ್ಕಾಗಿ ಅವರು ಅನ್ನವನ್ನು ಬೆಳೆಯುತ್ತಾರೆ. ಅನ್ನವೆಲ್ಲಾ ಹೆಚ್ಚಾಗಿದೆ ಎಂದು ಹೇಳುತ್ತಾರೆ; ಈ ನಗರ ಪ್ರದೇಶದಲ್ಲಿ ಅನ್ನ, ಸಾರು, ಮಜ್ಜಿಗೆ, ಮೊಸರು ಇವೆಲ್ಲವನ್ನು ಏನು ಜನರು ಊಟ ಮಾಡುತ್ತಾರೆ, ಆ ವ್ಯವಸ್ಥೆ ಆ ರೈತರಿಗೆ ಇದೆಯೇ? ಇದ್ದರೆ ಒಂದಿಷ್ಟು ಗಾತ್ರ ಮುದ್ದೆ ಇಲ್ಲದಿದ್ದರೆ ಒಂದೆರಡು ರೊಟ್ಟಿ, ಚಟ್ನಿ ಅದು ಇಲ್ಲದೇ ಇದ್ದರೆ ಬರೀ ಈರುಳ್ಳಿ ತಿನ್ನಬೇಕು. ಇದನ್ನೆಲ್ಲಾ ಲೆಕ್ಕ ಹಾಕಿ ದೇಶದಲ್ಲಿ ಅನ್ನ ಹೆಚ್ಚಾಗಿದೆ ಎಂದು ಹೇಳುತ್ತೀರಿ, ನೀವು ಊಟ ಮಾಡಿದಂತಹ ವ್ಯವಸ್ಥೆ ಅವರಿಗಿದೆಯೇ? ಯಾವ ವಿಧದಲ್ಲಿ ಸಾಮಾಜಿಕ ನ್ಯಾಯವನ್ನು ಹಳ್ಳಿಯವರಿಗೆ, ರೈತರಿಗೆ ಕೊಡಲಾಗಿದೆ? ಬರಗಾಲ ಬಂದರೆ ಹಣ ಕೊಟ್ಟು ಕೂಲಿ ಮಾಡಿ ಎಂದು ಹೇಳುತ್ತೀರಿ, ಅವರು ಮಣ್ಣು ಹೊತ್ತ ತಮ್ಮ ಜೀವನವನ್ನು ನಡೆಸಬೇಕು; ಕೃಷಿ ಬೆಲೆ ಜಾಸ್ತಿಯಾದರೆ, ಸರ್ಕಾರ ಬೆಲೆ ನಿಗದಿ ಮಾಡಿ ಇಷ್ಟು ಬೆಲೆಯ ಮೇಲೆ ಮಾರಾಟ ಮಾಡಬಾರದೆಂದು ಹೇಳಲಾಗುತ್ತದೆ, ಕಷ್ಟಬಿದ್ದು ರಾಗಿ, ಭತ್ತ ಬೆಳೆದರೆ ಲೆವಿ ಹಾಕಲಾಗುತ್ತದೆ, ರೈತನ ಮಕ್ಕಳಿಗೆ ಉದ್ಯೋಗ ಕೊಡಬೇಕೆಂದರೆ ಸಂವಿಧಾನದ ಬಗ್ಗೆ ಹೇಳಲಾಗುತ್ತದೆ. ತಲೆತಲಾಂತರಗಳಿಂದ ನೊಂದ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಡಾ: ಅಂಬೇಡ್ಕರ್ ರವರಿಂದ ರಕ್ಷಣೆ ಸಿಕ್ಕಿತು, ನಾವು ರೈತರ ಪರವಾಗಿದ್ದೇವಲ್ಲಾ, ಈ ಸಂವಿಧಾನ ರಚನೆ

ಮಾಡುವಾಗ ರೈತರ ಮಕ್ಕಳ ಬಗ್ಗೆ ಬರೆದವರು ಏತಕ್ಕೆ ಯೋಚನೆ ಮಾಡಲಿಲ್ಲ? ಅದೇ ಒಬ್ಬ ರೈತನ ಮಗ, ಶೆಡ್‌ನಲ್ಲಿ ಹುಟ್ಟಿದ ಮಗ ಅಲ್ಲಿದಿದ್ದರೆ ಆ ಸ್ವಾಮಿಗಳಿಗೆ ಸ್ವಾಮಿ ಸ್ವಲ್ಪ ನಿಲ್ಲಿಸಿ ನಿಮ್ಮದೇ ಅಲ್ಲ, ನಮ್ಮದೂ ಇದೆ ಎಂದು ಕೇಳುತ್ತಿದ್ದ. ಅದನ್ನು ಏತಕ್ಕೆ ಮಾಡಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ :— ನಿಮ್ಮ ಜಿಲ್ಲೆಯಿಂದಲೇ ರೈತರ ಮಗ ಬರೆಯುವಂತಹ ಆ ಸ್ಥಳಕ್ಕೆ ಹೋಗಿ ಬಂದಿದ್ದಾರೆ, ಅದನ್ನು ಕಾಣುವಂತಹ ಭಾಗ್ಯ ನಿಮಗೆ ಬಂದಿದೆಯಲ್ಲ?

ಶ್ರೀ ಕೆ.ಹೆಚ್. ಹನುಮೇಗೌಡ :— ನಿಮಗೆ ಆ ಸ್ವಾಮಿಯ ವಿಚಾರವನ್ನು ಎತ್ತಿ ಬಿಪಿ (Blood Pressure) ಹೆಚ್ಚಾಗುವಂತೆ ಮಾಡಬೇಡಿ, ಸಮಯ ಬಂದಾಗ ಆ ವಿಚಾರ ಮಾತನಾಡುತ್ತೇನೆ. ಎಲ್ಲಾ ವಿಧದಲ್ಲೂ ಈ ಹಳ್ಳಿಯ ರೈತನಿಗೆ ಸಮಾಜದಲ್ಲಿ, ಸರ್ಕಾರದಲ್ಲಿ ಅನ್ಯಾಯವಾಗಿದೆ, ಇವರಿಗೆ ಈಗಲಾದರೂ ನ್ಯಾಯ ದೊರೆಯಬೇಕು. ಕೊನೆಯ ಪಕ್ಷ ರೈತರ ಮಕ್ಕಳಿಗೆ ಅನುಕೂಲವಾಗುವಂತಹ ಬಿಲ್ ಅನ್ನು ಮಾನ್ಯ ಕಾನೂನು ಮಂತ್ರಿಗಳು ಹಾಗೂ ಸರ್ಕಾರದವರು ನಮ್ಮ ಮುಂದಿಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ ನಿಮ್ಮ ಮುಖಾಂತರ ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ, ಸಾಮಾಜಿಕ ನ್ಯಾಯ ಕೊಡುವವರು, ಬಹಳ ಕಷ್ಟದಿಂದ ಬಂದು ಕೆಲವು ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ, ಇವರ ಪುಣ್ಯವೋ ಅಥವಾ ಯಾರ ಪುಣ್ಯವೋ ಕಾಣೆ ಕಳೆದ ಎರಡು ವರ್ಷಗಳಿಂದ ರಾಜ್ಯದಲ್ಲಿ ಮಳೆಯಾಗಿ ಎಲ್ಲಿ ನೋಡಿದರೂ ಕೆರೆಕಟ್ಟೆಗಳೆಲ್ಲಾ ತುಂಬಿವೆ, ಎಲ್ಲಿ ನೋಡಿದರೂ, ಹಸಿರು, ಚೆನ್ನಾಗಿ ಬೆಳೆ ಬಂದಿದೆ. ಎಲ್ಲಕ್ಕಿಂತ ಹೆಚ್ಚಾಗಿ ದನ ಕರುಗಳು ಹೊಟ್ಟೆತುಂಬಾ ಹುಲ್ಲು ತಿಂದು, ಆನಂದದಿಂದ ಹೋಗುತ್ತಿರುವುದನ್ನು ನೋಡಿ ರೈತರಿಗೆ ಬಹಳ ಸಂತೋಷವಾಗುತ್ತಿದೆ; ಹಾಗೆ ನಮ್ಮ ಸಂಸ್ಕೃತಿ ಪ್ರಾರಂಭವಾದುದ್ದೇ ಗೋರಕ್ಷಣೆಯಿಂದ. ನಮ್ಮ ಮಾನ್ಯ ಬೈರೇಗೌಡರರು ಮತ್ತು ಅವರ ಕಂಪನಿಯವರು, ನಮ್ಮ ಆಳ್ವಿಕೆಯ ಕಾಲ ಆ 11 ವರ್ಷಗಳಲ್ಲಿ ಐದು ವರ್ಷ ಕ್ಷಾಮ ಬಂದಿತ್ತು ಎಂದು ಹೇಳುತ್ತಾರೆ, ಅಂತೂ ಎರಡು ವರ್ಷಗಳಿಂದ ರಾಜ್ಯ ಸುಭಿಕ್ಷವಾಗಿದೆ, ದೇವರು ಆಶೀರ್ವಾದ ಮಾಡಿದ್ದಾನೆ. ನಾವು ರೈತರು ಶೇಕಡ 80 ರಷ್ಟು ಈ ರಾಜ್ಯದಲ್ಲಿ ಇದ್ದೇವೆ, ಕೊನೆಯಪಕ್ಷ ಶೇಕಡ 70 ರಷ್ಟು ಮೀಸಲಾತಿಯನ್ನು ಕೊಟ್ಟು, ಈ ದೇಶದ ರೈತರ ಮಕ್ಕಳು ನಗರದವರಂತೆ ಚೆನ್ನಾಗಿ ಗೌರವದಿಂದ ಬಾಳಿ ಬದುಕುವುದಕ್ಕೆ ಅವಕಾಶವನ್ನು ಕೊಟ್ಟು, ಈ ದೇಶದಲ್ಲಿ ನೀವು ಕೀರ್ತಿಶಾಲಿಗಳಾಗಿ, ನಿಮ್ಮ ಹೆಸರುಗಳು ಚರಿತ್ರೆಯಲ್ಲಿ ಉಲ್ಲೇಖವಾಗಲಿ; ನಮ್ಮ ಮುಂದಿನ ಪೀಳಿಗೆಯವರು ಅದನ್ನು ಒಪ್ಪಿಕೊಂಡು, ಅಯ್ಯೋ ಪಾಪ, ಇದನ್ನೆಲ್ಲಾ ಮಾಡಿಕೊಟ್ಟಿದ್ದಾರೆ, ಆ ದೇವರು ಅವರಿಗೆ, ಅವರ ವಂಶಕ್ಕೆ ಒಳ್ಳೆಯದನ್ನು ಮಾಡಲಿ, ಅವರು ಯಾವುದಾದರೂ ಲೋಕದಲ್ಲಿದ್ದರೆ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಜನರು ಕೇಳಿಕೊಳ್ಳುತ್ತಾರೆ. ಮಾನ್ಯ ರಂಗನಾಥ್‌ರವರೇ, ನಾವಂತೂ ಈ ಸಾರಿ ಸುಮ್ಮನೆ ಇರುವುದಿಲ್ಲ, ನಮಗೂ ನೀವು ಮಾಡುತ್ತಿರುವುದನ್ನು ನೋಡಿ, ನೋಡಿ ಸಾಕಾಗಿದೆ, ಈಗಲಾದರೂ ನಮಗೊಂದು ಅವಕಾಶ ಬೇಡವೇ?

ಶ್ರೀ ಕೆ.ಹೆಚ್ ರಂಗನಾಥ್ (ಮಾನ್ಯ ಅರಣ್ಯ ಸಚಿವರು) :— ಮಾನ್ಯ ಹನುಮೇಗೌಡರೆ, ನೀವು ಮೊನ್ನೆ ಮೊನ್ನೆಯವರೆಗೂ ನಮ್ಮ ಹತ್ತಿರವೇ ಇದ್ದರಲ್ಲಾ?

ಶ್ರೀ ಕೆ.ಹೆಚ್. ಹನುಮೇಗೌಡ :— ನಾವು ಇರುವ ಕಡೆಯೇ ಸರಿಯಾಗಿ ಪಾರ್ಟ್ ಮಾಡಬೇಕಲ್ಲವೇ? ತಾವು ಇದರ ಬಗ್ಗೆ ದೊಡ್ಡ ಮನಸ್ಸು ಮಾಡಬೇಕು; ನಮಗೆ ಬೇರೆಯವರ ಬಗ್ಗೆ ದ್ವೇಷವಿಲ್ಲ, ನಾವು ಬೇರೆಯವರ ಅನ್ನವನ್ನು ಸಹ ಕೇಳುತ್ತಿಲ್ಲ, ಅವರಿಗೆ ಏನು ಅನ್ನವನ್ನು ಕೊಟ್ಟಿದ್ದಿರೋ ಅವರು ಅದನ್ನು ಊಟ ಮಾಡಿಕೊಳ್ಳಲಿ, ಅವರು ಸಂತೋಷವಾಗಿ ನೆಮ್ಮದಿಯಾಗಿರಲಿ. ಆದೆ ನಮಗೆ ಬರಬೇಕಾಗಿರುವಂತಹ ನಮ್ಮ ಭಾಗದ ಅನ್ನವಿದೆಯಲ್ಲಾ, ಅದನ್ನು ಕೊಡುವ ಬಗ್ಗೆ ನೀವುಗಳೆಲ್ಲರೂ ಸಹಕರಿಸಿ, ನಿರ್ಭಾಗ್ಯ ರೈತರ ಮಕ್ಕಳಿಗೆ ತಾವು ಆಶಿರ್ವಾದವನ್ನು ಮಾಡಬೇಕು. ಯಾವಾಗ ಅವರಿಗೆಲ್ಲಾ ತೊಂದರೆಯಾಯಿತೋ, ಅವರು ಹೊಲ ಮತ್ತು ಮನೆಯನ್ನು ಕಳೆದುಕೊಂಡರು. ಅವರು ಸಾಲವನ್ನು ಮಾಡಿ ಬೆಳೆಯನ್ನು ಬೆಳೆದರೂ ಸಹ ಸಾಲವನ್ನು ತೀರಿಸುವುದಕ್ಕೆ ಆಗಲಿಲ್ಲವೋ, ಅವರ ಜಮೀನು ಹರಾಜು ಆಯಿತು.

ಅಧ್ಯಕ್ಷರು :— ಮಾನ್ಯ ಹನುಮೇಗೌಡರೆ, ಈಗ ತಾವು ಏನು ಹೇಳುತ್ತಿದ್ದೀರಿ ಅದು ೧೧೦ ಪರ್ಸೆಂಟ್ ಸರಿಯಾಗಿದೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಇಲ್ಲಿ ೭೦೦-೮೦೦ ಸ್ಲಮ್‌ಗಳು ಇದೆ, ಒಂದೊಂದು ಸ್ಲಮ್‌ಗಳನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಸಾವಿರಾರು ಕೋಟಿ ರೂಪಾಯಿಗಳ ಪ್ರಾಜೆಕ್ಟ್‌ನ್ನು ಮಾಡುತ್ತಿದ್ದೀರಾ? ನೀವು ಹಳ್ಳಿಯ ಜನರು ಬೆಳೆದ ಬೆಳೆಗೆ ಸರಿಯಾದ ಬೆಲೆಯನ್ನು ಕೊಟ್ಟು, ಅವರುಗಳು ಅಲ್ಲಿಯೇ ಉಳಿದುಕೊಳ್ಳುವಂತೆ ಮಾಡಬೇಕು. ಅವರ ಮಕ್ಕಳಿಗೆ ವಿದ್ಯಾಭ್ಯಾಸದ ಸೌಕರ್ಯವನ್ನು ಒದಗಿಸಿ, ಕೆಲಸ ಕಾರ್ಯಗಳನ್ನು ಕೊಟ್ಟಿದ್ದರೆ ಅವರುಗಳು ಅಲ್ಲಿಯೇ ಉಳಿದುಕೊಳ್ಳುತ್ತಿದ್ದರು; ಇಲ್ಲ ಏಕೆ ಸ್ಲಮ್ ಕ್ರಿಯೇಟ್ ಆಗುತ್ತದೆಯ ಇದರ ಬಗ್ಗೆ ದಯವಿಟ್ಟು ಯೋಚನೆಯನ್ನು ಮಾಡಬೇಕು. ಆ ಸ್ಲಮ್‌ನಲ್ಲಿ ಏನಾಗುತ್ತದೆಂದರೆ, ಚಿಕ್ಕದಾಗಿರುವ ಜಾಗ ಏನಿದೆ ಅದರಲ್ಲಿ ಹೆಂಡತಿ, ಮಕ್ಕಳುಗಳನ್ನು ಇಟ್ಟುಕೊಂಡು ಅಲ್ಲಿಯೇ ಜೀವನವನ್ನು ಸಾಗಿಸಬೇಕಾಗುತ್ತದೆ. ಇದರ ಬಗ್ಗೆ ದಯವಿಟ್ಟು ಯೋಚನೆ ಮಾಡಬೇಕು, ನಾವು ಅದೇ ಪರಿಸ್ಥಿತಿಯಲ್ಲಿ ನಮ್ಮ ಹೆಂಡತಿ ಮಕ್ಕಳೊಂದಿಗೆ ಆ ಗುಡಿಸಲಿನಲ್ಲಿ ವಾಸಿಸುತ್ತಿದ್ದರೆ, ನಮ್ಮ ಮನಸ್ಸಿನ ಮೇಲೆ ಏನು ಪರಿಣಾಮ ಬೀರುತ್ತದೆಯೋ ಈ ನಿರ್ಭಾಗ್ಯ ಮಕ್ಕಳ ಮೇಲೆ ಪರಿಣಾಮ ಬರುವುದಿಲ್ಲವೇ? ಈಗ ನಾನು ಏನು ಕ್ರಾಂತಿಯ ಬಗ್ಗೆ ಹೇಳಿದನಲ್ಲಾ, ಅದರ ನೆಕ್ಸ್ಟ್ ಕಿಡಿಯ ಆ ಸ್ಲಮ್‌ನಿಂದ ಹಾರುವುದು. ಮನೆಯ ಹಿರಿಯರೆಲ್ಲರೂ ಕೂಲಿ ಕೆಲಸಕ್ಕಾಗಿ ಹೋಗುತ್ತಾರೆ, ಮಕ್ಕಳುಗಳು ಸ್ಕೂಲಿಗೆ ಹೋಗುವುದರ ಬದಲಾಗಿ ಇಸ್ಪೀಟ್ ಆಡುವುದು, ಪಿಕ್ ಪ್ಯಾಕೇಟ್‌ನ್ನು ಮಾಡುವುದು ಈ

ಎಲ್ಲಾ ಚಟಗಳು ಆ ಸ್ಲಮ್‌ನಿಂದ ಪ್ರಾರಂಭವಾಗುತ್ತದೆ. ಮುಂದೆ ಈ ಸಮಾಜವು ದೇಶವು ಸುಖ ಸಮೃದ್ಧಿಯಿಂದ ನೆಮ್ಮದಿಯಾಗಿ ಬಾಳಿ ಬದುಕಬೇಕಾದರೆ, ಏನು 70 ಪರ್ಸೆಂಟ್ ನಿರ್ಭಾಗ್ಯ ಜನರಿದ್ದಾರೆ ಅವರುಗಳೆಲ್ಲಾ ಅಲ್ಲಿಯೇ ಉಳಿದುಕೊಂಡು ಅವರುಗಳ ಕೆಲಸವನ್ನು ಅವರೇ ಮಾಡಬೇಕು. ಎಲ್ಲಾ ದೇಶದಲ್ಲಿಯೂ ರೈತ ಬೆಳೆಯುವುದು ಅವನ ಒಂದೇ ಜವಾಬ್ದಾರಿಯಾಗಿರುತ್ತದೆ. ಅವನು ಬೆಳೆದ ಪದಾರ್ಥಗಳನ್ನು ಮಾರಾಟ ಮಾಡುವುದು, ಅದಕ್ಕೆ ಸರಿಯಾದ ಬೆಲೆ ಸಿಗುವ ಬಗ್ಗೆ ಅವನಿಗೆ ಜವಾಬ್ದಾರಿ ಇರುವುದಿಲ್ಲ. ಆ ದೇಶದಲ್ಲಿ ಏನಾಗಿದೆ ಎಂದರೆ, ಅವರನು ಬೆಳೆಯನ್ನು ಬೆಳೆಯಬೇಕಾದರೆ ಸಾಲವನ್ನು ತೆಗೆದುಕೊಳ್ಳಬೇಕು. ಗೊಬ್ಬರವನ್ನು ಕೊಂಡುಕೊಳ್ಳಬೇಕು, ನಂತರ ಬೆಳೆಯನ್ನು ಬೆಳೆಯಬೇಕು. ಆದರೆ ಅವನು ಬೆಳೆಯನ್ನು ಬೆಳೆಯುವುದರಲ್ಲಿ ಮಳೆ ಬಂದರೆ ಬಂತು ಇಲ್ಲದಿದ್ದರೆ ಇಲ್ಲ. ಆಮೇಲೆ ಎಲ್ಲಾ ದೇವರುಗಳಿಗೆ ಕೈಯನ್ನು ಮುಗಿಯಬೇಕು, ಇಷ್ಟೆಲ್ಲಾ ಮಾಡಿಕೊಂಡು ಬಂದು ಒಂದು ಪಕ್ಷ ಆತನು ಬೆಳೆಯನ್ನು ಬೆಳೆಯನ್ನು ಬೆಳೆದರೆ, ಅವನಿಗೆ ಸರಿಯಾದ ಬೆಲೆಯನ್ನು ಕೊಡುತ್ತೀರಾ? ಸರಿಯಾದ ಬೆಲೆಯನ್ನು ಕೊಡುವುದಿಲ್ಲ; ರೈತನು ಬೆಳೆಯುವಂತಹ ಪದಾರ್ಥಗಳ ಬೆಲೆ ಆಕಾಶಕ್ಕೆ ಹೋಯಿತು. ಇದರಲ್ಲಿ ಏನಾದರೂ ಸಾಮರಸ್ಯವಿದೆಯೇ? ನೀವೇನಾದರೂ ಮಾಡಿ ಬಜೆಟ್‌ನಲ್ಲಿ ಒಂದು ವ್ಯವಸ್ಥೆಯಾದರೆ ಅದಕ್ಕೇನಾದರೂ ಹೋಲಿಕೆ ಇದೆಯೇ? ನಾನು 1959ರಲ್ಲಿ ವ್ಯವಸಾಯವನ್ನು ಪ್ರಾರಂಭ ಮಾಡಿದಾಗ ಆಗ ಒಂದು ಗುದ್ದಲಿಗೆ 3-00 ರೂಪಾಯಿಗಳು ಇತ್ತು. ಒಂದು ಪಿಕಾಸಿಗೆ 6-00 ರೂಪಾಯಿಗಳು ಇತ್ತು, ಒಂದು ಹಾರೆಗೆ 7 ರಿಂದ 9-00 ರೂಪಾಯಿಗು ಇತ್ತು. ಇವತ್ತು ಅದರ ಬೆಲೆ ಎಷ್ಟಾಗಿದೆ ಎಂದರೆ, ಒಂದು ಹಾರೆಗೆ 150 ರೂಪಾಯಿಗಳಾಗಿದೆ, ಒಂದು ಗುದ್ದಲಿಗೆ 80-00 ರೂಪಾಯಿಗಳು, ಒಂದು ಪಿಕಾಸಿಗೆ 100-00 ರೂಪಾಯಿಗಳಾಗಿದೆ, ಅವತ್ತು ತೆಂಗಿನ ಕಾಯಿಯ ಬೆಲೆ 2-3 ರೂಪಾಯಿಗಳು ಇತ್ತು, ಅವತ್ತು ಅದರ ಬೆಲೆ ಅದಕ್ಕಿಂತಲೂ ಕಡಿಮೆಯಾಗಿದೆ. ಹೀಗಾದರೆ ರೈತನು ಹೇಗೆ ಬದುಕುತ್ತಾನೆ? ಅವನು ಜೀವನವನ್ನು ಮಾಡುವುದಕ್ಕೆ ಏನು ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾನೆ.?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :— ಮಾನ್ಯ ಹನುಮೇಗೌಡರೆ, ಇವತ್ತಿನ ದಿನ ಪತ್ರಿಕೆಯನ್ನು ತಾವು ನೋಡಲಿಲ್ಲವೆಂದು ಕಾಣುತ್ತದೆ. ಕೇಂದ್ರದ ಕೃಷಿ ಮಂತ್ರಿಗಳು ರೈತನನ್ನು ಉದ್ಧಾರ ಮಾಡೇ ಮಾಡುತ್ತೇನೆಂದು ಹೇಳಿದ್ದಾರೆ, ಇನ್ನು ಮೇಲೆ ಬಹಳ ಚೆನ್ನಾಗಿ ಆಗುತ್ತದೆ, ಸುಮ್ಮನೆ ಕ್ರಾಂತಿ, ಕ್ರಾಂತಿ ಎಂದು ಏಕೆ ಹೇಳುತ್ತೀರಿ?

ಒಬ್ಬ ಮಾನ್ಯ ಸದಸ್ಯರು :— ಅವರು ರಾಮಮಂದಿರವನ್ನು ಕಟ್ಟಿಸಬೇಕು, ಅದಕ್ಕಾಗಿ ಅವರು ಕ್ರಾಂತಿ, ಕ್ರಾಂತಿ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಪಿಡಬ್ಲ್ಯೂಡಿಗೆ ಎಸ್ಟಿಮೇಟ್‌ನ್ನು ಮಾಡಿದರೆ ನಮಗೆ 15 ಪರ್ಸೆಂಟ್ ಪ್ರಾಫಿಟ್‌ನ್ನು ಸೇರಿಸುತ್ತೀರಿ ಕಾರ್ಖಾನೆಯವರು ಎಷ್ಟು ಬೇಕಾದರೂ

ರೇಟನ್ನು ಹಾಕಿಕೊಳ್ಳಬಹುದು, ಸುಮಾರು 50 ರಿಂದ 150 ರೂಪಾಯಿಗಳನ್ನು ಅತನು ಹಾಕಿಕೊಳ್ಳುತ್ತಾನೆ; ಇದು ಆತನಿಗೆ ಇರುವಂತಹ ಸ್ವಾತಂತ್ರ್ಯವಾಗಿದೆ. ಆದರೆ ನಾವು ಬೆಳೆದ ಬೆಳೆಯ ಬಗ್ಗೆ ಕೇಳಿದರೆ ಹದ್ದು ಹಾರಿ ಬಂದು ಕುಳಿತಹಾಗೆ ನಮ್ಮ ಮೇಲೆ ಸವಾರಿಯನ್ನು ಮಾಡುವುದಕ್ಕೆ ಕುಳಿತುಕೊಂಡು ಬಿಡುತ್ತೀರಾ! ನಾವು ಬೆಳೆದಂತಹ ಬೆಳೆಗೆ ಸರಿಯಾದಂತಹ ಬೆಲೆ ಸಾಮರಸ್ಯಗಳು ಇದೆಯಾ? ಒಂದು ಕಡೆ ಈತನು ಹಾಳಾಗುತ್ತಿದ್ದಾನೆ, ಇನ್ನೊಂದು ಕಡೆ ಇವನು ಹೊಲ, ಮನೆಯನ್ನು ಕಳೆದುಕೊಂಡು, ಆತನು ಟೌನ್‌ಗೆ ಬಂದು ಕೊಳಚೆ ಪ್ರದೇಶಗಳಲ್ಲಿ ವಾಸ್ತವ್ಯವನ್ನು ಹೂಡುತ್ತಾನೆ. ಇದರ ಬಗ್ಗೆ ನೀವು ಎಷ್ಟೇ ವ್ಯವಸ್ಥೆಯನ್ನು ಮಾಡಿಕೊಂಡರೂ ಆ ಸ್ಲಮ್‌ನವರು ಒಂದು ಸಾರಿ ಎದ್ದರೆ, ನೀವು ಬಂದೂಕನ್ನು ಹಿಡಿದುಕೊಂಡರೂ ಸಹ ಅವರುಗಳು ಸಾಯುವುದಕ್ಕೂ ಸಹ ತಯಾರಾಗಿದ್ದಾರೆ. ಇವತ್ತು ಪಂಜಾಬ್ ರಾಜ್ಯದಲ್ಲಿ ಎಷ್ಟು ಜನ ಯುವಕರು ನಿಂತುಕೊಂಡು ಹೋರಾಟ ಮಾಡಿದ್ದಾರೆ? ನಿನ್ನೆ ನಾನು ಯತಿಗಳು ಹೇಳಿದ ಒಂದು ಮಾತನ್ನು ಹೇಳಿದೆ, ಅದನ್ನು ನಾನು ಪ್ರಮಾಣವಾಗಿ ಯಾವಾಗಲೂ ನೆನೆಸಿಕೊಳ್ಳುತ್ತೇನೆ. ಇವುಗಳೆಲ್ಲವು ಆಗಬಾರದು ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಹಳ್ಳಿಯ ರೈತನಿಗೆ ನ್ಯಾಯವಾದ ಬೆಲೆ ಏನೋ ಕೊಡಬೇಕೋ ಅದನ್ನು ಅವನಿಗೆ ಕೊಡಬೇಕು. ಅವನಿಗೆ ಏನು ವ್ಯವಸ್ಥೆ ಬೇಕೋ ಅದನ್ನು ಮಾಡಿಕೊಡಬೇಕು; ಅದು ಮುಂದಿನ ಮಾತಾಗಿದೆ. ಈಗ ಕೊನೆಯಪಕ್ಷ ಆ ರೈತರ ಮಕ್ಕಳಿಗೆ ನ್ಯಾಯವಾಗಿ ಏನು ಸಿಗಬೇಕೋ ಅದನ್ನು ಮಾಡಿಕೊಡಬೇಕು. ಇದು ನಮ್ಮ ಸರ್ಕಾರ, ನನ್ನ ಮಗನು ಅಲ್ಲಿ ಇದ್ದಾನೆ ಎನ್ನುವಂತಹ ಭಾವನೆಯು ಬರಬೇಕು. ಜನಸಂಖ್ಯೆಯ ಆಧಾರದ ಮೇಲೆ 70 ಪರ್ಸೆಂಟ್ ನಮಗೆ ರಿಸರ್ವೇಶನ್ ಕೊಡಬೇಕೆಂದು ಹೇಳುತ್ತಾ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) :— ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಮಹತ್ವದ ವಿಚಾರದ ಬಗ್ಗೆ ಸರ್ಕಾರದವರು ಈ ಬಿಲ್ಲನ್ನು ಸದನದಲ್ಲಿ ಮಂಡಿಸಿದ್ದಾರೆ. ಮಾನ್ಯ ಹನುಮೇಗೌಡರು, ಬಹಳ ಅನುಭವಸ್ಥರು, ಹಿರಿಯರು, ಅವರು ಗ್ರಾಮೀಣ ಬದುಕಿದ ಬಂದವರು ಆಗಿದ್ದಾರೆ. ಅವರು ರೈತರ ಕಷ್ಟನಷ್ಟಗಳನ್ನು ತಿಳಿದುಕೊಂಡು ಅದಕ್ಕೆ ಸ್ಪಂದನೆಯನ್ನು ಕೊಟ್ಟಂತಹವರು, ಅವರು ಬಹಳ ಒಂದು ಹೃದಯಾಂತರಾಳದಿಂದ ಇವತ್ತು ಕೆಲವೊಂದು ವಿಷಯಗಳನ್ನು ಮಾತನಾಡಿದರು.

ಶ್ರೀ ಕೆ.ಹೆಚ್. ರಂಗನಾಥ್ :— ಮಾನ್ಯ ಹನುಮೇಗೌಡರು ವಕೀಲರು ಸಹ ಆಗಿದ್ದರು, ಅವರ ತಂದೆಯವರು ಸಹ ರೈತರಾಗಿದ್ದರು.

ಶ್ರೀ ಜಗದೀಶ್ ಶೆಟ್ಟರ್ :— ವಕೀಲರಾಗಿದ್ದವರು ರೈತರಾಗಬಾರದೇ?

ಶ್ರೀ ಕೆ.ಹೆಚ್. ಹನುಮೇಗೌಡ :— ನಾನು ಲಾ ಓದಿರುವುದಂತೂ ನಿಜ, ಕೋರ್ಟಿಗೆ ಹೋಗಿರುವುದು ಸಹ ನಿಜವಾಗಿದೆ. ಆ ಲಾಯರ್ ಕೆಲಸವನ್ನು ಮಾಡುವುದಕ್ಕಾಗಿ

ಹೋಗಿ ಒಂದು ಸುಳ್ಳನ್ನು ಹೇಳಿ, ಒಬ್ಬ ಹೆಂಗಸಿನ ಕೈಯಲ್ಲಿ ಉಗಿಸಿಕೊಂಡು ಆ ಲಾಯರ್ ಕೆಲಸವನ್ನು ಬಿಟ್ಟುಬಿಟ್ಟಿದ್ದೇನೆ. ನಾನು ಒಂದೇ ವರ್ಷ ಕೋರ್ಟಿಗೆ ಹೋಗಿರುವುದು, ನಂತರ ಬಿಟ್ಟುಬಿಟ್ಟಿದ್ದೇನೆ. ಮತ್ತೇ ನಾನು ಕೋರ್ಟಿಗೆ ಹೋಗಲಿಲ್ಲ. ಆದ್ದರಿಂದ ತಾವು ನನ್ನನ್ನು ಲಾಯರ್ ಎಂದು ಕರೆಯಬೇಡಿ.

ಶ್ರೀ ಕೆ.ಹೆಚ್. ರಂಗನಾಥ್ :— ನನ್ನ ಮತ್ತು ಅವರ ಪರಿಚಯವು ಬಹಳ ದಿವಸಗಳಿಂದ ಇದೆ. ಅವರು ವಕೀಲ ವೃತ್ತಿಯನ್ನು ಮಾಡುವುದಕ್ಕೆ ಹೋಗಿ ಏನಾಯಿತು ಎಂಬುದು ನನಗೆ ಗೊತ್ತಿರಲಿಲ್ಲ!

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ವಕೀಲ ವೃತ್ತಿಯನ್ನು ಮಾಡುವುದಕ್ಕೆ ಹೋದರೆ ಬರೀ ಸುಳ್ಳನ್ನೇ ಹೇಳಬೇಕಾಗುತ್ತದೆ. ಆದರೆ ಕ್ರಿಮಿನಲ್ ಕೇಸ್‌ನಲ್ಲಿ ನ್ಯಾಯವಾಗಿ ಒಂದನ್ನೂ ಹೇಳುವುದಕ್ಕಾಗುವುದಿಲ್ಲ. ಹೀಗಾಗಿ ನಾನು ಅವಳಿಗೆ, 'ನೀನು ಸುಳ್ಳು ಹೇಳುತ್ತಿಯಾ' ಎಂದು ಹೇಳಿದೆ, ಆ ಹೆಂಗಸು ನನಗೆ ಉಗಿದಳು, ಅವಳು ಏನು ಹೇಳಿದಳೆಂದರೆ, ಅಲ್ಲಿ ಕುಳಿತಿರುವಂತಹ ಕಣ್ಣಿರುವಂತಹ ಜಡ್ಜ್, ನಿನ್ನಂತಹ ಹೊಟ್ಟೆಗಿಲ್ಲದ ಲಾಯರ್, ನೀವು ನನಗೆ ನ್ಯಾಯವನ್ನು ದೊರಕಿಸಿ ಕೊಡುತ್ತೀರಾ? ಅಲ್ಲಿ? ಅವನು ಇದ್ದಾನೆ, ಅವನಿಂದ ನಾನು ನ್ಯಾಯವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿ ಹೋದಳು. ಅವತ್ತೇ ನಾನು ಮನೆಗೆ ಬಂದು ಕೂಲಿ ಮಾಡಿದರೂ ಸಹ ಚಿಂತೆಯಿಲ್ಲ ಎಂದು ಆ ಲಾಯರ್ ಕೆಲಸ ಬೇಡವೆಂದು ಕೈಮುಗಿದು ಬಿಟ್ಟುಬಿಟ್ಟೆ. ನಾನೇ ಸಹ ಲಾಯರ್ ಎಂದು ಹೇಳಿಕೊಳ್ಳುವುದಿಲ್ಲ, ನೀವು ಏತಕ್ಕಾಗಿ ನನ್ನನ್ನು ಲಾಯರ್ ಎಂದು ಹೇಳುತ್ತೀರಿ?

ಶ್ರೀ ಕೆ.ಹೆಚ್. ರಂಗನಾಥ್ :— ಮಾನ್ಯ ಹನುಮೇಗೌಡರೆ, ನಿಮ್ಮ ಪಕ್ಷದಲ್ಲಿ ಕುಳಿತಿರುವ ಮಾನ್ಯ ಸದಾನಂದಗೌಡರು ವಕೀಲ ವೃತ್ತಿಯನ್ನು ಮಾಡುತ್ತಿದ್ದಾರೆ, ಅವರಿಗೆ ಈ ಮಾತನ್ನು ಹೇಳಿ.

ಶ್ರೀ ಡಿ.ವಿ. ಸದಾನಂದಗೌಡ :— ನನಗೂ ಕೂಡ ಅದೇ ರೀತಿಯ ಅನುಭವವಾಯಿತು. ನಾನು ಲಾಯರ್ ಕೆಲಸವನ್ನು ಬಿಟ್ಟಿದ್ದಲ್ಲ, ಈ ರಾಜಕಾರಣಕ್ಕೆ ಬಂದಮೇಲೆ ಇಂತಹ ಸ್ಥಳದಲ್ಲಿ ಸತ್ಯವನ್ನು ಹೇಳಬೇಕೆಂದು ಅನ್ನಿಸಿಕೊಂಡರೂ ಸಹ ನಿಮ್ಮಿಂದಾಗಿ ಹಲವಾರು ಸುಳ್ಳುಗಳನ್ನು ಹೇಳಬೇಕಾದಂತಹ ಪರಿಸ್ಥಿತಿ ಬರುತ್ತದೆಂದು ಕೇಳಿ ನನಗೂ ಕೂಡ ಅಯ್ಯೋ ಎನಿಸುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಹನುಮೇಗೌಡರು ನಾನು ವಕೀಲರಾಗಿದ್ದರೂ ಸಹ ವಕೀಲತನವನ್ನು ಮಾಡಲಿಲ್ಲವೆಂದು ಹೇಳಿದರು. ಅಂದರೆ ಕೆಲವೊಂದು ವ್ಯಕ್ತಿಗಳು ಹೇಗಿರುತ್ತಾರೆಂದರೆ ತಮ್ಮ ಆತ್ಮ ಸಾಕ್ಷಿಗೆ ವಿರುದ್ಧವಾಗಿ ಹೋಗುವುದಿಲ್ಲ.

ಏನೋ ವಿಷಯಗಳಲ್ಲಿ ನಾವು ಕಾಂಪ್ರಮೈಸ್ ಮಾಡಿಕೊಳ್ಳುತ್ತಿದ್ದೇವೆ. ಇವತ್ತು ರಾಜಕೀಯ, ವಕೀಲ ವೃತ್ತಿಯೂ ಸಹ ಇರಬಹುದು, ಅಥವಾ ಡಾಕ್ಟರ್‌ಗಳು ಇರಬಹುದು, ಕೆಲವೊಂದು ವ್ಯವಸ್ಥೆಗೆ ಕಾಂಪ್ರಮೈಸ್ ಆಗುವಂತದ್ದು ಮಾಡಬಹುದು. ನಾನು ಕಾಂಪ್ರಮೈಸ್ ಆಗಲಿಲ್ಲ, ಆ ವ್ಯವಸ್ಥೆಯಿಂದ ನಾನು ಹೊರಗಡೆ ಬಂದೆ ಎಂದು ಮಾನ್ಯ ಹನುಮೇಗೌಡರು ಹೇಳಿದರು. ಇವತ್ತು ಇಲ್ಲಿ ಬಹು ಮುಖ್ಯವಾದ ವಿಷಯದ ಬಗ್ಗೆ ಚರ್ಚೆಯು ನಡೆಯುತ್ತಿದೆ. ಗ್ರಾಮೀಣ ಕೃಪಾಂಕದ ಬಗ್ಗೆ ಇವತ್ತು ಏನಾಗಿದೆ ಎಂದರೆ, ಅಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಸರಿಯಾದಂತಹ ರಸ್ತೆಗಳಿಲ್ಲ, ಉಣ್ಣಲಿಕ್ಕೆ ಅನ್ನವಿಲ್ಲ, ಸರಿಯಾದಂತಹ ದೀಪದ ವ್ಯವಸ್ಥೆ ಇಲ್ಲ, ಅಲ್ಲಿದ್ದಂತಹ ಶಾಲೆಗಳಿಗೆ ಸರಿಯಾದಂತಹ ಕಟ್ಟಡಗಳಿಲ್ಲ, ಒಂದು ವೇಳೆ ಕಟ್ಟಗಳಿದ್ದರೆ ಶಿಕ್ಷಕರುಗಳು ಇಲ್ಲ. ಅಲ್ಲಿ ಸರಿಯಾದಂತಹ ಗುಣಮಟ್ಟದ ಶಿಕ್ಷಣವಿಲ್ಲ. ಗ್ರಾಮ ಕರ್ನಾಟಕದಲ್ಲಿ ಹೆಚ್ಚು ಕಡಿಮೆ ಸರ್ಕಾರಿ ಶಾಲೆಗಳು ಇವೆ, ಸರ್ಕಾರಿ ಶಾಲೆಗಳಲ್ಲಿ ಯಾವ ರೀತಿಯಾಗಿ ಗುಣಮಟ್ಟವಿದೆ, ಶಿಕ್ಷಣಮಟ್ಟವಿದೆ, ಇದು ಎಲ್ಲರಿಗೂ ಗೊತ್ತಿರುವಂತಹ ವಿಷಯವಾಗಿದೆ. ಆದರಲ್ಲಿ ರೈತನ ಮಕ್ಕಳು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಹೊಲಕ್ಕೆ ಹೋಗಿ ಉಳಿದ ವೇಳೆಯಲ್ಲಿ ಆತನು ಶಾಲೆಗೆ ಹೋಗುವಂತಹ ವ್ಯವಸ್ಥೆ ಇದೆ. ಅಲ್ಲಿ ಯಾವುದೇ ತರಹದ ವ್ಯವಸ್ಥೆಗಲಿರುವುದಿಲ್ಲ, ಅಲ್ಲಿದ್ದಂತಹ ಶಿಕ್ಷಣಮಟ್ಟ, ಗುಣಮಟ್ಟು, ಅಲ್ಲಿರುವಂತಹ ಅವ್ಯವಸ್ಥೆ, ಅಪೂರ್ಣವಾದಂತಹ ವ್ಯವಸ್ಥೆಯಲ್ಲಿ ಆ ಗ್ರಾಮಾಂತರ ಪ್ರದೇಶದಲ್ಲಿರುವ ರೈತನ ಮಗ ಓದಬೇಕು, ಆದೆ ನಗರ ಪ್ರದೇಶದಲ್ಲಿದ್ದಂತಹ ಸೌಕರ್ಯಗಳು, ಇಲ್ಲಿರುವಂತಹ ಗುಣಮಟ್ಟ ಇವತ್ತು ಅವರಿಗೆ ಅವರೆ ಕಾಂಪಿಟೇಶನ್‌ನ್ನು ಮಾಡಿದರೆ, ಬಹುಶ: ನಗರ ಪ್ರದೇಶದಲ್ಲಿರುವಂತಹ ವಿದ್ಯಾರ್ಥಿಗಳ ಮಟ್ಟಕ್ಕೆ ಆ ನಮ್ಮ ರೈತನ ಮಕ್ಕಳು ಮುಟ್ಟುವುದಕ್ಕೆ ಸಾಧ್ಯವಿಲ್ಲ. ಅಂತಹ ವ್ಯವಸ್ಥೆಯಲ್ಲಿ ನಾವು ಇದ್ದೇವೆ, ಆತನಿಗೆ ಮೂಲಭೂತವಾದಂತಹ ಸೌಕರ್ಯಗಳನ್ನು ಕೊಟ್ಟು, ಒಳ್ಳೆಯ ಶಿಕ್ಷಣವನ್ನು ಗ್ರಾಮಾಂತರ ಪ್ರದೇಶದಲ್ಲಿರುವವರಿಗೆ ಕೊಟ್ಟರೆ ಬಹುಶ: ರೈತನ ಮಕ್ಕಳು ಇಲ್ಲಿ ಗ್ರಾಮೀಣ ಕೃಪಾಂಕವನ್ನು ಕೊಡಿ ಎಂದು ಅವರು ಸರ್ಕಾರಕ್ಕೆ ಭಿಕ್ಷೆಯನ್ನು ಬೇಡುವಂತಹ ಪ್ರಸಂಗವು ಬರುತ್ತಿರಲಿಲ್ಲ. ಆದರೆ ವ್ಯವಸ್ಥೆ ಈ ರೀತಿಯಾಗಿದೆ, 1992ರಲ್ಲಿ ಇಲ್ಲಿ ಸಿವಿಲ್ ಸರ್ವಿಸ್ ಕಾಯಿದೆಗೆ ತಿದ್ದುಪಡಿಯನ್ನು ಮಾಡಿದರು. 1992ರಲ್ಲಿ ಇದ್ದಂಥ ಸರ್ಕಾರ ಶೇಕಡ 15ರಷ್ಟು ಕೃಪಾಂಕ ಕೊಡಬೇಕೆಂದು ಮಾಡಿತು. ಆದರೆ ಅದು ಸಿ.ಡಿ. ಮತ್ತು ಬಿ. ವರ್ಗಗಳಿಗೆ ಮಾತ್ರ ಇತ್ತು. ಮುಂದೆ 1994ರಲ್ಲಿ ಅದನ್ನು ಶೇಕಡಾ 5 ಕ್ಕೆ ಇಳಿಸಲಾಯಿತು. ನಂತರ 1997ರಲ್ಲಿ ಅದು ಶೇಕಡಾ 10 ಆಯಿತು. ಅದನ್ನು 10ಕ್ಕೆ ಇಳಿಸಿ ಏನು ಮಾಡಿದರು ಎಂದರೆ ಎ.ಬಿ.ಸಿ.ಡಿ. ಗ್ರೂಪ್‌ಗಳಿಗೆ ಅಂತ ಮಾಡಿದರು. ಅಂದರೆ 1992, 1994 ಮತ್ತು 1997ರಲ್ಲಿ ಏನೋ ಒಂದು ಅವಕಾಶವನ್ನು ಮಾಡಿಕೊಟ್ಟರು. ಗ್ರಾಮಾಂತರ ಪ್ರದೇಶದಲ್ಲಿ ಇರುವಂಥ ಸೌಕರ್ಯ, ಇಲ್ಲಿರುವಂಥ ಸೌಕರ್ಯವನ್ನು ಹೋಲಿಕೆ ಮಾಡಬೇಕಾಗುತ್ತದೆ. ಇವತ್ತು ಪರಿಸ್ಥಿತಿ ಎಲ್ಲಿಗೆ ಬಂದಿದೆ ಬಂದಿದೆಯೆಂದರೆ, ಗ್ರಾಮಾಂತರ ವಿದ್ಯಾರ್ಥಿಗಳ ಪರಿಸ್ಥಿತಿ ಹೇಗಿದೆ, ಅಲ್ಲಿರುವಂಥ

ಗುಣಮಟ್ಟ, ಹೇಗಿದೆಯೆಂದರೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಆಗ ಮೂರು ವರ್ಷಗಳ ಹಿಂದೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಒಬ್ಬ ರಾಜ್ಯಶಾಸ್ತ್ರ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗೆ 5ನೇ ರ್‍ಯಾಂಕ್ ಬಂದಿತು, ಆದರೆ ಅವನ ಹಿನ್ನಲೆಯನ್ನು ನೋಡಿದಾಗ ಎಸ್.ಎಸ್.ಎಲ್.ಸಿಯಲ್ಲಿ ಅವನು ಅನುತ್ತೀರ್ಣನಾಗಿದ್ದು ಒಂದೆರಡು ಅವಕಾಶವನ್ನು ತೆಗೆದುಕೊಂಡು ನಂತರ ತೇರ್ಗಡೆಯಾಗಿ ಪಿ.ಯು.ಸಿ.ಗೆ ಬಂದ. ಆಮೇಲೆ ಅವನು ನಗರ ಪ್ರದೇಶದಲ್ಲಿ ಓದಿ ಸ್ನಾತಕೋತ್ತರ ಪದವಿಯಲ್ಲಿ 5ನೇ ರ್‍ಯಾಂಕ್ ಬಂದ. ಆದರೆ ಮೊದಲನೇ ತರಗತಿಯಿಂದ ಎಸ್.ಎಸ್.ಎಲ್.ಸಿ.ವರೆಗೆ ಅವನು ಓದಿದ್ದು ಗ್ರಾಮಾಂತರ ಪ್ರದೇಶದಲ್ಲಿ, ಆಗ ಎಸ್.ಎಸ್.ಎಲ್.ಸಿಯಲ್ಲಿ ಅನುತೀರ್ಣನಾಗಿದ್ದ ವಿದ್ಯಾರ್ಥಿ ಮುಂದೆ ಸ್ನಾತಕೋತ್ತರ ಪದವಿಯಲ್ಲಿ 5ನೇ ರ್‍ಯಾಂಕ್ ತೆಗೆದುಕೊಂಡ, ಎಂದರೆ ಇದು ಒಂದು ವಸ್ತುಸ್ಥಿತಿಯನ್ನು ತೋರಿಸುತ್ತದೆ. ಹೀಗಾಗಿ ಇದರ ಅವಶ್ಯಕತೆಯನ್ನು ನೋಡಿಕೊಂಡು ಹಿಂದಿನ ಸರ್ಕಾರಗಳು ಒಂದು ರೂರಲ್ ಕೋಟಾ ಅಂತ ಫಿಕ್ಸ್ ಮಾಡಿದರು. ಇದರಲ್ಲಿ ಒಬ್ಬ ವಿದ್ಯಾರ್ಥಿ 540 ಪರ್ಸೆಂಟ್ ಅಥವಾ 55 ಪರ್ಸೆಂಟ್ ತೆಗೆದುಕೊಂಡರೆ ಅದಕ್ಕೆ 10 ಪರ್ಸೆಂಟ್ ಸೇರಿಸುವಂಥಾದ್ದು. ಅಂದರೆ 55 ಪರ್ಸೆಂಟ್ ತೆಗೆದುಕೊಂಡಿದ್ದರೆ ಅದಕ್ಕೆ 10 ಪರ್ಸೆಂಟ್ ಸೇರಿಸಿದರೆ ಅದು 65 ಪರ್ಸೆಂಟ್ ಆಗುತ್ತಿತ್ತು. ಆಮೇಲೆ 50 ಪರ್ಸೆಂಟ್ ಇದ್ದರೆ ಅದು 65 ಪರ್ಸೆಂಟ್ ಆಗುತ್ತಿತ್ತು. ಹೀಗೆ ಕೃಪಾಂಕ ಕೊಡುವುದು ಬದಲಾವಣೆಯಾಗುತ್ತಾ ಬಂದು 5, 10, ಮತ್ತು 15 ಪರ್ಸೆಂಟ್ ಅಂತ ಕೊಡಬೇಕಿತ್ತು. ಆದರೆ ಹೈಕೋರ್ಟಿನಲ್ಲಿ ಈ ವಿಷಯದ ಬಗ್ಗೆ ರಿಟ್ ಪಿಟಿಶನ್ ಫೈಲ್ ಆದಂಥ ಸಂದರ್ಭದಲ್ಲಿ ಇತ್ತೀಚೆಗೆ ಜಡ್ಜ್‌ಮೆಂಟ್ ಆಯಿತು. ನನಗನ್ನಿಸುತ್ತದೆ ಏನೆಂದರೆ, ಹೈಕೋರ್ಟಿನಲ್ಲಿ ನಮ್ಮ ಸರ್ಕಾರದ ಪರವಾಗಿ ಇದ್ದಂಥ ವಕೀಲರು ಇರಬಹುದು, ಅಥವಾ ಅಧಿಕಾರಿಗಳು ಇರಬಹುದು ಸರಿಯಾದ ಮಾಹಿತಿಯನ್ನು ಹೈಕೋರ್ಟಿಗೆ ಒದಗಿಸಿಲ್ಲ ಎನ್ನುವ ಕೊರಗು ನಮಗೆ ಇದೆ. ಜಡ್ಜಮೆಂಟ್‌ನಲ್ಲಿ ಒಂದು ಕಡೆ ಅಬ್ಸರ್ವೇಶನ್ ಇದೆ. ಈ ರೂರಲ್ ವೈಟೇಜ್ ಕೊಡುವುದಕ್ಕೆ ಕಾರಣ ಏನೆಂದರೆ, ಅಲ್ಲಿ ಇರತಕ್ಕಂಥ ಶಿಕ್ಷಣಮಟ್ಟ, ಅಲ್ಲಿರತಕ್ಕಂಥ ವ್ಯವಸ್ಥೆ, ಇಂತಹ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬಂದಂಥ ವಿದ್ಯಾರ್ಥಿಗಳು ನಗರ ಪ್ರದೇಶಗಳಿಗೆ ಹೋಲಿಕೆ ಮಾಡಿದರೆ ಉತ್ತಮ ಶಿಕ್ಷಣವನ್ನು ಪಡೆದಿರುವುದಿಲ್ಲ. ಈ ಅಳತೆಗೋಲಿನ ಮೇಲೆ ಈ ವೈಟೇಜನ್ನು ಫಿಕ್ಸ್ ಮಾಡಲಾಗಿತ್ತು. ಆದರೆ ಹೈಕೋರ್ಟಿಗೆ ಸರ್ಕಾರದ ಪರವಾಗಿ ಇದ್ದಂಥ ವಕೀಲರ್ ಸರಿಯಾದಂಥ ಮಾಹಿತಿಯನ್ನು ಕೊಡಲಿಲ್ಲ. ಅಲ್ಲಿ ಅವರು ಒಂದು ಕಡೆ ಅಬ್ಸರ್ವೇಶನ್ ಮಾಡಿದ್ದಾರೆ. ಇವತ್ತು ಯಾವ ಒಂದು ಗ್ರೌಂಡ್ ಮೇಲೆ ರೂರಲ್ ವೈಟೇಜನ್ನು ಕೊಟ್ಟಿದ್ದೀರಲ್ಲ, ಇದರ ಬಗ್ಗೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಯಾವ ಮಟ್ಟದ ಶಿಕ್ಷಣ ಪಡೆಯುತ್ತಾರೆ, ಅವರಿಗೆ ಸಿಗತಕ್ಕಂಥ ಅವಕಾಶಗಳು ಹಾಗೂ ನಗರ ಪ್ರದೇಶಗಳಲ್ಲಿ ಇರುವಂಥ ವಿದ್ಯಾರ್ಥಿಗಳಿಗೆ ಇರುವಂಥ ಶಿಕ್ಷಣ ಮತ್ತು ಅವಕಾಶಗಳು, ಇವುಗಳ ಬಗ್ಗೆ ಕಂಪ್ಯಾರಿಜನ್‌ನ್ನು ನಮ್ಮ ವಕೀಲರು ಮಾಡಬೇಕಾಗಿತ್ತು. ಇವರಿಗೆ ಸರ್ಕಾರದ

ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಡಬೇಕಾಗಿತ್ತು. ಆದರೆ ಇವರು ಹೈಕೋರ್ಟ್‌ಗೆ ಯಾವ ಅಂಕಿಅಂಶಗಳನ್ನೂ ಸರಿಯಾದ ಮಾಹಿತಿಯನ್ನೂ ಕೊಡಲಿಲ್ಲ. ಇದರ ಬಗ್ಗೆ ಹೈಕೋರ್ಟಿನವರು ಒಂದು ಕಡೆ ಕ್ಲಿಯರ್ ಆಗಿ ಅಬ್ಸರ್ವೇಶನ್ ಮಾಡಿದ್ದಾರೆ. ಈ ಕಂಪ್ಯಾರಿಜನ್‌ಗೆ ಪೂರಕವಾಗಿ ಏನು ಅಂಕಿಸಂಖ್ಯೆಗಳನ್ನು ಕೊಡಬೇಕಾಗಿತ್ತು, ಏನು ಸರಿಯಾದ ಮಾಹಿತಿಯನ್ನು ಕೊಡಬೇಕಾಗಿತ್ತು, ಅದನ್ನು ಒದಗಿಸದೇ ಇದ್ದಾಗ ನಮ್ಮ ನಗರ ಪ್ರದೇಶದ ಶಿಕ್ಷಣ ಗುಣಮಟ್ಟ ಮತ್ತು ಗ್ರಾಮಾಂತರ ಪ್ರದೇಶದ ಶಿಕ್ಷಣ ಗುಣಮಟ್ಟ ಏನು ಎನ್ನುವುದು ಅರ್ಥವಾಗಲಿಲ್ಲ. ಹೀಗಾಗಿ ನಾವು ಯಾಕೆ ತಾರತಮ್ಯ ಎಂದು ಹೈಕೋರ್ಟಿನ ಜಜ್ಮೆಂಟ್ ನಮ್ಮ ವಿರುದ್ಧವಾಯಿತು, ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳ ವಿರುದ್ಧವಾಯಿತು. ಹಾಗಾದರೆ ಈ ಲ್ಯಾಪ್ಸಸ್ ಏನಿದೆ ಇದಕ್ಕೆ ಯಾರು ಜವಾಬ್ದಾರರು? ಈ ಲ್ಯಾಪ್ಸ್ ಮಾಡಿದಂಥವರ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಅವರು ಈ ಮಾಹಿತಿಗಳನ್ನು ಏಕೆ ಕೊಡಲಿಲ್ಲವೆಂದರೆ, ಇಲ್ಲಿ ಸರ್ಕಾರದ ನಿರ್ಲಕ್ಷ್ಯ ಕಾಣುತ್ತದೆ. ಅವರು ಸರಿಯಾಗಿ ಕೇಸ್ ನಡೆಸಿದ್ದರೆ ಬಹುಶ: ಈ ರೀತಿಯ ವಿಫಲತೆ ಆಗುತ್ತಿರಲಿಲ್ಲ. ಸಂವಿಧಾನದ ಚೌಕಟ್ಟಿನಲ್ಲಿ ಅದು ಆಗಲಿಲ್ಲವೆಂದರೆ ಅದು ಕಾನೂನಿನ ಪಾಯಿಂಟ್ ಆದರೆ ಸರ್ಕಾರದ ಪರವಾಗಿ ಸರಿಯಾದ ಅಂಕಿಅಂಶಗಳನ್ನು ಕೊಟ್ಟಿದ್ದರೆ ಅಥವಾ ಇಲ್ಲವೆಂದಾದರೂ ಹೇಳಬೇಕಾಗಿತ್ತು. ಸಾಕಷ್ಟು ಕಮಿಷನ್ ಅಂತ ನಾವು ಮಾಡುತ್ತೇವೆ ಟಾಸ್ಕ್‌ಫೋರ್ಸ್ ಕಮಿಟಿ ಎಂದು ಮಾಡುತ್ತೇವೆ. ಹಾಗಾದರೆ ಈ ಅಂಕಿಸಂಖ್ಯೆಗಳನ್ನು ಏಕೆ ಸರ್ಕಾರ ಕೊಡಲಿಲ್ಲ, ಅಧಿಕಾರಿಗಳು ಏಕೆ ಕೊಡಲಿಲ್ಲ ಎನ್ನುವಂಥ ಪ್ರಶ್ನೆ ಬರುತ್ತದೆ. ಹೀಗಾಗಿ ಕೋರ್ಟಿನಲ್ಲಿ ಕೇಸು ಫೇಲ್ ಆಯಿತು. ಈಗ ಸುಪ್ರೀಂ ಕೋರ್ಟ್‌ಗೆ ಅಪೀಲ್ ಮಾಡಿದರು, ಅಲ್ಲಿಯೂ ಕೇಸ್ ನಿಲ್ಲಲಿಲ್ಲ. ಹೀಗಾಗಿ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಆ ಕೇಸನ್ನು ಗೆಲ್ಲುವುದಕ್ಕೇ ಆಗಲಿಲ್ಲ ಮತ್ತು ಇದರಿಂದಾಗಿ ಗ್ರಾಮಾಂತರ ಪ್ರದೇಶಗಳಿಂದ ಬಂದಂಥ ವಿದ್ಯಾರ್ಥಿಗಳಿಗೆ ಅನ್ಯಾಯವಾಯಿತು. ಇವತ್ತು ಭಾರತೀಯ ಜನತಾಪಕ್ಷ ಇರಬಹುದು, ಜನತಾ ದಳ ಪಕ್ಷ ಇರಬಹುದು, ಕಾಂಗ್ರೆಸ್ ಪಕ್ಷ ಇರಬಹುದು, ಈ ಗ್ರಾಮೀಣ ಕೃಪಾಂಕ ಇರಬೇಕೆಂದು ನಾವು ಎಲ್ಲರಿಗ ಹೇಳುತ್ತೇವೆ. ಆದರೆ ಅದು ವ್ಯವಸ್ಥಿತ ರೀತಿಯಲ್ಲಿ, ಕಾನೂನಿನ ಚೌಕಟ್ಟಿನಲ್ಲಿ ಇರಬೇಕಾದದ್ದು ಅವಶ್ಯಕ. ಮತ್ತೆ ನಾಳೆ ಯಾರೂ ಕೋರ್ಟಿನಲ್ಲಿ ಛಾಲೆಂಜ್ ಮಾಡಿದರೆ ಅದು ಬಿದ್ದು ಹೋಗಬಾರದು. ಸುಮ್ಮನೆ ನಾವು ತೋರಿಕೆಗೆ ಗ್ರಾಮೀಣ ವಿದ್ಯಾರ್ಥಿಗಳ ಕಣ್ಣು ಒರೆಸುವ ಸಲುವಾಗಿ ಏನೋ ಒಂದು ಆಕ್ಟ್ ಮಾಡಿ ಏನೋ ಒಂದು ಬಿಲ್ ಪಾಸ್ ಮಾಡಿ ನಾವು ಮಾಡಿದ್ದೇವೆ ಎಂದು ಹೇಳುವಂಥಾದ್ದು ಬೇಡ. ನಿಜವಾಗಿಯೂ ನಮಗೆ ಕಳಕಳಿಯಿದೆ ಎಂದು ತೋರಿಸಿ, ಅದನ್ನು ಸರಿಯಾದ ದಿಕ್ಕಿನಲ್ಲಿ ವಿಚಾರ ಮಾಡುವಂಥಾದ್ದು ಆಗಬೇಕು. ಇಲ್ಲದಿದ್ದರೆ ಬಹುಶ: ಇದು ಐವಾಶ್ ಆಗುತ್ತದೆ. ಈಗ ಮಾನ್ಯ ಹನುಮೇಗೌಡರು ರೈತರ ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ, ಗ್ರಾಮೀಣ ವ್ಯವಸ್ಥೆ ಬಗ್ಗೆ, ಅಭಿವೃದ್ಧಿ ಬಗ್ಗೆ ಇವತ್ತು ಎಲ್ಲ ರೀತಿಯಿಂದ

ನಿರ್ಲಕ್ಷ್ಯವಾಗುತ್ತಿದೆ ಎಂದು ಹೇಳಿದರು. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಇದು ಇವತ್ತಿನ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಬಂದಿದೆ. 'ಗ್ರಾಮೀಣಾಭಿವೃದ್ಧಿ ಯೋಜನೆಯ ಪೂರ್ಣ ಹಣ ಬಳಕೆಗೆ ರಾಜ್ಯ ವಿಫಲ' ಎಂದು ಇದೆ. ಈ ಬಗ್ಗೆ ನಿನ್ನೆ ಪಾರ್ಲಿಮೆಂಟ್‌ನಲ್ಲಿ ಒಂದು ಪ್ರಶ್ನೆ ಬಂದಿತ್ತು ಮತ್ತು ಅದಕ್ಕೆ ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರು ಉತ್ತರ ಕೊಟ್ಟಿದ್ದಾರೆ. ನಮ್ಮ ರಾಜ್ಯ ಕಳೆದ ಮೂರು ವರ್ಷಗಳಲ್ಲಿ 428 ಕೋಟಿ ರೂಪಾಯಿಗಳನ್ನು ಬಳಸಿಕೊಳ್ಳುವುದಕ್ಕೆ ವಿಫಲವಾಗಿದೆ ಎನ್ನುವಂಥಾದ್ದನ್ನು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

> "... ಕೇಂದ್ರ ಗ್ರಾಮೀಣಾಭಿವೃದ್ಧಿ ಯೋಜನೆಗಾಗಿ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾದ ಹಣವನ್ನು ಸಂಪೂರ್ಣವಾಗಿ ಬಳಸುವುದರಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಒಟ್ಟು 428 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಬಳಸದೇ ಬಿಟ್ಟಿದೆಯೆಂದು ಬುಧವಾರ ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಒದಗಿಸಲಾದ ಲಿಖಿತ ಉತ್ತರದಲ್ಲಿ ಕೇಂದ್ರದ ಗ್ರಾಮೀಣಾಭಿವೃದ್ಧಿ ಸಚಿವರು ತಿಳಿಸಿದ್ದಾರೆ. 1997-98ರಲ್ಲಿ ನಾನಾ ಗ್ರಾಮೀಣಾಭಿವೃದ್ಧಿ ಯೋಜನೆಗಾಗಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಒದಗಿಸಿದ ಹಣ 851.10 ಕೋಟಿ. ಅದರೊಳಗೆ ಬಳಕೆಯಾಗಿದ್ದು ಕೇವಲ 739.60 ಕೋಟಿ. ಅಂದರೆ 111 ಕೋಟಿ ರೂಪಾಯಿಗಳನ್ನು ನಾವು ಉಪಯೋಗ ಮಾಡಿಲ್ಲ. 1998-99ರಲ್ಲಿ 859.4 ಕೋಟಿಯಷ್ಟು ಹಣ ಬಂದಿದ್ದರೆ ಇದರಲ್ಲಿ ಬಳಕೆಯಾಗಿದ್ದು 684.26 ಕೋಟಿ. ಅಂದರೆ ಅವಾಗ 195 ಕೋಟಿಯನ್ನು ನಾವು ಉಪಯೋಗ ಮಾಡಿಕೊಳ್ಳಲಿಲ್ಲ. 1999-2000ದ ಕಳೆದ ಸಾಲಿನಲ್ಲಿ ಕೇಂದ್ರ ಸರ್ಕಾರ ಕೊಟ್ಟಿದ್ದು 677.52 ಕೋಟಿ. ಆದರೆ ಬಳಕೆಯಾದದ್ದು 555.49 ಕೋಟಿ. ಅಂದರೆ 127 ಕೋಟಿ ರೂಪಾಯಿಗಳನ್ನು ಕಳೆದ ಸಾಲಿನಲ್ಲಿ ನಾವು ಬಳಕೆ ಮಾಡಿಕೊಂಡಿಲ್ಲ. ಒಟ್ಟು 426 ಕೋಟಿ ರೂಪಾಯಿಗಳ ಬಳಕೆಯಾಗಿಲ್ಲ...."

ಅಂದರೆ 428 ಕೋಟಿ ಎಂದರೆ ಅದೇನು ಸಣ್ಣ ಮೊಬಲಗು ಅಲ್ಲ. ನಾವು 5 ಕೋಟಿ 10 ಕೋಟಿ ಬಗ್ಗೆಯೇ ಬಹಳಷ್ಟು ಚಿಂತನೆ ಮಾಡುತ್ತೇನೆ. 428 ಕೋಟಿ ರೂಪಾಯಿಗಳನ್ನು ಗ್ರಾಮೀಣಾಭಿವೃದ್ಧಿ ಸಲುವಾಗಿ ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ರಾಜ್ಯ ಸರ್ಕಾರ ಉಪಯೋಗ ಮಾಡಿಕೊಳ್ಳುವುದಕ್ಕೆ ವಿಫಲವಾಗಿದೆಯೆಂದರೆ ಇದರಿಂದ ಜನರಿಗೆ ಯಾವ ಸಿಗ್ನಲ್ ಹೋಗುತ್ತದೆ? ಗ್ರಾಮೀಣಾಭಿವೃದ್ಧಿ ಬಗ್ಗೆ ಇವರಿಗೆ ಏನೂ ಕಾಳಜಿ ಇಲ್ಲವೇನೋ ಎನ್ನುವುದು ಇದರ ಮೇಲೆ ವಿಚಾರ ಮಾಡಬಹುದು. ಈ ಬಗ್ಗೆ ಸರ್ಕಾರದ ಚಿಂತನೆ ಏನಿದೆ ಎಂಬುದು ಇದರ ಮೇಲೆ ಅರ್ಥವಾಗುತ್ತದೆ. ಅದಕ್ಕಾಗಿ ಈ ರೀತಿ ನಿರ್ಲಕ್ಷತೆಯನ್ನು ಸರ್ಕಾರ ತೋರಿಸುತ್ತಾ ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಗ್ರಾಮೀಣ ಕೃಪಾಂಕಕ್ಕೆ

ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟಿನ ಜಡ್ಜ್‌ಮೆಂಟ್ ಆದಮೇಲೆ ರಾಜ್ಯ ಸರ್ಕಾರ ಜಸ್ಟಿಸ್ ರಾಮಕೃಷ್ಣ ಅವರ ಆಯೋಗ ಒಂದನ್ನು ನೇಮಿಸುತ್ತು. ಆ ಆಯೋಗದವರು ಕೆಲವೊಂದು ಗೈಡ್‌ಲೈನ್ಸ್‌ನ್ನು ಅವರಿಗೆ ಕೊಟ್ಟಿದ್ದರು. ಆದರೆ ನನಗನ್ನಿಸುತ್ತದೆ ಬಹುಶ: ......

ಅಧ್ಯಕ್ಷರು :— ನಿನ್ನೆ ನಾವು ಇದಕ್ಕೆ ಕಾಲ ನಿಗದಿ ಮಾಡಿದ್ದು ಎರಡು ಗಂಟೆಗಳು. ಒಂದು ಗಂಟೆಯನ್ನು ನಿಮ್ಮ ಪಕ್ಷದವರೇ ತೆಗೆದುಕೊಂಡಿದ್ದಾರೆ. ಯಾವುದೇ ಕಾರಣಕ್ಕೆ 12-30 ಗಂಟೆಗೆ ನಾವು ಇದನ್ನು ಮುಗಿಸಲೇಬೇಕು.

ಶ್ರೀ ಸಿ. ಬೈರೇಗೌಡ :— ಇದರ ಬಗ್ಗೆ ಯಾರು ಮಾತನಾಡುತ್ತಾರೆ ಅವರಿಗೆ ಮಾತನಾಡುವುದಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು. ಏಕೆಂದರೆ ಇದೊಂದು ವಿಶೇಷವಾದಂಥ ಕಾನೂನು. ಈ ಸದನದ ಚರಿತ್ರೆಯಲ್ಲೇ ಇಂತಹ ವಿಚಾರಗಳು ಹಿಂದೆ ಚರ್ಚೆಯಾಗಿರಲಿಲ್ಲ. ಆದುದರಿಂದ ನಮಗೆಲ್ಲರಿಗೂ ಸ್ವಲ್ಪ ಮುಕ್ತವಾದ ಅವಕಾಶವನ್ನು ತಾವು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಬೇಕಾದರೆ ಇವತ್ತು ಸಾಯಂಕಾಲ ತಡವಾಗಿ ಕುಳಿತುಕೊಳ್ಳೋಣ.

ಅಧ್ಯಕ್ಷರು :— ಅವರಿಗೆ ಅವಕಾಶ ಕೊಡುವುದಕ್ಕೆ ನನ್ನ ಅಭ್ಯಂತರ ಇಲ್ಲ. ಆದರೆ ನಿನ್ನೆ ಬಿ.ಎ.ಸಿ. ಮೀಟಿಂಗ್‌ನಲ್ಲಿ ಇದಕ್ಕೆ ಕಾಲಾವಕಾಶ ನಿಗದಿಮಾಡಿದ್ದು ಎರಡು ಗಂಟೆಗಳು ಮಾತ್ರ.

ಶ್ರೀ ಸಿ. ಬೈರೇಗೌಡ :— ಅಲ್ಲಿ ಚರ್ಚೆಯಾಗಿದ್ದು ನಿಜ. ಆದರೆ ನಾವು ನಮ್ಮ ಭಾವನೆಗಳನ್ನು ವ್ಯಕ್ತಪಡಿಸಬೇಕಾಗುತ್ತದೆ. ಇದು ಒಂದು ವಿಶೇಷವಾದಂಥ ಪರಿಸ್ಥಿತಿ. ಯಾವತ್ತೂ ಈ ವಿಚಾರಗಳ ಬಗ್ಗೆ ಚರ್ಚೆಯಾಗಿರಲಿಲ್ಲ.

11.30 ಎ.ಎಂ.

ಅಧ್ಯಕ್ಷರು :— ನಿಮ್ಮ, ನಿಮ್ಮ ಪಕ್ಷಗಳಿಂದ ಇಬ್ಬರು ಅಥವಾ ಮೂರು ಜನ ಮಾತ್ರ ಮಾತನಾಡಿ. ನಿನ್ನೆ ಕಲಾಪ ಸಮಿತಿಯ ಸಭೆಯಲ್ಲಿ ಇನ್ನೂ ಹೆಚ್ಚು ಕಾಲ ನಿಗದಿ ಮಾಡಬೇಕೆಂದು ಹೇಳಿದ್ದರೆ ಚೆನ್ನಾಗಿತ್ತು.

ಶ್ರೀ ಧರ್ಮಸಿಂಗ್ :— ಇದಕ್ಕೆ ಇಂತಿಷ್ಟು ಕಾಲ ನಿಗದಿ ಮಾಡಬೇಕೆಂದು ನಿನ್ನೆಯೇ ತೀರ್ಮಾನವಾಗಿದೆ. ಅದಕ್ಕೆ ತಾವೂ ಒಪ್ಪಿದ್ದೀರಿ; ನಾವು ಒಪ್ಪಿಕೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ :— ಈ ವಿಷಯದ ಬಗ್ಗೆ ಸ್ವಲ್ಪ ಹೆಚ್ಚಿನ ಅವಕಾಶ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ :— ಒಂದು ದಿನ ಅಧಿವೇಶನ ಮುಂದಕ್ಕೆ ಹೋದರೆ ಏನಾಗುತ್ತೇ? ಇವತ್ತು ಆಗದೇ ಹೋದರೆ, ಇನ್ನೊಂದು ದಿನ ಕುಳಿತುಕೊಳ್ಳೋಣ. 3 ಕೋಟಿ ಜನಗಳ ಹಿತದೃಷ್ಟಿಯಿಂದ ಮಾಡತಕ್ಕ ಮಸೂದೆಯನ್ನು ಸ್ವಲ್ಪ ಸಮಯದಲ್ಲಿಯೇ ಹೇಗೆ ಪಾಸ್ ಮಾಡುವುದಕ್ಕಾಗುತ್ತದೆ? ಆದ್ದರಿಂದ, ಇನ್ನು ಒಂದು ದಿವಸ ಅಸೆಂಬ್ಲಿ ಕುಳಿತುಕೊಂಡರೆ ಏನೂ ಆಗಬಾರದ ಅನಾಹುತ ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ :— ಇಲ್ಲಿ ಬಹಳ ಜನರಿಗೆ ಅಸೆಂಬ್ಲಿ ನಡೆಸುವುದೇ ಬೇಕಾಗಿಲ್ಲ. ಇವರು ಬಿ.ಎ.ಸಿ.ನಲ್ಲಿ ಇನ್ನೂ ಎರಡು ದಿವಸ ಮುಂದೆ ಹಾಕಬೇಕೆಂದು ತೀರ್ಮಾನ ಮಾಡಿದ್ದರೆ ಏನಾಗುತ್ತಿತ್ತು? ಈಗ 2 ತಾಸು ಕೊಡಿ, 1 ತಾಸು ಕೊಡಿ ಎಂದು ಇವರು ಹೇಳುತ್ತಾರೆ.

ಶ್ರೀ ಧರ್ಮಸಿಂಗ್ :— ತಮ್ಮ ಪಕ್ಷದ ನಾಯಕರೂ ಬಿ.ಎ.ಸಿ.ನಲ್ಲಿ ಇದ್ದರು. ಈ ವಿಷಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಚರ್ಚೆಯಾಗಿದೆ. ಪ್ರತಿಯೊಂದು ವಿಷಯಗಳ ಬಗ್ಗೆ ಇಷ್ಟಿಷ್ಟು ಸಮಯ ಎಂದು ನಿಗದಿ ಮಾಡಲಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :— ನೂರು ದಿವಸ ಅಸೆಂಬ್ಲಿ ಮಾಡುತ್ತೇವೆಂದು ಹೇಳಿದ್ದು, ಇವತ್ತು ನೂರು ದಿವಸ ಇಲ್ಲವೇ ಇಲ್ಲ. ಇವತ್ತು ಗ್ರಾಮೀಣಕ್ಕೆ ಸಂಬಂಧಪಟ್ಟ ವಿಷಯ ಚರ್ಚೆಗೆ ಬಂದಿದೆ. ನಿನ್ನೆ ಮಾನ್ಯ ರಾಮಯ್ಯನವರು ನೊಂದುಕೊಂದು ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್ :— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ನಗರ ಪ್ರದೇಶಗಳಲ್ಲಿ ಇರುವ ಶಾಲೆಗಳ ವ್ಯವಸ್ಥೆಯನ್ನು ನಾವು ನೋಡಬೇಕು. ನಗರ ಪ್ರದೇಶಗಳಲ್ಲಿ ಇರುವಂಥ ಶಾಲೆಗಳಲ್ಲಿ ಶೇಕಡ 65 ಇಂಗ್ಲೀಷ್ ಮಾಧ್ಯಮದ ಶಾಲೆಗಳು ಇವೆ. ಶೇಕಡ 30 ಕನ್ನಡ ಮಾಧ್ಯಮದ ಶಾಲೆಗಳಿವೆ ಅಂದರೆ ಅವೆಲ್ಲ ಸರ್ಕಾರಿ ಶಾಲೆಗಳು. ಶೇಕಡ 5 ಕನ್ನಡ ಮಾಧ್ಯಮದ ಖಾಸಗಿಯವರ ಶಾಲೆಗಳು. ಈ ರೀತಿಯಿಂದ ವ್ಯವಸ್ಥೆ ಇದೆ. ಆದರೆ, ಗ್ರಾಮೀಣ ಪ್ರದೇಶಗಳಲ್ಲಿ ಬಹುಶ: ನೂರಕ್ಕೆ ನೂರರಷ್ಟು ಸರ್ಕಾರಿ ಶಾಲೆಗಳೆ ಇವೆ. ಎಲ್ಲವೂ ಕನ್ನಡ ಮಾಧ್ಯಮದ ಶಾಲೆಗಳೇ. ಅಲ್ಲಿ ಇಂಗ್ಲೀಷ್ ಮೀಡಿಯಂ ಶಾಲೆಗಳು ಇಲ್ಲ. ಹೀಗಾಗಿ, ಇವತ್ತು ಕೀಳರಿಮೆ ಬೆಳೆಯುತ್ತಿದೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಯಾರು? ಅಲ್ಲಿರುವವರು ಕೃಷಿ ಕಾರ್ಮಿಕರು, ಕೂಲಿಕಾರರ ಮಕ್ಕಳೇ ಅಲ್ಲಿಯ ಶಾಲೆಗಳಿಗೆ ಹೋಗಬೇಕು. ಮತ್ತು ರೈತರ ಮಕ್ಕಳೇ ಅಲ್ಲಿ ಹೋಗಬೇಕು. ಅಲ್ಲಿ ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಕಲಿಯುತ್ತಾರೆ. ನಗರ ಪ್ರದೇಶಗಳಲ್ಲಿ ಶೇಕಡ 65 ಇಂಗ್ಲೀಷ್ ಮಾಧ್ಯಮದ ಶಾಲೆಗಳು ಇದ್ದು, ಇಂಗ್ಲೀಷ್ ಮಾಧ್ಯಮದಲ್ಲಿ ವ್ಯಾಸಂಗ ಮಾಡುವಂತಾದ್ದು. ಅದರಲ್ಲಿಯೂ, ಕಂಪ್ಯೂಟರ್ ಬಂದಮೇಲೆ ಬಹುಶ: ನಮ್ಮ ಗ್ರಾಮೀಣ ವಿದ್ಯಾರ್ಥಿಗಳಿಗೆ ಒಂದು ಕೀಳರಿಮೆ ಉಂಟಾಗುತ್ತಿದೆ. ಇದು ಬಹಳ ದೊಡ್ಡ ಹೊಡೆತ ಬಿದ್ದಿದೆ. ಒಂದು ಸಾರಿ ಈ ಕೀಳರಿಮೆ

ಎಂಬುದು ಡೆವಲಪ್ ಆದರೆ, ಆ ವಿದ್ಯಾರ್ಥಿಯ ವ್ಯಕ್ತಿತ್ವಕ್ಕೆ, ಆತ್ಮವಿಶ್ವಾಸಕ್ಕೆ ಧಕ್ಕೆಯಾಗತ್ತ ವ್ಯವಸ್ಥೆಯಾಗುತ್ತದೆ. ಆದ್ದರಿಂದ, ನೀವು ಆ ಗ್ರಾಮೀಣ ಅಭ್ಯರ್ಥಿಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆನ್ನುವಂತಾದ್ದು ಬಹಳ ಮುಖ್ಯ ಎಂಬುದನ್ನು ನಾನು ಇವತ್ತು ಪ್ರಸ್ತಾಪ ನೋಡುತ್ತಿದ್ದೇನೆ. ನ್ಯಾಯಮೂರ್ತಿ ರಾಮಕೃಷ್ಣ ಅವರ ಆಯೋಗ ಏನಾಯಿತು? ಬಹುಶ: ಆ ಆಯೋಗದ ಉದ್ದೇಶ, ಆ ಆಯೋಗಕ್ಕೆ ಕೊಟ್ಟಂಥ ಗೊತ್ತುಗುರಿಗಳೇನು? ಬಹುಶ: ಅವರು ಕೆಲವೊಂದು ವರದಿಗಳನ್ನು ವಿವರವಾಗಿ ಬರೆದಿದ್ದಾರೆ. ಆದರೆ, ಇನ್ನೂ ಕೆಲವೊಂದು ಮಾಹಿತಿಗಳನ್ನು ನ್ಯಾಯಮೂರ್ತಿ ಆಯೋಗದವರು ಕೊಡಲಿಲ್ಲ. 1992 ರಲ್ಲಿ ಈ ಗ್ರಾಮೀಣ ಕೃಪಾಂಕದ ವ್ಯವಸ್ಥೆ ಬಂತು. ಇದು ಬರುವ ಮುನ್ನ, ಗ್ರಾಮೀಣ ಭಾಗದಿಂದ ಬಂದ ವಿದ್ಯಾರ್ಥಿಗಳಿರಬಹುದು ಅಥವಾ ಅಲ್ಲಿಯ ಯುವಕರಿರಬಹುದು; ಅಲ್ಲಿ ಸರ್ಕಾರಿ ಉದ್ಯೋಗಗಳು ಎಷ್ಟು ಜನರಿಗೆ ಸಿಕ್ಕಿದೆ ಎಂಬ ಅಂಕಿಸಂಖ್ಯೆಗಳು ಬರಬೇಕಾಗಿತ್ತು. ಏಕೆಂದರೆ, ಸರ್ಕಾರ ಇದೆ, ಸರ್ಕಾರಿ ಅಧಿಕಾರಿಗಳು ಇದ್ದಾರೆ. ಸರ್ಕಾರಿ ಕಛೇರಿಗಳು ಇವೆ. ಎಲ್ಲಾ ವರದಿಗಳೂ ಇವೆ. ಆಯೋಗದವರು ಆ ಅಂಕಿಸಂಖ್ಯೆಗಳನ್ನು ಹೇಳಬಹುದಾಗಿತ್ತು, ಆ ಅಂಕಿಸಂಖ್ಯೆಗಳು ನಮಗೆ ಸಿಗಲಿಲ್ಲ. ಮೂಲಭೂತವಾಗಿ, ಯಾವುದರ ಸಲುವಾಗಿ ಆಯೋಗ ರಚನೆ ಯಾಯಿತೋ? ಅಥವಾ ಆಯೋಗದ ಉದ್ದೇಶ ಏನು ಇತ್ತೋ? ಅದು ತನ್ನ ವರದಿಯಲ್ಲಿ ಈ ಅಂಕಿಸಂಖ್ಯೆಗಳನ್ನು ಕೊಡಲಿಲ್ಲ. ಮೂಲಭೂತವಾಗಿ ಇವತ್ತು ರೂರಲ್ ಮತ್ತು ನಗರ ಪ್ರದೇಶಗಳಿಗೆ ಹೋಲಿಕೆ ಮಾಡಬೇಕಾಗಿತ್ತು. ಅದರ ಬಗ್ಗೆ ವಿವರವಾದ ಹೋಲಿಕೆ ಸಿಗಲಿಲ್ಲ. ಅಲ್ಲಿದ್ದಂಥ ವ್ಯವಸ್ಥೆ ಮತ್ತು ಇಲ್ಲಿದ್ದಂಥ ವ್ಯವಸ್ಥೆಯ ಬಗ್ಗೆ ರಾಮಕೃಷ್ಣ ಆಯೋಗದವರು ವರದಿಯಲ್ಲಿ ಒಪ್ಪಿಕೊಂಡಿದ್ದಾರೆ. ಗ್ರಾಮೀಣ ಪ್ರದೇಶದಿಂದ ಬರುವ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಾ ಇದೆ. ಅಲ್ಲಿದ್ದಂಥ ಅವ್ಯವಸ್ಥೆ ಮತ್ತು ಅಲ್ಲಿರುವಂಥ ಸೌಕರ್ಯಗಳು ಮತ್ತು ನಗರ ಪ್ರದೇಶದಲ್ಲಿರುವ ಸೌಕರ್ಯಗಳು ಮತ್ತು ಅಲ್ಲಿರುವ ಶಿಕ್ಷಣ ಮಟ್ಟ ಇದರ ಹೋಲಿಕೆಯನ್ನು ಮಾಡಿದ್ದಾರೆ. ಆದರೆ, ಅದಕ್ಕೆ ತಕ್ಕಂಥ ಅಂಕಿಸಂಖ್ಯೆಗಳು ಇಲ್ಲ. ಹೀಗಾಗಿ ಅದು ಅಪೂರ್ಣವಾಯಿತು. ಆಗ ಇಂದಿರಾ ಸಹಾನಿ ಕೇಸ್‌ನಲ್ಲಿ ಸಂವಿಧಾನ ಪದ್ಧತಿಯ ಬಗ್ಗೆ ಶಾಕಡ 50ಕ್ಕಿಂತ ಹೆಚ್ಚು ರಿಸರ್ವೇಷನ್ ಕೊಡಬಾರದು ಎನ್ನುವ ಪ್ರಶ್ನೆ ಬಂತು. ಹಾಗಾದರೆ ನ್ಯಾಯಮೂರ್ತಿ ರಾಮಕೃಷ್ಣ ಅವರು ಒಬ್ಬರು ಹೈಕೋರ್ಟಿನ ಜಡ್ಜ್. ಅವರು ವರದಿ ಕೊಟ್ಟರು; ಅವರು ನಿವೃತ್ತಿಯಾಗಿದ್ದಾರೆ. ಇಂದಿರಾ ಸಹಾನಿ ಕೇಸ್ ಅವರಿಗೆ ಗೊತ್ತಿತ್ತೋ ಏನೋ ನನಗೆ ಗೊತ್ತಿಲ್ಲ. ಅವರು ಗ್ರಾಮೀಣ ಪ್ರದೇಶದಿಂದ ಬಂದ ವಿದ್ಯಾರ್ಥಿಗಳಿಗೆ ಶೇಕಡ 5 ಮೀಸಲಾತಿಯನ್ನು ಕೊಟ್ಟರು. ಅದು ವ್ಯಾಲಿಡ್ ಆಗುತ್ತಿತ್ತೋ ಅಥವಾ ಇಲ್ಲವೋ ಎಂಬ ಬಗ್ಗೆ ಚಿಂತನೆ ಮಾಡಲಿಲ್ಲ. ಈಗ ನಾವು, ನೀವು ಚಿಂತನೆ ಮಾಡುವುದಕ್ಕೆ ಹೋರಟಿದ್ದೇವೆ.

Sri D.B.Chandre Gowda :— Even in the first judgement,

> ``We affirm the observation made by the learned single Judge that the candidates who have already been selected and appointedd by giving rural weightage should not be disturbed, and also the persons appointed or selected during the pendency of these appeals until now, on the basis of the rural weightage...."

principle, they have accepted, but the only question is whether it comes under Art. 16(4). If that does not come By and large we may take a chance,

ಶ್ರೀ ಸಿ. ಬೈರೇಗೌಡ :— ಅನ್ಯಾಯವನ್ನು ಸರಿಪಡಿಸುವುದಕ್ಕೆ ಯಾವ ಆರ್ಟಿಕಲ್ ಇದೆ? ಆ ಆರ್ಟಿಕಲ್ ಅಡ್ಡಿ ಬರುವುದಾದರೆ, ಅದನ್ನು ಕಿತ್ತು ಬಿಸಾಕಬೇಕು.

ಶ್ರೀ ಡಿ.ಬಿ. ಸದಾನಂದಗೌಡ :— 50 ಪರ್ಸೆಂಟ್‌ಗಿಂತ ಮೀಸಲಾತಿ ಹೆಚ್ಚಾಗಬಾರದೆಂದು ಈಗಾಗಲೇ ಸುಪ್ರೀಂ ಕೋರ್ಟ್ ಹೇಳಿದೆ. ತಾವು ಈಗ 10 ಪರ್ಸೆಂಟ್ ರಿಸರ್ವೇಷನ್ ಕೊಡಬೇಕೆಂದು ಹೇಳುತ್ತೀರಿ. ಒಟ್ಟು ಆ 50 ಪರ್ಸೆಂಟಿನಲ್ಲೇ ಈ 10 ಪರ್ಸೆಂಟ್ ಆಗುತ್ತದೆಂಬ ನನ್ನ ಅನಿಸಿಕೆ. It is horizontal reservation.

ಶ್ರೀ ಡಿ.ಬಿ. ಚಂದ್ರೇಗೌಡ :— Horizontal means, it is reservation within the reservation. ಈಗ 50 ಪರ್ಸೆಂಟ್ ರಿಸರ್ವೇಷನ್ ಇದೆ. ಈ 50ರಲ್ಲಿ, ನಮಗೆ 5 ಸೀಟು ಬರುತ್ತವೆ. ಜನರಲ್ ಸೀಟ್ 50 ಇದೆಯಲ್ಲ, ಅದರಲ್ಲೂ 5 ಸೀಟು ಬರುತ್ತವೆ. ನಾವೇನು ಪ್ರಯತ್ನ ಮಾಡುತ್ತಿದ್ದೇವೆಂದರೆ, ಒಟ್ಟು 100 ಸೀಟುಗಳು ಇದ್ದರೆ, ಅದರಲ್ಲಿ 10 ಬರುತ್ತವೆ. ಆ 10 ಸೀಟುಗಳು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಹೋಗುತ್ತವೆ.

ಶ್ರೀ ಡಿ.ಬಿ. ಸದಾನಂದಗೌಡ :— ಈಗಾಗಲೇ 50 ಪರ್ಸೆಂಟ್ ರಿಸರ್ವೇಷನ್ ಇದೆ. ಸಂವಿಧಾನದ ಪ್ರಕಾರ 32 ಮತ್ತು 18 ಒಟ್ಟು 50. ಈ 50 ಪರ್ಸೆಂಟ್ ರಿಸರ್ವೇಷನ್‌ನಲ್ಲಿ ನಾವು ಪುನ: ರಿಸರ್ವೇಷನ್ ಮಾಡುವುದಕ್ಕಾಗುತ್ತದೆಯೇ?

Sri D.B. Chandre Gowda :— We are raising certain seats to the rural areas...

ಶ್ರೀ ಸಿ. ಬೈರೇಗೌಡ :— ಇವತ್ತು ಗ್ರಾಮೀಣ ಜನಸಂಖ್ಯೆ ಎಷ್ಟಿದೆ ನೀವು ಆಗ ರಿಸರ್ವೇಷನ್, ರಿಸರ್ವೇಷನ್ ಕೊಡುತ್ತಾ ಇದ್ದೀರಿ. ಅದೇನು ಹೆಚ್ಚಿನ ರಿಸರ್ವೇಷನ್ ಅಲ್ಲ,

ಅದು 50 ಜನರಲ್ಲಿ ಇದೆ. ಆದರಲ್ಲಿ ಗ್ರಾಮೀಣಕ್ಕೆ 70 ಹೋಗಬೇಕು. ಈಗ ನೀವು 10 ಮಾತ್ರ ಕಳುಹಿಸುತ್ತಿದ್ದೀರಿ, ಮತ್ತೆ ಅನ್ಯಾಯಮಾಡುತ್ತಿದ್ದೀರಿ. ಸುಮ್ಮನೇ ಹೀಗೆಯೇ ಇದ್ದರೆ ಒಂದು ಲೆಕ್ಕ. ಆ ಕಾರಣದಿಂದ, ನೀವು ಆ ರೀತಿಯಾಗಿ ಏನಾದರೂ ಒಪ್ಪಿಕೊಂಡರೆ, ಖಂಡಿತವಾಗಿಯೂ ನಾವು ಒಪ್ಪಿಕೊಳ್ಳಬಹುದು. ಇದಕ್ಕೆ ಚರ್ಚೆಯೇ ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ :— ಆ ರಿಸರ್ವೇಷನ್‌ನಲ್ಲೂ ಈಗ 50 ಇದೆ. ಹೆಣ್ಣುಮಕ್ಕಳಿಗೆ 30 ಪರ್ಸೆಂಟ್ ಇದೆ. 10 ಪರ್ಸೆಂಟ್ ನಿವೃತ್ತ ಸೈನಿಕರಿಗೆ ಇದೆ. ಅಂಗವಿಕಲ ಅಭ್ಯರ್ಥಿಗಳಿಗೆ 2 ಇದೆ. ಹೀಗೆ ಈಗಾಗಲೇ 50 ರಿಸರ್ವೇಷನ್ ಇದೆ. ಆದರೆ, ಹೆಣ್ಣುಮಕ್ಕಳಿಗೆ ಬಂದರೂ, ಗ್ರಾಮೀಣ ಹೆಣ್ಣುಮಕ್ಕಳಿಗೆ ಬರುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :— ಗ್ರಾಮೀಣ ಹೆಣ್ಣು ಮಕ್ಕಳಿಗೆ 70 ಪರ್ಸೆಂಟ್ ಕೊಡಿ. ನಾವು ಹೇಳುವುದು 60 ಪರ್ಸೆಂಟ್ ಅಲ್ಲ. ನೀವು ಮೀಸಲಾತಿಗೆ ಮೀಸಲಾತಿ ಮಾಡುತ್ತಿದ್ದೀರಿ. ಹೊಸದಾಗಿ ಮೀಸಲಾತಿಯನ್ನು ಕೊಡುತ್ತಿಲ್ಲ. ಈಗ 50 ಪರ್ಸೆಂಟ್ ಮೀಸಲಾತಿ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 18 ಪರ್ಸೆಂಟ್ ಇದೆ. ಆ 18 ಪರ್ಸೆಂಟ್‌ನಲ್ಲಿ ನೀವು 10 ಪರ್ಸೆಂಟ್ ಕೊಡುವುದಕ್ಕೆ ಹೋರಟಿದ್ದೀರಿ. ಗ್ರಾಮೀಣ ಜನಸಂಖ್ಯೆ ಎಷ್ಟು ಇದೆ? ಅದರ ಬದಲು ಅದರಲ್ಲಿ 70 ಪರ್ಸೆಂಟ್ ಕೊಟ್ಟು ಬಿಡಿ. ಅದನ್ನು ಕೊಡಿ, ಚರ್ಚೆ ಇಲ್ಲದೆ ಮುಗಿಸೋಣ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ಮತ್ತೆ ಕೋರ್ಟಿಗೆ ಹೋದರೆ ರಿಸ್ಕ್ ಆಗುತ್ತದೆ. ಆ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೇ, ನನ್ನದು ಒಂದು ವಿಚಾರವಿದೆ. ಮಾನ್ಯ ಮಂತ್ರಿಗಳ ಗಮನಕ್ಕೆ ಆ ಒಂದು ವಿಚಾರವನ್ನು ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ತಮಿಳುನಾಡಿನಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಕುಮಾರಿ ಜಯಲಲಿತಾ, ಅವರ ಮೇಲೆ ಏನಾದರೂ ಆರೋಪಗಳು ಇರಲಿ, ಅವರು ಏನಾದರೂ ಮಾಡಿರಲಿ, ಆಕೆ ಆ ಹಳ್ಳಿಯ ಜನಗಳ ಬಗ್ಗೆ ಎಷ್ಟೊಂದು ಕಾಳಜಿ ವಹಿಸಿ, ಹೋರಾಟ ಮಾಡಿದರು.

ಶ್ರೀ ಡಿ.ಬಿ. ಚಂದ್ರೇಗೌಡ :— ಅದು ಷೆಡ್ಯೂಲ್ 9ಕ್ಕೆ ಹೋಯಿತು.

ಶ್ರೀ ಕೆ.ಹೆಚ್. ಹನುಮೇಗೌಡ :— ನಾನು ಹೇಳುವುದು, ತಮಿಳುನಾಡಿನಲ್ಲಿ ಅಷ್ಟೈ ಆಗಿದ್ದು ಇಲ್ಲಿ ಏಕೆ ಅಷ್ಟೈ ಆಗುವುದಿಲ್ಲ? ಅದಕ್ಕೆ ನೀವು ಪ್ರಯತ್ನ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಹೇಗೆ ಮಾಡಬೇಕು ಅಂತ ಹೇಳಿ.

ಶ್ರೀ ಎಸ್. ಎಸ್. ಪಾಟೀಲ್ :— ಈಗ ತಾವು 10 ಪರ್ಸೆಂಟ್ ಕೊಡುತ್ತಿದ್ದೀರಿ. ನಿಮ್ಮ ಪ್ರಕಾರ ಅದೂ ತಪ್ಪೇ. ಅದನ್ನು 70 ಪರ್ಸೆಂಟ್ ಮಾಡಿ. ನೀವು ಜನಸಂಖ್ಯೆ ಆಧಾರದ ಮೇಲೆ ಕೊಡಿ. ನೀವೇನೂ ಹೆಚ್ಚಿನ ಮೀಸಲಾತಿಯನ್ನು ಕೊಡುತ್ತಿಲ್ಲ. ಹೆಚ್ಚಿನ ಮೀಸಲಾತಿಯನ್ನು ಕೊಟ್ಟರೆ ಅದು ತಪ್ಪು, ನಾನು ಒಪ್ಪಿಕೊಳ್ಳುತ್ತೇನೆ. ತಾವೇನು ರಾಮಕೃಷ್ಣ ಆಯೋಗವನ್ನು ರಚನೆ ಮಾಡಿದಿರಲ್ಲ ಅವರು 5 ಪರ್ಸೆಂಟ್ ಹೆಚ್ಚು ಮೀಸಲಾತಿಯನ್ನು ಕೊಡಿ ಅಂತ ಹೇಳಿದ್ದಾರೆ. ಅವರು ನ್ಯಾಯಾಧೀಶರಲ್ಲವೇ? ಅವರು ನ್ಯಾಯಾಧೀಶರಲ್ಲದಿದ್ದರೆ ಅವರನ್ನು ಏಕೆ ನೇಮಕ ಮಾಡಿದಿರಿ? ಅವರು ಹೈಕೋರ್ಟಿನ ನ್ಯಾಯಾಧೀಶರು. ಮೀಸಲಾತಿಗೆ ಮೀಸಲಾತಿ; ಹಳ್ಳಿಯಲ್ಲಿ ಜನಸಂಖ್ಯೆ ಎಷ್ಟು ಇದ್ದಾರೆ, ಸಿಟಿಯಲ್ಲಿ ಎಷ್ಟು ಜನಸಂಖ್ಯೆ ಇದೆ ಅದರ ಪ್ರಕಾರ ಮೀಸಲಾತಿಯನ್ನು ಕೊಟ್ಟುಬಿಡಿ. ಇದೆಲ್ಲ ಚರ್ಚೆಯೇ ಬೇಡ, ಇದನ್ನು ಮುಗಿಸೋಣ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ಇಲ್ಲಿ ಮುಖ್ಯವಾಗಿ ಕಾನೂನಿನ ಪ್ರಶ್ನೆ ಬರುತ್ತದೆ. ತಾವು ಹೇಳಿದಿರಿ 50 ಪರ್ಸೆಂಟ್ ಮೀಸಲಾತಿ ಇದೆ. ಮೀಸಲಾತಿಯಲ್ಲಿ ಮೀಸಲಾತಿ. ಅಂದರೆ ಇದು ಹಾರಿಜಾಂಟಲ್ ರಿಸರ್ವೇಷನ್, ವರ್ಟಿಕಲ್ ರಿಸರ್ವೇಷನ್ ಅಂತ ಬಂದಾಗ ನಾವು ಹೇಳಿದ್ದೇವೆ, ಇದು ಹಾರಿಜಾಂಟಲ್ ರಿಸರ್ವೇಷನ್, ಮೀಸಲಾತಿಯಲ್ಲಿ ಮೀಸಲಾತಿ. ಇನ್ನು 50 ಪರ್ಸೆಂಟ್ ಏನು ಮೀಸಲಾತಿ ಉಳಿಯಿತು ಆ ಪರ್ಸೆಂಟ್ ಮೀಸಲಾತಿಯಲ್ಲಿ 5 ಪರ್ಸೆಂಟ್ ಮೀಸಲಾತಿಯನ್ನು ಕೊಡಬೇಕಾಗುತ್ತದೆ. ಅಂದರೆ 5 ಪರ್ಸೆಂಟ್ ಈ ಕಡೆ ಹೋಯಿತು. ಈ ಮೀಸಲಾತಿ ಕೆಟಗರಿ ಇವೆಯಲ್ಲಾ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಓ.ಬಿ.ಸಿ ಇದರಲ್ಲಿ 5 ಪರ್ಸೆಂಟ್ ಹೋಯಿತು. ಅಲ್ಲಿಗೆ ನೀವು ಈ 5 ಪರ್ಸೆಂಟ್ ಮೀಸಲಾತಿಯನ್ನು ಕೊಟ್ಟಿರಿ. ಇನ್ನೂ ಈ ಕಡೆ 5 ಪರ್ಸೆಂಟ್ ಸೀಟು ಜನರಲ್‌ನಲ್ಲಿ ಬಂತು. ಅದಕ್ಕೆ ಇದು ಕಾನೂನು ಚೌಕಟ್ಟಿನಲ್ಲಿ ಇದೆಯೋ ಇಲ್ಲವೋ ಎನ್ನುವಂತಾದ್ದನ್ನು ನೋಡಬೇಕು. ಆಮೇಲೆ ಇಲ್ಲಿ ನಾವು ಮುಖ್ಯವಾಗಿ ಚಿಂತನೆ ಮಾಡುವಂಥಾದ್ದು, ನಾನು ಏಕೆ ಜಸ್ಟೀಸ್ ರಾಮಕೃಷ್ಣ ಆಯೋಗದ ಬಗ್ಗೆ ಹೇಳುವಂಥಾದ್ದು ಅಂದರೆ ಅವರು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರು; ಅವರ ಕಡೆಯಿಂದ ಒಂದು ಪರಿಪೂರ್ಣವಾದ ವರದಿ ಬರಬೇಕಾಗಿತ್ತು. ನಿಜವಾಗಿ ಹೇಳಬೇಕೆಂದರೆ, ಆ ವರದಿ ಪರಿಪೂರ್ಣ ವರದಿ ಅಲ್ಲ. ಗ್ರಾಮೀಣ ಕೃಪಾಂಕ ಇರಬೇಕೆನ್ನುವ ಕಳಕಳಿ ಎಲ್ಲರಿಗೂ ಇದೆ. ನಮಗೂ ಇದೆ, ನಿಮಗೂ ಇದೆ. ಇದು ಕಾನೂನು ಚೌಕಟ್ಟಿನಲ್ಲಿ ಬರುವ ರೀತಿಯಲ್ಲಿ ಏನೊಂದು ಪರಿಪೂರ್ಣವಾದ ವರದಿಯನ್ನು ಕೊಡಬೇಕಾಗಿತ್ತೋ ಆ ರೀತಿ ಆಗದೆ ಈ ವರದಿ ಅಪೂರ್ಣವಾಗಿದೆ ಎನ್ನುವುದು ನನ್ನ ವಾದ. ಆ ವರದಿ ಸರಿಯಾಗಿಲ್ಲ. ಆ ವರದಿ ಪ್ರಕಾರ ಏನೂ ಮಾಡುತ್ತಿಲ್ಲ. ಅವರು ಕೊಟ್ಟಂತಹ ವರದಿ ಬೇರೆ, ಅವರ ಸಲಹೆ ಸೂಚನೆಗಳೇ ಬೇರೆ, ತಾವು ಇವತ್ತು ಇಲ್ಲಿ ತಂದಿರತಕ್ಕಂಥ

ಪ್ರಸ್ತಾವವೇ ಬೇರೆ ಇದೆ. ಈ ಒಂದು ವಿಷಯದಲ್ಲಿ ಅವರು ಕೊಟ್ಟ ವರದಿ ಏನೂ ಸಹಾಯವಾಗಲಿಲ್ಲ ಎನ್ನುವಂತಹ ಒಂದು ಕೊರಗು ನಮಗೆ ಇದೆ. ಇಲ್ಲಿ ಮುಖ್ಯವಾಗಿ ನಾವು ಚಿಂತನೆ ಮಾಡುವಂಥಾದ್ದು, ತಾವು ಈಗ ಹೇಳಿದಿರಿ ಸಂವಿಧಾನ ಕಲಂ 16(4) ರ ಪ್ರಕಾರ ನಾವು ನೋಡಿದಾಗ ಮುಖ್ಯವಾಗಿ ಇಲ್ಲಿ ಒಂದು ಪ್ರಶ್ನೆ ಬರುತ್ತದೆ. ಹಿಂದೆ ನಾವು 1992 ರಲ್ಲಿ ನೋಡಿದಾಗ 15 ಪರ್ಸೆಂಟ್ ಇತ್ತು. ಆಮೇಲೆ 1994ರಲ್ಲಿ 5 ಪರ್ಸೆಂಟ್ ಆಮೇಲೆ 1997ರಲ್ಲಿ 15 ಪರ್ಸೆಂಟ್, ಆಗ ಏನಾಗುತ್ತಿತ್ತು ಅಂದರೆ ಆ ವಿದ್ಯಾರ್ಥಿ ತೆಗೆದುಕೊಂಡಂತಹ ಅಂಕಗಳ ಮೇಲೆ 10 ಪರ್ಸೆಂಟ್ ಸೇರ್ಪಡೆಯಾಗುತ್ತಿತ್ತು. ಅವನು 50 ಪರ್ಸೆಂಟ್ ತೆಗೆದುಕೊಂಡರೆ 10 ಪರ್ಸೆಂಟ್ ಸೇರಿ 60 ಪರ್ಸೆಂಟ್ ಆಗುತ್ತಿತ್ತು. ಈಗ ಇಲ್ಲಿ ತಾವು ಮೀಸಲಾತಿಯನ್ನು ಕೊಡುವುದಿದ್ದರೆ ಅದು 5 ಪರ್ಸೆಂಟ್ ಇರಲಿ, 10 ಪರ್ಸೆಂಟ್ ಇರಲಿ ಗ್ರಾಮೀಣ ವಿದ್ಯಾರ್ಥಿಗೆ ಆಗ ಏನು ಅವಕಾಶ ಸಿಗುತ್ತಿತ್ತೋ ಈ ಅವಕಾಶ ಈಗ ಈ ಮೀಸಲಾತಿಯಲ್ಲಿ ಸಿಗುವುದಿಲ್ಲ. ಇದನ್ನು ಏನಾದರೂ ಲೆಕ್ಕಾಚಾರ ಮಾಡಿದ್ದೀರೋ ಹೇಗೆ? ಇವತ್ತು ಸರ್ಕಾರದಿಂದ ನಮಗೆ ಆ ಅಂಕಿಅಂಶ ಬೇಕು. ನಾವು ಶೇಕಡ 10 ಪರ್ಸೆಂಟ್ ಏನು ಕೊಡುತ್ತಿದ್ದೆವು ಒಬ್ಬ ವಿದ್ಯಾರ್ಥಿಗೆ, ಅವನು ಶೇಕಡ 45 ಪರ್ಸೆಂಟ್, 55 ಪರ್ಸೆಂಟ್ ಅಂಕಗಳು ತೆಗೆದುಕೊಂಡಿದ್ದರೆ ಅದಕ್ಕೆ 10 ಪರ್ಸೆಂಟ್ ಅಂಕಗಳು ನಾವು ಸೇರಿಸುತ್ತಿದ್ದೆವು. ಆದರೆ ಈಗ ಇದು ಆಗಿಲ್ಲ. ಈಗ ಎಷ್ಟು ಖಾಲಿ ಹುದ್ದೆಗಳು ಇವೆಯೋ ಅದರಲ್ಲಿ 10 ಪರ್ಸೆಂಟ್ ಹುದ್ದೆಗಳು ಕೊಡುವಂಥಾದ್ದು ಇದೆ. ಆ ಸಂದರ್ಭದಲ್ಲಿ ಆ ಒಂದು ಅವಕಾಶ ಏನು ಇತ್ತು ಅದರಲ್ಲಿ ಎಷ್ಟು ಉದ್ಯೋಗಗಳು ಸಿಗುತ್ತಿತ್ತು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಇವತ್ತು ಇಷ್ಟು ಅವಕಾಶಗಳು ಸಿಗುವುದಿಲ್ಲ. ಆದರ ಬಗ್ಗೆ ತಾವು ಏನಾದರೂ ಲೆಕ್ಕಾಚಾರ ಮಾಡಿದ್ದೀರೋ ಹೇಗೆ? ಆ ಬಗ್ಗೆ ನನಗೆ ಮಾಹಿತಿ ಬೇಕು. 1992 ರಿಂದ 1997 ರವರೆಗೆ ಮತ್ತು ನಂತರ ಅಲ್ಲಿಯವರೆಗೆ, ಹೈಕೋರ್ಟಿನಿಂದ ಏನು ಜಡ್ಜ್‌ಮೆಂಟ್ ಆಯಿತು ಅಲ್ಲಿಯವರೆಗೆ ಅದು 5 ಪರ್ಸೆಂಟ್ ಇರಲಿ, 10 ಪರ್ಸೆಂಟ್ ಇರಲಿ, 15 ಪರ್ಸೆಂಟ್ ಇರಲಿ, ಈ ಅಂಕಿಅಂಶಗಳು ತಾವೇನು ಕೊಟ್ಟಿದ್ದೀರಿ ಅಲ್ಲಿ ಎಷ್ಟು ಜನರನ್ನು ತಾವು ನೇಮಕ ಮಾಡಿಕೊಂಡಿರಿ? ಅದು 5 ಸಾವಿರ ಇರಬಹುದು 10 ಸಾವಿರ ಇರಬಹುದು, ಅದರಲ್ಲಿ ಅವರಿಗೆ ಎಷ್ಟು ಪರ್ಸೆಂಟ್ ಸಿಕ್ಕಿದೆ? ಬಹುಶ: ನನಗನಿಸುತ್ತದೆ, ಅಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಆ ಮಾರ್ಕ್ಸ್ ಕೊಡುವುದರಿಂದ ಬಹಳ ಬೆನಿಫಿಟ್ ಆಗಿದೆ.

ಶ್ರೀ ಡಿ.ಬಿ. ಚಂದ್ರೇಗೌ :— ಮಾನ್ಯ ಅಧ್ಯಕ್ಷರೇ, ಹೈಕೋರ್ಟ್ ತೀರ್ಪು ಆದಮೇಲೆ ನಮ್ಮ ಇಲಾಖೆಯಲ್ಲಿ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ಸ್ ನೇಮಕ ಆಯಿತು. ಆದರಲ್ಲಿ ನಾವು ಏನೋ ಮಾಡಿ ಕೋರ್ಟಿನ ವ್ಯಾಪ್ತಿಯಿಂದ ಅದನ್ನು ಹೊರ ತರುವುದಕ್ಕೆ ಪ್ರಯತ್ನ ಮಾಡಿದೆವು. 68 ಜನ ಆಯ್ಕೆ ಆದರು. ಅದರಲ್ಲಿ 54 ಜನ ಗ್ರಾಮೀಣ ಕೃಪಾಂಕದ ಮೇಲೆ

ಬಂದರು. ಅದನ್ನು ಹೊಡೆದು ಹಾಕಿದ್ದಾರಲ್ಲ, ಹಿಂದಿನವರು ಏನು ಆಲೋಚನೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಜನಸಂಖ್ಯೆ ಆಧಾರದ ಮೇಲೆ ಮಾಡಿದರು. 20 ಸಾವಿರ ಜನಸಂಖ್ಯೆ, 50 ಸಾವಿರ ಜನಸಂಖ್ಯೆ ಆ ಕ್ಲಾಸಿಫಿಕೇಶನ್ ಸರಿ ಹೋಗಲಿಲ್ಲ. ಅದೇ ನಮಗೆ ತಾಪತ್ರಯಕ್ಕೆ ಬಂದಿದ್ದು. ಮೆಟೀರಿಯಲ್ ಎಲ್ಲಿದೆ ಕೊಡಿ ಅಂತ ಕೇಳಿದರು. ರಾಮಕೃಷ್ಣ ಆಯೋಗದವರು ಏನು ಮೆಟೀರಿಯಲ್ ಆಧಾರದ ಮೇಲೆ ತಯಾರು ಮಾಡಿದ್ದಾರೆ ಅದರಲ್ಲಿ ಎಲ್ಲಾ ಇಲಾಖೆಗಳು ಬಂದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಇಲ್ಲಿ ಕಾನೂನಿನ ಪ್ರಶ್ನೆಗಳು ಇವೆ. ಇವತ್ತು ನಾವು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಒಂದು ಭರವಸೆಯನ್ನು ಕೊಡಬೇಕಾಗುತ್ತದೆ. ಇವತ್ತು ನಾವೆಲ್ಲರೂ ನಿಮ್ಮ ಪರ ಇದ್ದೇವೆ. ಇವತತ್ತು ನೀವು ಏನು ಮಾಡುತ್ತಿದ್ದೇವೆ ಅದು ಕಾನೂನು ಬದ್ಧವಾಗಿ ಇರಬೇಕೆನ್ನುವ ಕಳಕಳಿ ಇದೆ. ಇದು ಸುಮ್ಮನೆ ಕಣ್ಣೊರೆಸುವ ತಂತ್ರ ಆಗಬಾರದು. ನಿಮಗೆ ಏನು ಕಾಳಜಿ ಇದೆ ಅದರ ಬಗ್ಗೆ ಚಿಂತನೆ ಆಗಬೇಕು ಎನ್ನುವಂತಾದ್ದು. ಮಾನ್ಯ ಮಂತ್ರಿಗಳು ಅಂಕಿಅಂಶಗಳು ಸಿಕ್ಕಿಲ್ಲ ಅಂತ ಹೇಳಿದರು, ದಯವಿಟ್ಟು ಆ ಅಂಕಿಅಂಶಗಳನ್ನು ತೆಗೆದುಕೊಳ್ಳಬೇಕು. 1992 ರಿಂದ ಇಲ್ಲಿಯವರೆಗೂ ಎಷ್ಟು ವಿದ್ಯಾರ್ಥಿಗಳಿಗೆ ಬೆನಿಫಿಟ್ ಆಗಿದೆ? ಈಗ ನಾವು ಮೀಸಲಾತಿ 10 ಪರ್ಸೆಂಟ್ ಕೊಟ್ಟರೆ ಅದಕ್ಕೆ ಸರಿಸಮನಾಗುತ್ತದೆಯೇ ಹೇಗೆ? ಹಿಂದೆ ಇದ್ದ ಪದ್ಧತಿಯಲ್ಲಿ ಆ ವಿದ್ಯಾರ್ಥಿಗಳಿಗೆ ಬೆನಿಫಿಟ್ ಆಗುತ್ತಿದ್ದರೆ ಈಗ ಈ ಮೀಸಲಾತಿಯಿಂದ ಆ ಬೆನಿಫಿಟ್ ತೆಗೆದುಕೊಳ್ಳುವುದಕ್ಕೆ ಆಗದಿದ್ದರೆ ಆಗ ಗ್ರಾಮೀಣ ವಿದ್ಯಾರ್ಥಿಗಳಿಗಮ ಹಿಂದೆ ಇದ್ದದ್ದೇ ಸರಿ ಎನ್ನುವ ಪ್ರಶ್ನೆ ಬರುತ್ತದೆ. ತಾವು ಇದನ್ನು ಸಾಕಷ್ಟು ಚಿಂತನೆ ಮಾಡಬೇಕು. ಇದು ಸಂವಿಧಾನಬದ್ಧವಾಗಿ ಆಗುತ್ತದೆಯೋ ಇಲ್ಲವೋ? ನಾಳೆ ಯಾರಾದರೂ ಇದನ್ನು ಚಾಲೆಂಜ್ ಮಾಡಿದರೆ ಆಗ ಇದು ಕ್ವಾಶ್ ಆಗುತ್ತದೆಯೋ ಏನೋ ಎನ್ನುವಂತಹ ಚಿಂತನೆ ಬರುತ್ತದೆ. ಇದಕ್ಕೆ ಪರ್ಮನೆಂಟ್ ಸಲ್ಯೂಷನ್ ಅಂದರೆ ತಮಿಳುನಾಡಿನಲ್ಲಿ ಇರುವ ರೀತಿ ಮಾಡಬೇಕು. ಮಾನ್ಯ ವೀರಪ್ಪಮೊಯ್ಲಿಯವರು ಮುಖ್ಯಮಂತ್ರಿಗಳಾಗಿದ್ದಾಗ 75 ಪರ್ಸೆಂಟ್ ಮೀಸಲಾತಿಯನ್ನು ಇಟ್ಟಿದ್ದರು. ಆಮೇಲೆ ಅದು 80 ಪರ್ಸೆಂಟ್ ವರೆಗೂ ಹೋಯಿತು. ಅದು ಕೋರ್ಟಿಗೆ ಹೋಗಿ ಚಾಲೆಂಜ್ ಮಾಡಿದಮೇಲೆ ಕ್ವಾಶ್ ಆಯಿತು. ಪುನಃ ಅದು 50 ಪರ್ಸೆಂಟ್ ಬಂತು. ಅದೇ ಸಂದರ್ಭದಲ್ಲಿ ತಮಿಳುನಾಡಿನಲ್ಲಿ ಮುಖ್ಯಮಂತ್ರಿಗಳಾಗಿದ್ದಂತಹ....

ಶ್ರೀ ಕಾಗೋಡು ತಿಮ್ಮಪ್ಪ :— 75 ಪರ್ಸೆಂಟ್ ಮೀಸಲಾತಿ ಅಂತ ಕಾನೂನು ಮಾಡಿದ್ದೆವು. ಆ ಮಧ್ಯೆಯಲ್ಲಿ ಸುಪ್ರೀಂ ಕೋರ್ಟಿನಿಂದ ಒಂದು ತೀರ್ಪು ಬಂತು. 50 ಪರ್ಸೆಂಟ್‌ಗಿಂತ ಜಾಸ್ತಿ ಮೀಸಲಾತಿ ಇರಬಾರದು ಅಂತ. ಆಗ 50 ಪರ್ಸೆಂಟ್ ಮಾಡಿದರು.

ಶ್ರೀ ಸಿ. ಬೈರೇಗೌಡ :— 50 ಪರ್ಸೆಂಟ್ ಮೀಸಲಾತಿ ಮೀರಬಾರದು ಅಂತ ಹೇಳಿದ್ದು ಸುಪ್ರೀಂ ಕೋರ್ಟ್. ಸುಪ್ರೀಂ ಕೋರ್ಟ್ ಕೊಟ್ಟಿರತಕ್ಕಂಥ ತೀರ್ಪನ್ನು

ಮಾರ್ಪಡಿಸುವುದಕ್ಕೆ ಪ್ರಯತ್ನ ನಡೆಯಬೇಕು. 50 ಪರ್ಸೆಂಟ್ ಮೀಸಲಾತಿ ಇರಬೇಕೆಂದು ಯಾವ ದೇಶದಲ್ಲಾದರೂ ಕಾನೂನು ಇದೆಯೇನು? ಅದು ಸುಪ್ರೀಂ ಕೋರ್ಟ್‌ನವರ ತೀರ್ಮಾನ ಅಷ್ಟೆ. ಅದನ್ನು ಬದಲಾವಣೆ ಮಾಡುವುದಕ್ಕೆ ಕಾನೂನು ಪ್ರಯತ್ನಗಳನ್ನು ನೀವುಗಳು ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ :— ಹಾಗಾದರೆ ತಾವುಗಳು ಪಾರ್ಲಿಮೆಂಟಿಗೆ ಹೋಗುವುದು ಒಳ್ಳೆಯದು.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ಇಷ್ಟೆಲ್ಲಾ ಕಾನೂನು ತೊಂದರೆಗಳು ಇವೆ. ಅದಕ್ಕೆ ನಮಗೂ ಒಂದು ದಾರಿ ಇದೆ. ತಮಿಳುನಾಡಿನ ಆಗಿನ ಮುಖ್ಯಮಂತ್ರಿಯವರಾಗಿದ್ದ ಕುಮಾರಿ ಜಯಲಲಿತಾರವರು ತಮ್ಮ ರಾಜಕೀಯ ಶಕ್ತಿಯಿಂದ, ಕೇಂದ್ರ ಸರಕಾರದ ಮೇಲೆ ಒತ್ತಾಯ ತರುವ ಮೂಲಕ ಆಗಿರಬಹುದು, ಒಟ್ಟಿನಲ್ಲಿ ಕೇಂದ್ರ ಸರಕಾರದ ಮೇಲೆ ಅವರು ಒತ್ತಡ ತಂದರು; ಆಗ ಮಾನ್ಯ ಪಿ.ವಿ. ನರಸಿಂಹರಾವ್‌ರವರು ಪ್ರಧಾನಿಯಾಗಿದ್ದರು, ಅಲ್ಲಿ ಈಗಲೂ 69 ಪರ್ಸೆಂಟ್ ಮೀಸಲಾತಿಯು ತಮಿಳುನಾಡಿನಲ್ಲಿದೆ. ಅವರು ಸಂವಿಧಾನದ ನೈನ್ತ್ ಶೆಡ್ಯೂಲ್‌ನಲ್ಲಿ ಅಮೆಂಡ್‌ಮೆಂಟ್ ತಂದರು. ಅದರ ಪರ್ಕಾರ ರಿಸರ್ವೇಶನನ್ನು ಫಿಕ್ಸ್ ಮಾಡಿಕೊಂಡರು. ಹೀಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ಚಾಲೆಂಜ್ ಮಾಡದ ಪರಿಸ್ಥಿತಿ ಬಂತು. ನಾವು ಈಗ ಯಾವ ಬಗ್ಗೆ ಚಿಂತನೆ ಮಾಡಬೇಕು? ಇವೊತ್ತು ನಾವು 10 ಪರ್‌ಸೆಂಟ್ ಮೀಸಲಾತಿ ತರುತ್ತೇವೆ ಎಂದಿಟ್ಟುಕೊಂಡರು ಆದರ ಮೇಲೆ ಯಾರಾದರೂ ಕೋರ್ಟಿಗೆ ಹೋಗಿ ಚಾಲೆಂಜ್ ಮಾಡಿ ಇದು ಕ್ಯಾನ್ಸಲ್ ಆದರೆ ನಾವು ಗ್ರಾಮೀಣ ಜನತೆಗೆ ಏನು ಮಾಡಿದ ಹಾಗೆ ಆಯಿತು? ಆಆದುದರಿಂದ ಈ ಬಗ್ಗೆ ಯಾವುದಾದರೂ ಒಂದು ಖಾಯಂ ಪರಿಹಾರವನ್ನು ಅನುಸರಿಸಬೇಕು. ಸಂವಿಧಾನ ತಿದ್ದುಪಡಿ ಮಾಡಲು ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವ ಕೆಲಸವನ್ನು ಮಾಡಬೇಕಾಗುತ್ತದೆ. ಆಗ ಮಾತ್ರ ನಾವು ಖಾಯಂ ಪರಿಹಾರವನ್ನು ಕಂಡುಕೊಂಡಂತಾಗುತ್ತದೆ. ಸುಮ್ಮನೆ ನಾವು ಇಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿದ್ದೇವೆ ಎಂದು ಹೇಳಿಕೊಂಡು ಹೋಗುವ ಬದಲು, ಅವರಿಗೆ ಒಂದು ರೀತಿಯಲ್ಲಿ ಅನ್ಯಾಯ ಮಾಡುವ ಬದಲು ಅವರಿಗೆ ಶಾಶ್ವತ ಪರಿಹಾರವನ್ನು ಒದಗಿಸಿಕೊಡಲು ಆ ಕ್ರಮಗಳನ್ನು ಅನುಸರಿಸಬೇಕು. ಜಸ್ಟೀಸ್ ರಾಮಕೃಷ್ಣನವರ ರಿಪೋರ್ಟ್ ಏನಿದೆ ಅದು ನಮಗೆ ಹೆಚ್ಚಿನ ಬೆಳಕನ್ನು ಚೆಲ್ಲುವ ಮೂಲಕ ದಾರಿ ದೀಪವಾಗಲಿಲ್ಲ. ಅದರಿಂ ನಮಗೆ ಏನೂ ಪ್ರಸ್ತಾವನೆ ಮಾಡಲಿಕ್ಕೂ ಆಗಲಿಲ್ಲ. ಇವೊತ್ತು ನಮಗೆ ಮೀಸಲಾತಿ ಬೇಡ ಎನ್ನುವ ಅಭಿಪ್ರಾಯವಿದೆ. ಹಿಂದೆ 1992-93ರಲ್ಲಿ ಯಾವ ವ್ಯವಸ್ಥೆ ಇತ್ತು 10-15 ಪರ್‌ಸೆಂಟ್... ಮಾರ್ಕ್ಸ್ ಕೊಡುವಂತಾದ್ದು, ಮಾನ್ಯ ಹನುಮೇಗೌಡರು, ಮಾನ್ಯ ಪಾಟೀಲರು ಹೇಳಿದ ಹಾಗೆ 70 ಪರ್ಸೆಂಟ್... ಮೀಸಲಾತಿ ಮಾಡಿದರೆ ಗ್ರಾಮಾಂತರದವರಿಗೆ ಅವಕಾಶಗಳು ಸಿಗುವುದಿಲ್ಲ. ಆದ್ದಾಗಿ ಹಿಂದಿನಂತೆ 10-15

ಅಂಕಗಳನ್ನು ಕೊಡುವ ವ್ಯವಸ್ಥೆಯಾಗಬೇಕು. ಹಾಗೆಯೇ ನೈನ್ತ್ ಶೆಡ್ಯೂಲ್‌ನಲ್ಲಿ ಸೇರಿಸುವ ವ್ಯವಸ್ಥೆಯು ಆಗಬೇಕು. ಅದನ್ನು ಬಿಲ್ ಮೂಲಕ ಮಾಡುವ ವ್ಯವಸ್ಥೆಯು ಗ್ರಾಮೀಣ ಅಭ್ಯರ್ಥಿಗಳಿಗೆ ಲಾಭಕಾರಿಯಾಗಿರುವುದಿಲ್ಲ. ಆದ್ದರಿಂದ ಆ ಕುರಿತು ಸಮಗ್ರ ಚಿಂತನೆಯಾಗಲಿ. ಆದಕ್ಕಾಗಿ ಪರಿಪೂರ್ಣವಾದಂಥ ಬಿಲ್‌ನ್ನು ನಾವು ತಂದರೆ ಅದು ಉತ್ತಮವಾದ ಪರಿಣಾಮವನ್ನು ತರುತ್ತದೆ. ಗ್ರಾಮೀಣ ಕೃಪಾಂಕವನ್ನು ಕೊಡಬೇಕೆಂದು ನಮ್ಮೆಲ್ಲರ ಇಚ್ಛೆಯಾಗಿದೆ. ಅದನ್ನು ನಾವು ಮನಃಪೂರ್ವಕವಾಗಿ ಸ್ವಾಗತಿಸುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ತಾವುಗಳು ತಮಿಳುನಾಡಿನಲ್ಲಿ ಇರುವ ನೈನ್ತ್ ಶೆಡ್ಯೂಲ್‌ನಲ್ಲಿ ಸೇರಿಸಿದ ವಿಚಾರ ಅದು ಇಂದಿರಾ ಸಹಾನಿ ಕೇಸ್‌ಗಿಂತ ಮುಂದೆ ಆದುದು. ಅದು ಸುಪ್ರೀಂ ಕೋರ್ಟ್‌ನ ಮುಂದೆ ಪೆಂಡಿಂಗ್ ಇದೆ. ನಾವು ಕೂಡ ನೈನ್ತ್ ಶೆಡ್ಯೂಲಿಗೆ ಸೇರಿಸಿ ಎಂದು ಬರೆದಿದ್ದೇವೆ. ಪೆಂಡಿಂಗ್ ಇರುವುದು ತೀರ್ಮಾನವಾಗಲಿ, ಕಾಯಬೇಕು ಎಂದು ನಮಗೆ ತಿಳಿಸಿದ್ದಾರೆ. ಅದುದರಿಂದ ನೈನ್ತ್ ಶೆಡ್ಯೂಲಿಗೆ ಸೇರಿಸುವ ವಿಚಾರದಲ್ಲಿ ಸರಕಾರ ನಿರ್ಲಕ್ಷ್ಯ ಮಾಡಿಲ್ಲ. ಆ ವಿಚಾರದಲ್ಲಿ ತಮಿಳುನಾಡಿನ ಪ್ರಕರಣ ಇತ್ಯರ್ಥವಾದ ಮೇಲೆ ಕ್ರಮ ಜರುಗಿಸಬಹುದು. ನಾವು ಬರೆದುದಕ್ಕೆ ಅವರು ಹಾಗೆ ನಮಗೆ ಸೂಚನೆ ಕೊಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :— ತಾವುಗಳು ತಮಿಳುನಾಡಿನವರು ಅನುಸರಿಸಿದ ಕ್ರಮವನ್ನು ಸ್ವಲ್ಪ ಸ್ಟಡಿ ಮಾಡಿ. ನಮ್ಮ ಪ್ರಕಾರ ನಮಗೆ ಮೀಸಲಾತಿ ಬೇಡ. ನಮಗೆ ಹಿಂದೆ ಕೋಡುತ್ತಿದ್ದ 10-15 ಪರ್ಸೆಂಟ್ ಅಂಕಗಳನ್ನು ಕೊಂಡುವುದನ್ನು ಮುಂದುವರೆಸಿ. ಆ ಬಗ್ಗೆ ಕಾನೂನು ಚೌಕಟ್ಟಿನಲ್ಲಿ ಬರುವಂತೆ ಏನು ಮಾಡಬೇಕೋ ಅದನ್ನು ಮಾಡಿ ಎಂಬುದು ನಮ್ಮ ಒತ್ತಾಯ. ಆಂಧ್ರ ಪ್ರದೇಶ, ಮಹಾರಾಷ್ಟ್ರ ವಿಧಬೇಗಳಲ್ಲಿ ಕೆಲವೊಂದು ವಿಶೇಷ ರಿಸರ್ವೇಶನ್ಸ್ ಇದಾವೆ ಅವರುಗಳು ಸಂವಿಧಾನ ತಿದ್ದುಪಡಿ ಮಾಡಿಕೊಂಡು ಮಾಡಿದ್ದಾರೆ. ಇವೊತ್ತು ತಾವುಗಳು ಇಂಥ ಪ್ರದೇಶ ಬಿಟ್ಟು ಉಳಿದಂತೆ ಗ್ರಾಮೀಣ ಕೃಪಾಂಕ ಬರುತ್ತದೆ ಎಂದು ಹೇಳಿದ್ದೀರಿ. ಆ ಒಂದು ಚೌಕಟ್ಟಿನೊಳಗೆ ಸಂವಿಧಾನ ತಿದ್ದುಪಡಿ ಮಾಡುವುದಾದರೆ ಮಾಡಿ. ಅಂಕಗಳನ್ನು ಕೊಡುವ ವ್ಯವಸ್ಥೆಯ ಬಗ್ಗೆ ಸೂಕ್ತ ಚಿಂತನೆಯಾಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೇ, ಇಂದಿರಾ ಸಹಾನಿ ಕೇಸ್ ವಿಚಾರವು ತಮಗೂ ಗೊತ್ತಿದೆ. ಅದರಲ್ಲಿ Reservation should not exceed 50% and reservation within reservation is permissible, provided reservation is made veritcally and only in the reserved category. ಈ 50 ಪರ್ಸೆಂಟ್ ಜನರಲ್ ಮೆರಿಟ್‌ನಲ್ಲಾಗಲೀ, ಅಥವಾ ಎಸ್‌ಸಿ : ಎಸ್‌ಟಿ 3-15 ಪರ್ಸೆಂಟ್ ಏನಿದೆ, 3 & 15%, which is an Act of Parliament you cannot meddle with it.

You cannot do any reservation; any reservation within general merit. Within OBC if it can be done, it can be done by an executive order. I think the Bill which you have brough in today, is full of flaws. It has got is own defects. It will not stand the test of law according to me. ನೀವು ಏನಾದರೂ ಮಾಡುವುದಾದರೆ ನೈನ್ತ್ ಶೆಡ್ಯೂಲ್‌ಗೆ ಸೇರಿಸತಕ್ಕಂಥಾದ್ದರ ಬಗ್ಗೆ ಚಿಂತಿಸಬೇಕು. We are not in favour of reservation of 10% to rural candidates. We will have 25% instead of 10%. We will urge the Centre to bring an amendment to the Constitution. That is the only way out. If you want to do it, it can be done within the Rules. ಹಾಗೆ ಮಾಡದಿದ್ದರೆ ಸುಮ್ಮನೆ ನಾವು ಜನರಿಗೆ ಏನೋ ಹೇಳುತ್ತಾ ಇದ್ದೇವೆ ಎಂದು ಅನಿಸುತ್ತದೆ. ನೀವು ಈಗ ಮಾಡುತ್ತಿರುವುದನ್ನು ರೂಲ್ಸ್ ಅಮೆಂಡ್‌ಮೆಂಟ್ ಮಾಡುವುದರ ಮೂಲಕವೂ ಮಾಡಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೇ, ಈ ವಿಚಾರದ ಕುರಿತು ಮುಕ್ತವಾದಂಥ ಚರ್ಚೆಯಾಗಬೇಕು. ಹೊಸದಾಗಿ ಒಂದು ವ್ಯವಸ್ಥೆ ಬಂದರೆ ಯಾವ ರೀತಿಯಾಗಿ ಈ ಶಾಸನವನ್ನು ಮಾಡಿಕೊಳ್ಳಬಹುದು ಎಂದು ಮಸೂದೆ ರೂಪದಲ್ಲಿ ಇದನ್ನು ತಂದಿದ್ದೇವೆ. ಇಲ್ಲವಾದಲ್ಲಿ ಮಾನ್ಯ ಸದಸ್ಯರು ಹೇಳಿದ ಹಾಗೆ ರೂಲ್ಸ್‌ನಲ್ಲಿ ಮಾಡಿಕೊಳ್ಳಬಹುದಾಗಿತ್ತು, ರೂಲ್ಸ್‌ನಲ್ಲಿ ನಾವು ಒಳಗಡೆ ಕುಳಿತುಕೊಂಡು ಮಾಡಿದರೆ ಇಲ್ಲಿ ಏನು ನಡೆದಿದೆ ಎಂಬುದು ದೇಶದ ಜನರಿಗೆ ಗೊತ್ತಾಗುವುದಿಲ್ಲ.

ಶ್ರೀ ಬಿ. ಸೋಮಶೇಖರ್ :— ನೀವು 10 ಪರ್ಸೆಂಟ್ ರಿಸರ್ವೇಶನ್ ಏನು ಮಾಡಬೇಕೆಂದಿದ್ದೀರಿ ಇದನ್ನು ನೀವು ಗುಟ್ಟಾಗಿ ಮಾಡಿದ್ದರೂ ಜನರಿಗೆ ಅನುಕೂಲವಾಗುತ್ತಿತ್ತು. ಈಗ ನೀವು ತರುವ ಬಿಲ್ಲು ಊರ್ಜಿತವಾಗುವುದಿಲ್ಲ. ಜನಗಳಿಗೆ ಸರಕಾರದವರು ಏನೋ ನಮ್ಮ ಪರವಾಗಿ ಮಾಡುತ್ತಿದ್ದಾರೆ ಎಂಬುದನ್ನು ತೋರಿಸಿದ ಹಾಗೆ ಆಗುತ್ತದೆ. ಅದರಿಂದ ಬೇರೆ ಪ್ರಯೋಜನವಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಈಗ ನಾವು ಮಹಿಳೆಯರಿಗೆ 30 ಪರ್ಸೆಂಟ್, ಎಕ್ಸ್-ಸರ್ವೀಸ್‌ಮೆನ್‌ಗೆ 10 ಪರ್ಸೆಂಟ್ ಮಾಡಿದ್ದೇವೆ, ಹಾಗೆಯೇ ಅಂಗವಿಕಲರಿಗೆ 5 ಪರ್ಸೆಂಟ್ ಪ್ರಾಜೆಕ್ಟ್ ಡಿಸ್‌ಪ್ಲೇಸ್ಡ್ ಪರ್ಸನ್ಸ್ ಯಾರಿದ್ದಾರೆ ಅವರಿಗೆ 5 ಪರ್ಸೆಂಟ್ ಮೀಸಲಾತಿ ಇಟ್ಟಿದ್ದೇವೆ. These are reservations within reservation. ನಾವು ಇಲ್ಲಿ ಹೊಸದಾಗಿ ಏನನ್ನೂ ಮಾಡುತ್ತಾ ಇಲ್ಲ. ಮಹಿಳೆಯರಿಗೆ 30 ಪರ್ಸೆಂಟ್ ಮೀಸಲಾತಿ ಅಂದರೆ ಒಟ್ಟಾರೆ ತೆಗೆದು ಒಂದು ಬ್ಲಾಕ್ ಇಡುವುದಿಲ್ಲ. ಅವರಿಗೆ ಜನರಲ್, ಎಸ್‌ಸಿ/ಎಸ್‌ಟಿ, ಹಿಂದುಳಿದ ವರ್ಗಗಳ ಕೋಟಾ - ಹೀಗೆ ಎಲ್ಲದರಲ್ಲಿಯೂ 30 ಪರ್ಸೆಂಟ್

ಬರುತ್ತದೆ. ಈ ರಿಸರ್ವೇಶನ್ಸ್ ಏನಿದೆ ಇದು ಗ್ರಾಮೀಣ ಪ್ರದೇಶದವರಿಗೆ ಹೆಚ್ಚು ಬರಬೇಕು. ಈಗ ಎಸ್‌ಸಿ/ಎಸ್‌ಟಿಯಲ್ಲಿಯೇ ಮುಂದುವರಿದ ಜನರಿಗೆ, ಅನುಕೂಲಗಳು ಇರತಕ್ಕಂಥ ಜನರಿಗೆ ಅದರ ಲಾಭ ಹೋಗುತ್ತದೆ. ನಮ್ಮ ಉದ್ದೇಶವು ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಇದರ ಲಾಭವು ಸಿಗಬೇಕೆಂಬುದಾಗಿರುತ್ತದೆ. ತಾವುಗಳು ಇಂದಿರಾ ಸಹನಿ ಕೇಸ್‌ನ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇಂದಿರಾ ಸಹನಿ ಕೇಸ್‌ನಲ್ಲಿ ಮತ್ತೊಂದು

12.00 ಪಿ.ಎಂ.

ಮೇಜರ್ ಡಿಸಿಶನ್ ಏನು ಮಾಡಿದ್ದಾರೆ ``We must however point that Clause 4 speaks of an adequate represeration and not a proportaional representation. ಅಂದರೆ ಈಗ ಅವರು ಪ್ರಪೋಶನೇಟ್ ಪ್ರಾತಿನಿಧ್ಯದ ಬಗ್ಗೆ ಮಾತನಾಡುತ್ತಿದ್ದಾರೆ, that is prohibited under the judgement. How do we do? ಆದ್ದರಿಂದ ನಾವೇನು ಹೇಳುತ್ತಿದ್ದೇವೆ..... ಈಗ 30% ಹೆಣ್ಣುಮಕ್ಕಳಿಗೆ ಮಾಡಿದ್ದೇವೋ ಇಲ್ಲವೋ....

ಶ್ರೀ ಎಸ್.ಎಸ್. ಪಾಟೀಲ್ :— ಹಾಗೆಯೇ ಇದನ್ನು 70 ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಈಗಾಗಲೇ 50 ಕೊಟ್ಟಾಗಿದೆಯಲ್ಲ, ಉಳಿದಿರುವುದೇ ಇನ್ನು 50.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಈಗ 30 ಪರ್ಸೆಂಟ್ ವುಮೆನ್‌ಗೆ 10 ಪರ್ಸೆಂಟ್ ಎಕ್ಸ್-ಸರ್ವೀಸ್‌ಮನ್‌ಗೆ, 5 ಪರ್ಸೆಂಟ್ ಅಂಗವಿಕಲರಿಗೆ 5 ಪರ್ಸೆಂಟ್ ನೀರಾವರಿ ಯೋಜನೆಗಳವರಿಗೆ, ಅದು ನಮ್ಮ ಕಾಲದಲ್ಲೇ ಆಯಿತು. ಇದನ್ನೆಲ್ಲ ಆರ್ಟಿಕಲ್ 16(1) ರಲ್ಲಿ ಮಾಡಲಾಗಿದೆ. Bill was not brought for these amendments. ಇದನ್ನೆಲ್ಲ ರೂಲ್ಸ್ ಅಮೆಂಡ್ ಮಾಡಿಯೇ ಮಾಡಿರುವುದು. ಅದೇ ರೀತಿ ಈಗಲೂ ಆರ್ಟಿಕಲ್ 16(1)ಕ್ಕೆ ತಿದ್ದುಪಡಿ ತಂದು ಇದನ್ನೂ ಮಾಡಬಹುದಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ :— ನಮ್ಮ ಉದ್ದೇಶವೇನೆಂದರೆ, let there be a wide range of discussion, so that we can also get some information and make the bill foolproof. This is all our concern. ಅದಕ್ಕೇ ನಾನು ಆಗಲೇ ಕೇಳಿದೆ, ನೀವಿರಲಿಲ್ಲ, ಲೇಟೆಸ್ಟ್ ತೀರ್ಪಿನಲ್ಲಿ ಅವರು ಏನು ಹೇಳುತ್ತಾರೆ ಅಂದರೆ they accpet in principle giving rural weightage. "We affirm the observations made by the learned Single Judge that the candidates who have already been selected and appointed by giving rural weightage should not be disturbed. They accept in principle. Also the persons appointed and selected during the pendency of these appeals until now, the basis of rural weightage. ಇದರ ಲಾಭ ಹೇಗೆ ತೆಗೆದುಕೊಂಡರು

ಅನ್ನುವುದನ್ನು ಆಗಲೇ ಹೇಳಿದೆ. ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್‌ದು ಸೆಲೆಕ್ಷನ್ ಆಗಿತ್ತು, ಲಿಸ್ಟ್ ಡಿಕ್ಲೇರ್ ಆಗಿರಲಿಲ್ಲ. ಆದರೆ ತೀರ್ಪು ಬರುವ ಒಂದೆರಡು ದಿವಸ ಮುಂದೆ I expected that and we released the list. 68 ಜನರಲ್ಲಿ 54 ಜನ ಗ್ರಾಮೀಣ ಕೃಪಾಂಕದಿಂದ ಆಯ್ಕೆಯಾದವರು. We have taken advantage of that. ಆದ್ದರಿಂದ ಇದು ಸಾಧ್ಯವೇ ಇಲ್ಲವೆಂದು ಸುಪ್ರೀಂ ಕೋರ್ಟ್ ಹೇಳಿದ ಮೇಲೆ ಇದರ ಲಾಭವನ್ನೂ ತೆಗೆದುಕೊಂಡೆವು. ನಮ್ಮ ಸರ್ಕಾರ ಬಂದಮೇಲೆ ಇದರ ಲಾಭ ತೆಗೆದುಕೊಳ್ಳಲಿಲ್ಲ. ಈ ಹಿನ್ನಲೆಯನ್ನೆಲ್ಲ ನೋಡಿಯೇ ಮಾನ್ಯ ನಾಯಕರಿಗೆ ನಾನು ಹೇಳಿದೆ; 10 ಇಲ್ಲದಿದ್ದರೆ 20 ಮಾಡೋಣ, ಆದರೆ ನೀವು ಹೇಳಿದಂತೆ 70ಕ್ಕೆ ಯಾಕೆ ಹೋಗುವುದಿಲ್ಲ ಅಂದರೆ ಆ ಮೀಸಲಾತಿಯಲ್ಲಿ 50 ಆಗಲೇ ಕೊಟ್ಟು ಬಿಟ್ಟಿದ್ದೇವೆ. ಹಾಗೆ ಇನ್ನು ಉಳಿದಿರುವ 50ರಲ್ಲಿ 70 ಕೊಡಿರಿ ಎಂದರೆ ನಾನು ಎಲ್ಲಿಂದ ಕೊಡಲಿ?

ಶ್ರೀ ಎಸ್.ಎಸ್. ಪಾಟೀಲ್ :— 30 ಪರ್ಸೆಂಟ್ ಹೆಣ್ಣುಮಕ್ಕಳಿಗೆ ಏನು ಕೊಟ್ಟಿದ್ದೀರೋ ಅದರಲ್ಲಿ 70 ಇವರಿಗೆ ಕೊಡಿ, 15 ಪರ್ಸೆಂಟ್ ಹರಿಜನರಿಗೆ ಕೊಡುತ್ತೀರಲ್ಲ ಅದರಲ್ಲಿ ಹಳ್ಳಿಯವರಿಗೆ ಕೊಡಿ. ನಾವು ಜನಸಂಖ್ಯೆವಾರು ಹಂಚಿರಿ ಅಂತ ಕೇಳುತ್ತಿರುವುದು. ಈಗೇನು 10 ಮಾಡಿದ್ದೀರಲ್ಲ ಅದರಿಂದ ಅನ್ಯಾಯವಾಗುತ್ತದೆ. ನಿಮಗೊಂದು ಉದಾಹರಣೆ ಹೇಳಿಬಿಡುತ್ತೇನೆ; ಮಾನ್ಯ ಅಧ್ಯಕ್ಷರೇ, 100 ನೇಮಕಾತಿ ಇದ್ದಾಗ ನೀವು ಹೇಳುವುದು ಕರೆಕ್ಟ್, ಆದರೆ ಒಂದು ಕಡೆ ಬರೀ 3 ಸೀಟು ತುಂಬಬೇಕು. ಅಲ್ಲಿ ಹೇಗೆ, ಹಳ್ಳಿಗೆಷ್ಟು ಕೊಡುತ್ತೀರಿ? ಹೇಳಿ. ಒಂದೂ ಹಳ್ಳಿಗೆ ಸಿಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಒಪ್ಪುತ್ತೇನೆ, ನಿಮ್ಮ ಸಿದ್ಧಾಂತದ ಜೊತೆಗೆ ನಾನು ಇದ್ದೇನೆ. ಆದರೆ ತೊಂದರೆಯೇನಿದೆ ಅಂದರೆ Adequate representation and not proportional representation. That is the judgement of the Supreme Court, How do I get over? Therefore, we have not used the word proportional.

ಶ್ರೀ ಎಸ್.ಎಸ್. ಪಾಟೀಲ್ :— ಹಾಗಾದರೆ 10 ಕೊಡುವುದು ತಪ್ಪು, ಪ್ರಪೊಶನ್ ಅನ್ನಬೇಡಿ. ಈಗ ಹೇಗೆ 10 ಎನ್ನುತ್ತೀರೋ ಅದನ್ನೇ 70 ಅಂದುಬಿಡಿ, ಅಷ್ಟೇ.

+ ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) :— ಮಾನ್ಯ ಅಧ್ಯಕ್ಷರೇ, ಈ ಒಂದು ವಿಧೇಯಕದ ಬಗ್ಗೆ ಚರ್ಚೆ ಮಾಡಲು ನನಗೆ ನಿಜವಾಗಿಯೂ ಸಂತೋಷವಾಗುತ್ತದೆ. ಕಾರಣ ಇಷ್ಟೇಕೆ; ಸುಮಾರು ಒಂದು ವರ್ಷದಿಂದ ಸರ್ಕಾರಕ್ಕೆ ಬಂದ ಸಣ್ಣಪುಟ್ಟ ತೊಂದರೆ, ಆತಂಕಗಳನ್ನು ಹೊರತುಪಡಿಸಿ ದೊಡ್ಡ ಆಘಾತಗಳು ಅಂದರೆ ರಾಜ್‌ಕುಮಾರ್‌ರ ಅಪಹರಣ ಮತ್ತು ಅವರ ಬಿಡುಗಡೆಯಲ್ಲಾದ ಸ್ವಲ್ಪ ವಿಳಂಬ, ಇದು ಭಾವನಾತ್ಮಕವಾದುದು. ಆದರೆ ನಾಡಿನ ಬದುಕಿಗೆ ಸಂಬಂಧಪಟ್ಟ ಎರಡು ಆಘಾತಗಳು, ಅದರೊಳಗೂ ಗ್ರಾಮೀಣ ಜನರ ಬದುಕಿಗೆ ಆದ ಎರಡು ಆಘಾತಗಳೆಂದರೆ, ನಮ್ಮನ್ನೆಲ್ಲ ಚಿಂತೆಗೀಡು ಮಾಡಿದವು, ಬೆಚ್ಚುವಂತೆ ಮಾಡಿದವು ಅಂದರೆ, ಒಂದನೆಯದು, ಬಹಳ ಶ್ರಮದಿಂದ ಹತ್ತಾರು

ವರ್ಷಗಳ ಕಾಲ ಅನೇಕ ಜನರ ಹೋರಾಟದಿಂದ ಗ್ರಾಮೀಣ ಪ್ರದೇಶದಿಂದ ಬರುವ ಮಕ್ಕಳಿಗೆ ಅವರು ಸರ್ಕಾರಿ ನೌಕರಿಗೆ ಸೇರುವಾಗ ಸ್ವಲ್ಪ ಸಹಾಯ ಮಾಡಬೇಕು ಎಂಬ ಉದ್ದೇಶದಿಂದ ಕೃಪಾಂಕ, ಕೃಪೆ ಅಂತ ಕರೆಯುವುದೇ ಬಹಳ ತಪ್ಪು, ನನ್ನ ಪ್ರಕಾರ, ಯಾರ ಕೃಪೇನೂ ನಮಗೆ ಬೇಕಾಗಿಲ್ಲ, it is a right; ಆದರೆ ಯಾಕೆ ಕೃಪಾಂಕ ಅಂತ ಇಟ್ಟರೋ? ಬೇರೆ ಹೆಸರು ಯಾಕೆ ಇಡಲು ಸಾಧ್ಯವಿಲ್ಲವೋ? ಈಗಲೂ ಅದನ್ನು ಪರಿಶೀಲನೆ ಮಾಡಬಹುದು, ಅಂತಹ ಕೃಪಾಂಕವನ್ನು ರದ್ದುಮಾಡಿದ್ದು ಮೊದಲನೆಯ ಆಘಾತ. ಇನ್ನು ಎರಡನೆಯ ದೊಡ್ಡ ಆಘಾತ ಎಂದರೆ, ಬಹುತೇಕ ಹಳ್ಳಿಗಾಡಿನ ಜನರಿಗೆ ಸಲ್ಲುತ್ತಿದ್ದ ಆಶ್ರಯ ಮನೆಗಳ ಯೋಜನೆಯನ್ನೇ ರದ್ದುಮಾಡಿದ್ದು. ರಾಜ್‌ಕುಮಾರ್‌ರವರನ್ನು ಬಿಡಿಸಿಕೊಂಡು ಬರುವುದರಲ್ಲಿ ಮಾನ್ಯ ಮುಖ್ಯಮಂತ್ರಿಗಳ ತಾಳ್ಮೆಯನ್ನು ಮೆಚ್ಚಿ ಅವತ್ತು ನಾನು ಹೇಳಿದ್ದೇನೆ, ಇವತ್ತು ಕೂಡ ಹೇಳುತ್ತಿದ್ದೇನೆ. ಎರಡು ದೊಡ್ಡ ಆಘಾತಗಳ ಬಗ್ಗೆಯೂ ನಾವೇನೂ ಮಾಡಲು ಬರುವುದಿಲ್ಲ, ಕೋರ್ಟ್ ತೀರ್ಪಿದೆ ಅಂತ ಪಕ್ಕಕ್ಕೆ ಇಟ್ಟು ಕೈಚೆಲ್ಲಿ ಕೂರಬಹುದಿತ್ತು. ಆದರೆ ಆಶ್ರಯ ಯೋಜನೆ ರದ್ದಾಗಿದ್ದಕ್ಕೆ, ಆದಕ್ಕೊಂದು ಕಾರ್ಪೋರೇಷನ್ ಮಾಡಿ ಮತ್ತೆ ಗ್ರಾಮೀಣರಿಗೆ ಮನೆ ಕೊಡುವ ವ್ಯವಸ್ಥೆ ಮಾಡಿದ್ದು, ಮತ್ತೆ ಏನಾದರೂ ಮಾಡಿ ಹಳ್ಳಿಗಾಡಿನ ಮಕ್ಕಳಿಗೆ ಕಿತ್ತುಕೊಂಡಿದ್ದ ಸವಲತ್ತನ್ನು ವಾಪಸ್ ಕೊಡಬೇಕೂಂತ ಯಾವುದೋ ಒಂದು ರೂಪದಲ್ಲಿ ಮತ್ತೆ ಅದನ್ನು ವಾಪಸ್ ಕೊಡಲಿಕ್ಕೆ ವ್ಯವಸ್ಥೆ ಮಾಡಿದ್ದು ಮಾನ್ಯ ಮುಖ್ಯಮಂತ್ರಿಗಳ ಜಾಣ್ಮೆಗೆ ಹಿಡಿದಂತಹ ಒಂದು ಕನ್ನಡಿ. ಆದಕ್ಕಾಗಿ ಸರ್ಕಾರವನ್ನು ನಾನು ಅಭಿನಂದಿಸುತ್ತೇನೆ.ಮಾನ್ಯ ಅಧ್ಯಕ್ಷರೇ, ಇದ್ದಂತಹ ಈ ಸವಲತ್ತನ್ನು ಕಿತ್ತುಕೊಳ್ಳಲು ಬಹಳ ಪ್ರಮುಖವಾದ ಕಾರಣ ಕೋರ್ಟಿನ ಎರಡು ಅಭಿಪ್ರಾಯಗಳು. ಜನ ಸಾಮಾನ್ಯರಿಗೆ ಇದೇನು ಕೋರ್ಟ್ ಇದನ್ನು ಕಿತ್ತುಕೊಂಡುಬಿಟ್ಟಿತಲ್ಲ, ಕೋರ್ಟ್ ತಪ್ಪು ಮಾಡಿಬಿಟ್ಟಿತೇನೋ ನ್ಯಾಯಾಧೀಶರು ಅಡ್ಡದಾರಿ ಹಿಡಿದರೇನೋ ಎಂಬ ಭಾವನೆ ಸಾಮಾನ್ಯ ಜನರಲ್ಲಿ ಬರುವಂತಹ ಮೇಲ್ನೋಟದ ಪರಿಸ್ಥಿತಿ ಸೃಷ್ಟಿಯಾಗಿದೆ. ಆದರೆ ಅಲ್ಲಿ ಇರುವ ಪರಿಸ್ಥಿತಿಯೇ ಬೇರೆ. ಅದೋನಪ್ಪಾ ಅಂದರೆ ಆ ತೀರ್ಪಿನ ಎರಡು ವಾಕ್ಯಗಳನ್ನು ಮಾತ್ರ ಓದಲು ನಾನು ಇಚ್ಛಿಪಡುತ್ತೇನೆ.

> "ಗ್ರಾಮೀಣ ಪ್ರದೇಶದಲ್ಲಿರುವ ಶಾಲೆಗಳು, ಅವುಗಳ ಶೈಕ್ಷಣಿಕ ಮಟ್ಟ, ಬೋಧನಾ ಪದ್ಧತಿ, ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತಹ ಯಾವುದೇ ತುಲನಾತ್ಮಕವಾದ ಅಧ್ಯಯನ ಈಡೇರುವ ಬಗ್ಗೆ ಯಾವುದೇ ವಿಷಯವನ್ನು ದಾಖಲೆಯ ಮೇಲೆ ರಾಜ್ಯವು ಮಂಡಿಸಿಲ್ಲ"

This is the crux of the matter. ಅಂದರೆ ದೇಶದಲ್ಲಿ ಈ ರಾಜ್ಯದಲ್ಲಷ್ಟೇ ಅಲ್ಲ, ವಿಶ್ವದಲ್ಲೇ ಅಂತ ಹೇಳಿದರೂ ಹೇಳಬಹುದು, ಗ್ರಾಮೀಣ ಪ್ರದೇಶದಲ್ಲಿರುವ ಸವಲತ್ತುಗಳಿಗೂ, ಪಟ್ಟಣ ಪ್ರದೇಶದಲ್ಲಿರುವ ಸವಲತ್ತುಗಳಿಗೂ, ಗ್ರಾಮೀಣ ಪ್ರದೇಶದಲ್ಲಿರುವ ಬಡತನ ಅಥವಾ ಆರ್ಥಿಕ ದುಸ್ಥಿತಿಗೂ, ಪಟ್ಟಣ ಪ್ರದೇಶದಲ್ಲಿರುವ ಒಳ್ಳೆಯ ಪರಿಸ್ಥಿತಿಗೂ ವ್ಯತ್ಯಾಸ ಇದೆಯೇ ಇಲ್ಲವೇ ಅನ್ನುವುದನ್ನು ನ್ಯಾಯಾಧೀಶರಿಗೇ ಗೊತ್ತಿದ್ದರೂ ಕೂಡ, ಅನೇಕ ಸಾರಿ ಒಂದು ಪದ್ಧತಿ ಇದೆ ಸ್ವಾಮಿ, ನ್ಯಾಯಾಧೀಶರು ತಮ್ಮ ಸ್ವಂತ ತಿಳುವಳಿಕೆಯನ್ನು

ತೀರ್ಪಿನಲ್ಲಿ ಸೇರಿಸಕೂಡದು ಅಂತ; ಹಾಗೆ ಗೊತ್ತಿದ್ದರೂ ಕೂಡ ನ್ಯಾಯಾಧೀಶರು ಹೇಳುತ್ತಾರೆ: The Government has failed to place the material to show that there is difference between the rural areas and the urban areas. ಆದ್ದರಿಂದ ಇದು ಕೋರ್ಟ್‌ನಿಂದಾಯಿತು ಎನ್ನುವುದಕ್ಕಿಂತ ಹೆಚ್ಚಾಗಿ ನಾನು ವಿಧಿ ಇಲ್ಲದೆ ಈ ಮಾತನ್ನು ಹೇಳಬೇಕಾಗುತ್ತದೆ, ಯಾರ ಮೇಲೂ ದೋಷಾರೋಪಣೆ ಮಾಡಲು ಹೇಳುತ್ತಿಲ್ಲ, ಅವತ್ತು ಆಡಳಿತ ಮಾಡುತ್ತಿದ್ದ ಸರ್ಕಾರ ಈ ಕೇಸನ್ನು ನಡೆಸುವುದರಲ್ಲಿ ಸಂಬಂಧಪಟ್ಟ ಕಾಗದಪತ್ರಗಳನ್ನು ಒದಗಿಸುವುದರಲ್ಲಿ ವಿಫಲವಾಗಿದೆ. ಎರಡನೆಯದು;

> "ನಗರ ಪ್ರದೇಶಗಳಲ್ಲಿ ಗುಡಿಸಲು ನಿವಾಸಿಗಳು ನತ್ತು ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳ ಶಿಕ್ಷಣ ಮಟ್ಟರೂ ಕೂಡ ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣ ಮಟ್ಟದಷ್ಟಾದರೂ ಇಲ್ಲವೆಂಬುದು ತಿಳಿದ ವಿಷಯವಾಗಿದೆ."

ಅಂದರೆ ಸರ್ಕಾರ ಸಾಕಷ್ಟು ಮೆಟೀರಿಯಲ್ಸ್ ಕೊಡಲಿಲ್ಲ. ಪಟ್ಟಣದಲ್ಲಿರುವವರ ಕೆಲವರ ಮಕ್ಕಳ ಶಿಕ್ಷಣದ ಮಟ್ಟ ಗ್ರಾಮೀಣ ಮಕ್ಕಳ ಶಿಕ್ಷಣದ ಮಟ್ಟಕ್ಕಿಂತ ಕಡಿಮೆಯಿದೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ವ್ಯತ್ಯಾಸವನ್ನು ನಾವು ಕಾಣಬೇಕಾಗುತ್ತದೆ; ಸವಲತ್ತುಗಳ ಲಭ್ಯತೆ ಮತ್ತು ಅದರ ಉಪಯುಕ್ತತೆ, ಇಲ್ಲಿ ಪ್ರಶ್ನೆ ಇರುವುದು ಉಪಯುಕ್ತತೆಯದಲ್ಲ; ಪ್ರಶ್ನೆ ಇರುವುದು ಲಭ್ಯತೆಯದು. ಹಳ್ಳಿಯಲ್ಲಿ ಲಭ್ಯತೆಯೇ ಇಲ್ಲ, ಆದರೆ ಪಟ್ಟಣದಲ್ಲಿ ಲಭ್ಯತೆ ಇದೆ, ಅದನ್ನು ಉಪಯೋಗಿಸಿಕೊಳ್ಳುವುದು, ಬಿಡುವುದು ಮತ್ತೊಂದು ವಿಚಾರ. ಈಗ ಸಾಹುಕಾರರ ಮಕ್ಕಳು, ಕಾರು ಇಟ್ಟಿರುವವರು ಕೂಡ ಲಭ್ಯವಿರುವ ಸವಲತ್ತುಗಳನ್ನು ಉಪಯೋಗಿಸಿಕೊಳ್ಳದೆಯೇ ದಡ್ಡರಾಗಿರುವುದು ಎಲ್ಲಾ ಕಡೆ ಇದೆ. ಆದ್ದರಿಂದ ಈ ಜಡ್ಜ್‌ಮೆಂಟ್‌ನಲ್ಲಿ ಅವರೇನು ಒಂದು ವಾದವನ್ನು ಮಂಡಿಸಿದ್ದಾರೋ ಲಭ್ಯತೆ ಇರುವಂಥ ಸವಲತ್ತನ್ನು ಪಟ್ಟಣದ ಮಕ್ಕಳು ಉಪಯೋಗಿಸಿಕೊಳ್ಳದಿದ್ದರೆ ಅದು ನಮಗೆ ಸೇರಿದಂಥ ವಿಷಯವಲ್ಲ. ಆ ಹಂತದಲ್ಲಿ ಇಷ್ಟು ಹೊತ್ತು ನಾನು ಕಾನೂನಿಗೆ ಸಂಬಂಧಪಟ್ಟ ಸಮರವನ್ನು ಆರಿಸುತ್ತಾ ಕುಳಿತ್ತಿದ್ದೆ. ಈ ನಾಡಿನ ನ್ಯಾಯಾಲಯಗಳು ಮತ್ತು ನ್ಯಾಯಾಧೀಶರುಗಳ ಬಗ್ಗೆ ನನಗೆ ಅತ್ಯಂತ ಗೌರವವಿದೆ. 18 ವರ್ಷಗಳ ಕಾಲ ಅತ್ಯಂತ ಗಂಭೀರವಾಗಿ ನನ್ನ ಹೊಟ್ಟೆಪಾಡಿಗಾಗ ಲಾಯರ್ ಕೆಲಸ ಮಾಡಿದವನು ನಾನು. ನಮ್ಮ ಮಾನ್ಯ ಹನುಮೇಗೌಡರು ಹ್ಯುತ್ತಿದ್ದರು, ಲಾಯರ್ ಕೆಲಸ ಅವರ ದೃಷ್ಟಿಯಿಂದ ಅದು ಉತ್ತಮವಾದಂಥ ಕಸುಬಲ್ಲ. ಮಾನ್ಯ ಸದಾನಂದಗೌಡರು ಅದಕ್ಕೆ ಧ್ವನಿ ಗೂಡಿಸಿದರು. ಆದರೆ ನಾನು ಈ ಮಾತನ್ನು ಒಪ್ಪಲಿಕ್ಕೆ ಸಿದ್ಧನಿಲ್ಲ. ನನ್ನ ದೃಷ್ಟಿಯಲ್ಲಿ ಅನ್ನಕೊಟ್ಟಂಥ ಇವತ್ತಿನ ನನ್ನ ಸ್ಥಿತಿಗೆ ಮೆಟ್ಟಿಲಾಗಿ ಒದಗಿಬಂದಂಥ ಕಸುಬು ಅದು ಅತ್ಯಂತ ಪವಿತ್ರವಾದುದು. ನೀವು ಸುಳ್ಳನ್ನು ಹೇಳುತ್ತೀರಾ ಎಂದು ಅವರು ಹೇಳಿದರು; ಏಕೆ ಲಾಯರ್ ಕೆಲಸ ಸರಿಯಾದುದಲ್ಲ, ಅಂದರೆ ಸುಳ್ಳು ಹೇಳಬೇಕಾಗುತ್ತದೆ. ಯಾರು ಸ್ವಾಮಿ ನಿಮಗೆ ಸುಳ್ಳು ಹೇಳುವುದಕ್ಕೆ ಹೇಳಿದ್ದು? ಎಲ್ಲಿದೆ?

ಶ್ರೀ ಕೆ.ಹೆಚ್. ಹನುಮೇಗೌಡ :— ನನ್ನ ನೋವನ್ನುನ್ನು ಹೇಳಿಕೊಂಡೆ. ಎಲ್ಲರಿಗೂ ಅಷ್ಟೈ ಮಾಡಿ ನಾನು ಹೇಳಲಿಲ್ಲ. ನನಗೇನೋ ಹಾಗೆನಿಸಿತು, ಹೇಳಿದೆ, ಅವರು ಹೇಳುವ

ಹೊತ್ತಿಗೆ ನಾನೂ ಹೀಗಾಯಿತು ಎಂದು ಹೇಳಿದೆ. ನಾನು ಹೇಳುವುದು ಈ ಗ್ರಾಮಾಂತರ ಪ್ರದೇಶದ ಹಳ್ಳಿ ಮಕ್ಕಳಿಗೆ ಏನು ನ್ಯಾಯವಾಗಿ ಸರ್ಕಾರದಿಂದ ಬರಬೇಕಾಗಿದೆಯೋ ಅದರ ಬಗ್ಗೆ ಎಲ್ಲರೂ ಕೂಡ ಒಮ್ಮತವಾಗಿ ಹೋರಾಟ ಮಾಡೋಣ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಿದ್ದಾರೆ ಅವರಿಗೂ ಕೂಡ ಒತ್ತಾಯವನ್ನು ತರೋಣ. ಎಲ್ಲರಿಗೂ ಹೇಳೋಣ. ಆದರೆ ಲಾಯರ್ ಕೇಸಲಸವನ್ನು ಏಕೋ ಬಿಟ್ಟೆ, ಅದು ಹೋಗಲಿ ಬಿಡಿ. ನಾನು ಎಲ್ಲರಿಗೂ ಇದನ್ನು ಹೇಳಲಿಲ್ಲ. ನನಗೆ ಮಾತ್ರ ರೆಫರ್ ಮಾಡಿಕೊಂಡಿದ್ದೇನೆ. ನನ್ನ ಕಾನ್ಷ್ಯನ್ಸ್‌ಗೆ ವಿರುದ್ಧವಾಯಿತು, ಬಿಟ್ಟೆ. ಅದು ಏನಿತ್ತೋ ಅದನ್ನು ನಿಜವಾಗಿ ಹೇಳಿಬಿಟ್ಟೆ.

ಶ್ರೀ ವೈ.ಕೆ ರಾಮಯ್ಯ :— ನಾನು ಈ ವಿಷಯಕ್ಕೆ ನೇರವಾಗಿ ಸಂಬಂಧ ಇಲ್ಲದಿದ್ದರೂ ಏತಕ್ಕೆ ಪ್ರಸ್ತಾಪ ಮಾಡಬೇಕಾಯಿತು ಎಂದರೆ ಲಾಯರ್ ಕೆಲಸದಲ್ಲಿ ನಾವು ಸುಳ್ಳು ಹೇಳುವುದಿಲ್ಲ. Just we will lend out time for a particular period, for a particular purpose.

ಶ್ರೀ ಕೆ.ಹೆಚ್. ಹನುಮೇಗೌಡ :— ನಿಮಗೆ ನೇರವಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನಿಜವಾಗಿ ಕೋರ್ಟಿನಲ್ಲಿ ಏನು ನಡೆಯಿತೋ ಅದರಂತೆ ಜಡ್ಜ್‌ಮೆಂಟ್ ಎಷ್ಟರಲ್ಲಿ ಆಗಿದೆ? ಅದನ್ನು ಹೇಳಿ.

ಶ್ರೀ ವೈ.ಕೆ. ರಾಮಯ್ಯ :— ದಯಮಾಡಿ ತಾವು ಕುಳಿತುಕೊಳ್ಳಿ, ನಾನು ಹೇಳುತ್ತೇನೆ.

ವೈಸ್ ಛೇರ್ಮನ್ :— ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ವೈ.ಕೆ. ರಾಮಯ್ಯ :— ನಾನು ಹೇಳಬೇಕಾಗಿರುವುದು ಉದ್ದೇಶ ಇಷ್ಟೆ; ಒಬ್ಬ ವಕೀಲನಾಗಿ ನಾನು ಏನು ಹೇಳುತ್ತೇನೆ ಎನ್ನುವುದು ಆ ಕೋಟನ್ನು ಬಿಚ್ಚಿಹಾಕಿ ಹೊರಗಡೆ ಬಂದ ಮೇಲೆ. ಕೋಟನ್ನು ಹಾಕಿ ಅಲ್ಲಿ ನಿಂತು ಮಾತನಾಡುವಾಗ ನಾನು ಮಾತನಾಡುವುದಿಲ್ಲ. ತಿಮ್ಮಕ್ಕ ಮಾತನಾಡುತ್ತಾಳೆ, ಬೋರಪ್ಪ ಮಾತನಾಡುತ್ತಾನೆ, ಶಿವಪ್ಪ ಮಾತನಾಡುತ್ತಾರೆ, ಚಂದ್ರಶೇಖರ್ ಮಾತನಾಡುತ್ತಾರೆ. ಹನುಮೇಗೌಡರು ಮಾತನಾಡುತ್ತಾರೆ. I do not know. I am lending my time for a particular period, for a particular purpose, to eke out my livelihood. ಯಾವನೋ ಕೂಲಿ ಕೊಟ್ಟು ಗಿಡವನ್ನು ಹಾಕಿಸಿರುತ್ತಾನೆ ಹನುಮೇಗೌಡರ ತೋಟದಲ್ಲಿ, 50 ರೂಪಾಯಿ ಕೂಲಿ ಕೊಟ್ಟು ಗಿಡವನ್ನು ಕಿತ್ತುಹಾಕಲು ಹೇಳುತ್ತಾರೆ. ಗಿಡ ಕಿತ್ತುಹಾಕಿದ್ದರಿಂದ ಅದರ ಪ್ರಾಣ ಹೋಯಿತು, ಗಿಡ ನಾಶವಾಯಿತು. ಅದೇ ರೀತಿ ವಕೀಲಿ ವೃತ್ತಿ ಮಾಡುವಂಥ ಸಂದ್ರಭದಲ್ಲಿ ನಾವು ಸುಳ್ಳು ಹೇಳುತ್ತೇವಾ, ನೀಜ ಹೇಳುತ್ತೇವಾ ಎನ್ನುವುದು it is the look out of the client. ನಮಗೇನು ಸಂಬಂಧ? ಅವನು ಏನು ಹೇಳುತ್ತಾನೋ ಅದನ್ನು ಇಲ್ಲಿ ಒದರುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ :— ನೀಜ ಹೇಳುವುದಾದರೆ, ನೀವು ಹೀಗೆ ಹೇಳಬೇಕು ಎಂದು ಅವನಿಗೆ ಹೇಳಿಕೊಡುತ್ತೇವೆ, ಏನು ನಡೆಯುತೋ ಅದನ್ನು ಸತ್ಯವಾಗಿ ಹೇಳಯ್ಯ ಎಂದು ಹೇಳುತ್ತೇವಾ?

ಶ್ರೀ ಎಸ್.ಎಸ್. ಪಾಟೀಲ್ :— ಒಂದು ಮಾತು ಹೇಳಬೇಕೆಂದರೆ, ಸತ್ಯವನ್ನು ಬಯಲಿಗೆ ಹಾಕಬೇಕಾದರೆ ಸುಳ್ಳು ಹೇಳಿದರೆ ತಪ್ಪೇನಲ್ಲ.

ಶ್ರೀ ವೈ.ಕೆ ರಾಮಯ್ಯ :— ಆ ವಿಷಯವನ್ನು ಅಲ್ಲಿಗೇ ಬಿಡುತ್ತೇನೆ. ಈ ಕೋರ್ಟುಗಳು, ನ್ಯಾಯಾಧೀಶರು, ನ್ಯಾಯಾಲಯಗಳು ನಾನು ಆಗಲೇ ಹೇಳಿದಂತೆ ನನಗೆ ಅತ್ಯಂತ ಗೌರವವುಳ್ಳಂಥವು. ಶ್ರೀಯತಿರಾಜಲು ನಾಯ್ಡು ಎಂದು ಒಬ್ಬರು ಹಿರಿಯ ವಕೀಲರಿದ್ದರು. ನಾವೆಲ್ಲಾ ಚಿಕ್ಕ ಚಿಕ್ಕ ವಕೀಲರಾಗಿದ್ದೆವು. ಈ ರಾಜ್ಯದ, ಈ ನಾಡಿನ ಈ ವಕೀಲಿ ವೃಂದದಲ್ಲಿ ಅತ್ಯಂತ ಗೌರವಾನ್ವಿತರಾಧಂಥ ವ್ಯಕ್ತಿ. ಅವರು ನಾನು ಚಿಕ್ಕ ವಕೀಲನಾಗಿದ್ದಾಗ ಒಂದು ಸಾರಿ ನನನ್ನು ಕರೆದು ಹೇಳಿದ್ದರು. ಆ ಜಾಗಕ್ಕೆ ನೀವು ಗೌರವ ಕೋಡಬೇಕು, ಏಕೆಂದರೆ ನೀನು 20 ವರ್ಷ ಪ್ರಾಕ್ಟೀಸ್ ಮಾಡಿ ಇನ್ನು ಲಾಯರ್ ಆಗಿರುತ್ತೀಯ, ಅವನು ನಾಲ್ಕು ವರ್ಷ ಪ್ರಾಕ್ಟೀಸ್ ಮಾಡಿ ಮುನ್ಸಿಫ್ ಆಗಿ ಕುಳಿತಿರುತ್ತಾನೆ, ಆದು ನಿನ್ನ ತಲೆಯಲ್ಲಿರಕೂಡದು. You must respect tjhe seat. not the infividual. ಆ ಒಂದು ದೃಷ್ಟಿಯಿಂದ ಯಾರು ಕುಳಿತ್ತಿದ್ದಾರೆ ಎನ್ನುವುದು ನಮಗೆ ಪ್ರಾಮುಖ್ಯವಲ್ಲ. ಆ ಸ್ಥಾನಕ್ಕೆ ಗೌರವ ಕೊಡಬೇಕು ಎನ್ನುವ ದೃಷ್ಟಿಯಿಂದ ನ್ಯಾಯಾಲಯಗಳನ್ನು, ನ್ಯಾಯಾಧೀಶರನ್ನು ಗೌರವಿಸುತ್ತೇವೆ. ಈ ವಿಷಯ ಏಕೆ ಇಷ್ಟು ಚರ್ಚೆಯಾಗಬೇಕಾಗಿತ್ತು? ಇದರ ಅವಶ್ಯಕತೆ ಏನು ಎನ್ನುವುದಕ್ಕೆ ನಮ್ಮ ಚಂದ್ರೇಗೌಡರು ಒಂದು ಒಳ್ಳೆಯ ಮಾತನ್ನು ಹೇಳಿದ್ದಾರೆ. ಈ ಚರ್ಚೆ ಕೇವಲ 10 ಪರ್ಸೆಂಟ್ ಕೃಪಾಂಕಗಳನ್ನು ಪಡೆಯಲಿಕ್ಕೆ ಆಗುವಂಥ ಚರ್ಚೆಯಾಗಿ ಸೀಮಿತವಾಗುವುದು ಬೇಡ. ಈ ನಾಡಿನಲ್ಲಿ ನ್ಯಾಯಾಧೀಶರಾಗಿ ನ್ಯಾಯವನ್ನು ಕೊಡುವಂಥವರಿಗೆ, ಈ ನಾಡಿನಲ್ಲಿ ಆಡಳಿತವನ್ನು ಮಾಡುವಂಥವರಿಗೆ, ಈ ನಾಡಿನಲ್ಲಿ ಅಭಿವೃದ್ಧಿಯ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವಂಥ ಅಧಿಕಾರಶಾಹಿಗಳಿಗೆ ನಾವು ಒಂದು ಸಂದೇಶವನ್ನು ಕೊಡಬೇಕಾಗುತ್ತದೆ. ಆ ಸಂದೇಶ ಯಾವುದು ಎಂದರೆ ನಿಮ್ಮ ಕೋರ್ಟ್ ತೀರ್ಪು ಏನು ಹೇಳುತ್ತದೋ ನನಗೆ ಗೊತ್ತಿಲ್ಲ. ನಿಮ್ಮ ಸಂವಿಧಾನದ ಆರ್ಟಿಕಲ್ 14, 15, 16, ಏನು ಹೇಳುತ್ತದೋ ಗೊತ್ತಿಲ್ಲ. ಆರ್ಟಿಕಲ್ 14 ಯಾವುದನ್ನು ಪ್ರೊಹಿಬಿಟ್ ಮಾಡುತ್ತದೋ ನನಗೆ ಗೊತ್ತಿಲ್ಲ. ಆದರೆ ನಮ್ಮ ಸಂದೇಶ ಮಾತ್ರ ಇದು. You must influence their minds while they are taking the decision, either a judge or an official. ಆ ಒಂದು ದೃಷ್ಟಿಯಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಈ ಒಂದು ಚರ್ಚೆಗೆ ಆ ಮಹತ್ವ ಬರಬೇಕಾಗುತ್ತದೆ. ಕೇವಲ ಇದಕ್ಕೇ ಸೀಮಿತಗೊಳಿಸುವುದು ಬೇಡ; ವಿಕೃತಗೊಳಿಸುವುದು ಬೇಡ. ಇದನ್ನು ಎಲ್ಲರೂ ಹೇಳಿದ ಮಾತಿಗೆ ನಾನು ಧ್ವನಿಗೂಡಿಸುತ್ತೇನೆ. ಯಾವುದ್ಯಾವುದೋ ವಿಷಯವನ್ನು ನಾವು ಚರ್ಚೆ ಮಾಡುತ್ತೇವೆ. ಈ ವಿಷಯಕ್ಕೆ ಸ್ವಲ್ಪ ವಿಶಾಲವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ನನ್ನ ಪ್ರಾರ್ಥನೆ ಇಷ್ಟೇನೆ; ನ್ಯಾಯಾಲಯದಲ್ಲಿ ನ್ಯಾಯವನ್ನು ಕೊಡುವಾಗ ಹಳ್ಳಿಗರಿಗೂ ಮತ್ತು ಪಟ್ಟಣದ ಮಕ್ಕಳಿಗೂ ವ್ಯತ್ಯಾಸ ಇದೆ ಎನ್ನುವಂತ ಸತ್ಯದ ಅರಿವು ಬಹುಶ: ಅತ್ಯಂತ ದಡ್ಡನಿಗೆ ಆಗುತ್ತದೆ, ಅತ್ಯಂತ ತಿಳುವಳಿಕೆ ಇಲ್ಲದೆ ಇರುವಂಥ ವ್ಯಕ್ತಿಗೆ ಆಗುತ್ತೆ. ಆದರೆ ನ್ಯಾಯಾಧೀಶರಿಗೆ ಇದು ಏಕೆ ಆಗಲಿಲ್ಲವೋ ಎನ್ನುವಂಥ ನೋವು ನನ್ನ ಮನಸ್ಸಿನಲ್ಲಂತೂ ಸಂಪೂರ್ಣವಾಗಿದೆ. ನನ್ನ ಸ್ನೇಹಿತರು ಯಾವುದೋ ಹೇಳುತ್ತಿದ್ದರು, ಈ ನ್ಯಾಯಾಧೀಶರು, ನ್ಯಾಯಾಲಯಗಳ

ಬಗ್ಗೆ, ಯಾರೋ ಒಬ್ಬರು ಕೇಸನ್ನು ಕೂಗಿಸಿದರಂತೆ. ಅವರ ಜಡ್ಜ್ ಹೇಳಿದರಂತೆ, 'ಹೇ, ಹೋಗಯ್ಯ, ನಿಮ್ಮ ಲಾಯರ್ ಅಲ್ಲೆಲ್ಲೋ ಮರದಕೆಳಗೆ ಕಳ್ಳೆಕಾಯಿ ತಿನ್ನುತ್ತಿದ್ದಾನೆ, ಕರೆದುಕೊಂಡು ಬಾ ಹೋಗು' ಎಂದರಂತೆ. ಅವನು ಲಾಯರ್ ಹತ್ತಿರ ಹೋಗಿಬಿಟ್ಟು 'ನೋಡಿ, ಸಾಹೇಬರು ಹೇಳುತ್ತಾರೆ, ನಿಮ್ಮ ಲಾಯರ್ ಕಳ್ಳೆಕಾಯಿ ತಿನ್ನುತ್ತಿದ್ದಾರೆ, ಕರೆದುಕೊಂಡು ಬಾ' ಎಂದು, ಬನ್ನಿ ಸ್ವಾಮಿ ಎಂದನಂತೆ. ಅದಕ್ಕೆ ಅವರು, ಸ್ವಾಮಿಯವರಿಗೆ ಹೇಳು, ಮರದ ಕೆಳಗೆ ಕಳ್ಳೆಕಾಯಿ ತಿನ್ನುತ್ತಿದ್ದ ಲಾಯರ್‌ಗಳೆಲ್ಲಾ ಜಡ್ಜ್‌ಗಳಾಗಿ ಹೋರಟುಹೋದರು' ಎಂದು ಹೇಳಿಬಿಡಪ್ಪ ಅಂದರಂತೆ. ಇದು ಜೋಕ್. ನಾನು ಏತಕ್ಕೆ ಇಷ್ಟು ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಮ್ಮ ಅರ್ಜಿ ನಮ್ಮ ಒಡಲಾಳದಲ್ಲಿ ಅಡಗಿರುವಂಥ ನೋವು, ಇದು ಆ ರಾಷ್ಟ್ರದಲ್ಲಿ ಜಡ್ಜ್‌ಮೆಂಟ್ ಬರೆಯುವಂಥವರಿಗೆ, ಆರ್ಡರ್‌ನ್ನು ಬರೆಯುವಂಥವರಿಗೆ, ಸಂವಿಧಾನ ಬರೆಯುವಂಥವರಿಗೆ, ಗೊತ್ತಿರಬೇಕು. ನಮ್ಮ ಹನುಮೇಗೌಡರು ಹೇಳುತ್ತಿದ್ದರು, ಯಾರು ಸಂವಿಧಾನವನ್ನು ಬರೆದವರು? ಯಾರು ಈ ದೇಶದಲ್ಲಿ ಆಡಳಿತ ಮಾಡುವವರು? ಅವರಿಗೆ ಸ್ವಲ್ಪ ಅರ್ಥವಾಗಲಿ ಸ್ವಾಮಿ. ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ. 'ಸಿರಿವಂತರು ಕಾನೂನುಗಳ ರಚಿಸುತಲಿಹರು, ಬಡವರು ಅದರೊಳಗೆ ಗೋಳಾಡುತ್ತಿಹರು' ಅದನ್ನೇ ನಿನ್ನೆಯಿಂದ ಒಂದೇ ಸಮನೇ ಹನುಮೇಗೌಡರು ಬಡಿದುಕೊಳ್ಳುತ್ತಲೇ ಇರುವರು. ಈ ಸದನದ ಮೂಲಕ ನಾನು ಮತ್ತು ನನ್ನ ಸ್ನೇಹಿತರು ಈ ನಾಡಿನಲ್ಲಿ ಜಡ್ಜ್‌ಮೆಂಟ್ ಬರೆಯುವಂಥವರಿಗೆ, ದೇಶ ಆಳುವಂಥವರಿಗೆ, ಕಾನೂನು ಕಟ್ಟಲೆಗಳನ್ನು ಮಾಡುವಂಥವರಿಗೆ ಒಂದು ಸಂದೇಶವನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಆ ಸಂದೇಶ ಯಾವುದೆಂದರೆ, ಈ ನಾಡಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಬದುಕುತ್ತಿರುವವರಿಗೂ ಮತ್ತು ಪಟ್ಟಣದಲ್ಲಿ ಬದುಕುತ್ತಿರುವವರಿಗೂ ವ್ಯತ್ಯಾಸವಿದೆ ಮತ್ತು ಅವರಿಗಾಗಿರುವ ಅನ್ಯಾಯ, ಆ ಅನ್ಯಾಯಕ್ಕೆ ಸಿಗಬೇಕಾದ ಪರಿಹಾರ, ಇದನ್ನು ಈ ನಾಡಿನ ಜನತೆ ಮೂಲಕ ಅವರಿಗೆ ಕೊಡಬೇಕು ಎನ್ನುವ ಉದ್ದೇಶದಿಂದ ಇದನ್ನು ಚರ್ಚೆ ಮಾಡಬೇಕು ಎಂದು ನಾವು ಒತ್ತಾಯವನ್ನು ಮಾಡುತ್ತಿದ್ದೇವೆ. ಯಾವುದೇ ಒಂದು ಸವಲತ್ತನ್ನು ಯಾವುದಾದರೂ ಒಂದು ವರ್ಗಕ್ಕೆ ಕೋಡಬೇಕಾದರೆ, ಮೀಸಲಾತಿಯನ್ನಾದರೂ ಕೊಡಿ ಇದರ ಬಗ್ಗೆ ಈಗಾಗಲೇ ಜಟಾಪಟಿಯಾಗಿದೆ. ನಾನು ಅದನ್ನು ಓಪನ್ ಮಾಡಲಿಕ್ಕೆ ಹೋಗುವುದಿಲ್ಲ. ಒಂದೇ ಒಂದು ಮಾತನ್ನು ಈ ವಿಷಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಂವಿಧಾನದ 14, 15, 16, ಅದರಲ್ಲೂ 16(4) ಇದರಲ್ಲಿ ರಿಸರ್ವೇಶನ್‌ಗೆ ಅವಕಾಶ ಇದೆ. ಆದೆ, ಆ ಜಡ್ಜ್‌ಮೆಂಟೇನೂ ಕೆಲವು ಇಂದಿರ ಸಹಾನಿಯವರದು ಇರಬಹುದು, ಇಂದಿರಾ ಸಹಾನಿಯವರ ಜಡ್ಜ್‌ಮೆಂಟ್ ಬಂದ ಹಿನ್ನಲೆ ಸೋಮಶೇಖರ್‌ರವರಿಗೆ ಗೊತ್ತಿರಬೇಕು. ಈ ರಾಷ್ಟ್ರದಲ್ಲಿ ಮೀಸಲಾತಿಯನ್ನು ತರಬೇಕೆಂದು ಅತ್ಯಂತ ಮನಃಪೂರ್ವಕವಾಗಿ ಪ್ರಯತ್ನಪಟ್ಟವರು ಮಾನ್ಯ ವಿ.ಪಿ. ಸಿಂಗ್‌ರವರು. ಇದಕ್ಕೆ ಪಕ್ಷಾತೀತವಾಗಿ ಈ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ: ಏನಾಯಿತು ಈ ದೇಶದಲ್ಲಿ? Can you recollect your memory? ಎಣ್ಣೆ ಹಾಕಿ ಸುಟ್ಟುಕೊಳ್ಳುವುದಕ್ಕೆ ಪ್ರಯತ್ನಪಟ್ಟರು; ಪ್ರಯತ್ನಮಾಡಿದರು; ಸುಟ್ಟುಕೊಂಡ ಹಾಗೆ ತೋರಿಸಿದರು. ಯಾರೂ ಸುಟ್ಟುಕೊಳ್ಳಲೂ ಇಲ್ಲ, ಸಾಯಲೂ ಇಲ್ಲ. ಸತ್ತರು ಎಂದು ಸುದ್ದಿ ಮಾಡಿದರು.

ನಮ್ಮ ಮಾನ್ಯ ರಂಗನಾಥ್‌ರವರು ಸರಿಯಾದ ಸಮಯದಲ್ಲೇ ಎದ್ದು ಹೋಗಿದ್ದಾರೆ. ರಾಷ್ಟ್ರಮಟ್ಟದಲ್ಲಿ ಈ ದೇಶದಲ್ಲಿ ಮೀಸಲಾತಿ ಪದ್ಧತಿಯನ್ನು ಮನ: ಪೂರ್ವಕವಾಗಿ ಕಾರ್ಯರೂಪಕ್ಕೆ ತರುವಂಥ ಪ್ರಯತ್ನ 1980ರ ದಶಕದಲ್ಲಿ ನಡೆದಾಗ ಅವತ್ತು ಈ ನಾಡಿನಲ್ಲಿ ನಡೆದಂಥ ಘಟನಾವಳಿಗಳು, ಸಂದರ್ಭಗಳು, ಸನ್ನಿವೇಶಗಳು ನಮ್ಮನ್ನು ಎಚ್ಚರಗೊಳ್ಳಿಸುತ್ತವೆ. ಇವತ್ತಿಗೂ ಕೂಡ ಪಟ್ಟಭದ್ರ ಹಿತಾಸಕ್ತಿಗಲು ನಮ್ಮನ್ನು ಹಿಡಿತದಲ್ಲಿಟ್ಟುಕೊಂಡಿವೆ. ಇದಾದುದು ಅದೇ. 1992-93 ರಲ್ಲಿ ಮಾನ್ಯ ಬಂಗಾರಪ್ಪನವರು ಗ್ರಾಮೀಣ ಮಕ್ಕಳಿಗೆ 15 ಕೃಪಾಂಕವನ್ನು ಕೊಟ್ಟರು. ಆದಾದಮೇಲೆ ಅದನ್ನು ಕಡಿಮೆ ಮಾಡಿದರು, ಕಾರಣವಿಷ್ಟ; ನಮ್ಮ ಮಾನ್ಯ ಚಂದ್ರೇಗೌಡರು ಎದ್ದು ಹೊರಟುಹೋಗಿದ್ದಾರೆ, ಬರೀ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಅಪಾಯಿಂಟ್‌ಮೆಂಟ್ ಒಂದರಲ್ಲೇ ಅಲ್ಲ, ಈ ರಾಜ್ಯದ ಹೈಸ್ಕೂಲ್ ಹೆಡ್ ಮಾಸ್ಟರ್ ಅಪಾಯಿಂಟ್‌ಮೆಂಟ್‌ನಲ್ಲೂ ಅದೇ ಆಯಿತು. ಕೃಪಾಂಕದ ಮೇಲೆ ಬಹಳಷ್ಟು ಜನ ಹೈಸ್ಕೂಲ್ ಹೆಡ್ ಮಾಸ್ಟರ್‌ಗಳಿಗೆ ಅಪಾಯಿಂಟ್ ಮಾಡಿದರು. ನಮ್ಮಲ್ಲಿ ಕೆಲವರಿಗೆ ಹೊಟ್ಟೆಯಲ್ಲಿ ಮಸೆದ ಹಾಗಾಗಿ ಬಿಟ್ಟಿತು. ಅವರನ್ನೇ ನಾವು ಪಟ್ಟಭದ್ರ ಹಿತಾಸಕ್ತಿಗಳೆಂದು ಕರೆಯುವುದು. ಯಾರಿಗಾದರೂ ತಮಗೆ ಸಿಗುವ ಸವಲತ್ತುಗಳು ಕಿಂಚಿತ್ತು ಬೇರೆಯವರಿಗೆ ದಕ್ಕಿದರೆ, ಇವರಿಗೆ ಸಿಗದೇ ಹೋದರೆ ಹೊಟ್ಟೆಯಲ್ಲಿ ಮಸೆದ ಹಾಗಾಗುತ್ತದೆ. 1993-94ರಲ್ಲಿ ನಾನು ಆ ಕಡೆ ಕೂತಿದ್ದೆ, ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದರು, ಇಡೀ ದಿವಸ ಚರ್ಚೆ ನಡೆಯಿತು. ಆದಾದ ಮೇಲೆ ಸಭೆ ಕರೆದರು, ಚರ್ಚೆ ಮಾಡಿದರು, ಐದಕ್ಕೆ ತಂದವರು ಯಾರೆಂದು ಕೂಗಿಕೊಳ್ಳುತ್ತಾರಲ್ಲ ಅವರೇ ಆಗ ಐದಕ್ಕೆ ತಂದಿದ್ದು. ಆದಾದಮೇಲೆ ಅಂಕವನ್ನು ಕಿತ್ತು ಹಾಗಿ 10 ಪರ್ಸೆಂಟ್‌ಗೆ ರಿಸರ್ವೇಶನ್ ತಂದರು. 14, 15, 16, ಸಂವಿಧಾನದ ಆರ್ಟಿಕಲ್ ವಿಷಯದಲ್ಲಿ ನನ್ನ ಅಭಿಪ್ರಾಯ ಇಷ್ಟು; The only remedy is to amend the Constitution. the only remedy is to include this matter in the 9th Schedule. There is no other altemativem there is no point in fighting between us. It is not our intention also. ಆದ್ದರಿಂದ ನಾನು ನನ್ನ ಸ್ನೇಹಿತರ ಜೊತೆಯಲ್ಲಿ ಸೇರಿಕೊಂಡು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಆ ವಿಧೇಯಕವನ್ನು ತರುವುದರ ಜೊತೆಗೆ 9ನೇ ಶೆಡ್ಯೂಲ್‌ನ ವಿಷಯವನ್ನು ಸೇರಿಸಬೇಕೆಂದು ಒಂದು ಠರಾವನ್ನು ಪಾಸ್ ಮಾಡುವುದು; ನಮಗೆ ಅರ್ಥವಾಗದೆ ಇರುವ ಮತ್ತೊಂದು ವಿಷಯ ಎಂದರೆ, ಯಾವುದಕ್ಕೂ ಅಡ್ಡಿ ಬರದೆ ಇರುವ ಆರ್ಟಿಕಲ್ ಈ ಮೀಸಲಾತಿಗೆ ಏಕೆ ಅಡ್ಡಿ ಬರುತತ್ತಿದೆ? ಮಹಿಳೆಯರಿಗೆ 33 ಪರ್ಸೆಂಟ್ ರಿಸರ್ವ್ ಮಾಡುವುದಕ್ಕೆ ಅಡ್ಡಿ ಬರಲಿಲ್ಲ, ಕುಂಟರು, ಕಿವುಡರಿಗೆ ರಿಸರ್ವೇಷನ್ ಮಾಡುವುದಕ್ಕೆ ಅಡಿ ಬರಲಿಲ್ಲ, ಸೈನಿಕರಿಗೆ ಮಾಡುವಾಗ ಅಡ್ಡಿ ಬರಲಿಲ್ಲ, ಈ ನತದೃಷ್ಟ ಹಳ್ಳಿಯ ಮಕ್ಕಳಿಗೆ ಕೇವಲ ಕೆಲವು ಪರ್ಸೆಂಟೇಜ್ ರಿಸರ್ವ್ ಮಾಡಿದರೆ ಸಂವಿಧಾನ ಹೋಯಿತು ಎಂದು ಬಡಿದುಕೊಳ್ಳುತ್ತಾರೆ. ಮಾನ್ಯ ಹನುಮೇಗೌಡರು ಹೇಳಿದ

ಧಾಟಿಯಲ್ಲಿ ನಾನೂ ಹೇಳಬೇಕಾಗುತ್ತದೆ. ಇದನ್ನು ಸ್ವಲ್ಪ ರಿಫ್ರೆನ್ಸ್ ಆಗಿ ಹೇಳುತ್ತೇನೆ, ಇದು ಪಟ್ಟಭದ್ರ ಹಿತಾಸಕ್ತಿಗಳ ಕುತ್ರಂತ್ರದ ಫಲ. ಆದ್ದರಿಂದ ಎಲ್ಲಿ ನಿಮಗೆ ಇಚ್ಛಾಶಕ್ತಿ ಉಂಟಾಗುತ್ತದೆ ಆಗ ಸಾಧಿಸುವುದಕ್ಕೆ ನಿಮ್ಮಿಂದ ಸಾಧ್ಯವಾಗುತ್ತದೆ.

ಶ್ರೀ ಬಿ.ಸೋಮಶೇಖರ್ :— ತಾವು ಬಹಳ ಚೆನ್ನಾಗಿ ಹೇಳಿದ್ದೀರಿ, ಯಾರು ಅದಕ್ಕೆ ವಿರೋಧ ಮಾಡುತ್ತಿದ್ದಾರೆಂದು ತಾವು ತಿಳಿದುಕೊಂಡಿದ್ದೀರಿ ಎಂದು ನನಗೆ ಅರ್ಥವಾಗುತ್ತಿಲ್ಲ. ನಮ್ಮ ಭಾಗದಲ್ಲಾಗಲಿ, ನಿಮ್ಮ ಭಾಗದಲ್ಲಾಗಲಿ ಈ ಬಿಲ್ ಬಗ್ಗೆ ನಿಜವಾದ ಕಳಕಳಿ ಇದ್ದರೆ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕೃಪಾಂಕ ಕೊಡಬೇಕಾದರೆ 9ನೇ ಶೆಡ್ಯೂಲ್‌ಗೆ ಸೇರಿಸತಕ್ಕಂಥದ್ದು ಬಹಳ ಅವಶ್ಯಕವಿದೆ ಅದಕ್ಕೆ ರೆಸಲ್ಯೂಷನ್ ಮಾಡಿ ಎಂದು ತಾವು ಹೇಳಿದ್ದೀರಿ, ನಾವು ಹೇಳಿದ್ದೇವೆ. ನಾವು ಯಾರೂ ವಿರೋಧ ಮಾಡುತ್ತಿಲ್ಲ. ಆದರೆ ಇದು ಊರ್ಜಿತ ಆಗಬೇಕಾದರೆ ಯಾವರೀತಿ ಮಾಡಬೇಕೆಂದು ಯೋಜನೆ ಮಾಡಬೇಕೇ ಹೊರತು ಈಗ ತಂದಿರತಕ್ಕ ಬಿಲ್ ಊರ್ಜಿತವಾಗುವುದಿಲ್ಲವೆಂದು ನನ್ನ ಅಭಿಪ್ರಾಯ.

ಶ್ರೀ ಡಿ.ವಿ. ಸದಾನಂದಗೌಡ :— ಇದಕ್ಕೆ ಕಾರಣ ಯಾರು ಎಂದು ಕೂಡ ನಾವು ಈಗ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಗ್ರಾಮೀಣ ಪ್ರದೇಶಗಳಿಗೆ ಬರುವಂತಹ ಎಲ್ಲ ಸವಲತ್ತುಗಳನ್ನು ಸದ್ವಿನಿಯೋಗ ಮಾಡದೇ ಇದ್ದಕಾರಣ ಹೀಗಾಗಿದೆ. ಈ ಬಗ್ಗೆ ಲೋಕಸಭೆಯಲ್ಲಿ ಮೊನ್ನೆ ಉತ್ತರ ಕೊಟ್ಟಿದ್ದಾರೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ 428 ಕೋಟಿ ರೂಪಾಯಿಗಳು ರಾಜ್ಯ ಸರ್ಕಾರದಲ್ಲಿ ಸದ್ಬಳಕೆ ಆಗಲಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ನಾವು ಕೂಡ ಆತ್ಮಾವಲೋಕನ ಮಾಡಿಕೊಳ್ಳಬೇಕು. ತಾವು ರೆಸಲ್ಯೂಷನ್ ಬಗ್ಗೆ ಹೇಳಿದಿರಿ, ನಾವು ಪೂರ್ಣ ಪ್ರಮಾಣದಲ್ಲಿ ತಮ್ಮ ಮಾತನ್ನು ಒಪ್ಪಿಕೊಳ್ಳುತ್ತೇವೆ. ಚರ್ಚೆ ಬೇಡ, ಈ ಬಗ್ಗೆ ರೆಸಲ್ಯೂಷನ್ ಮಾಡೋಣ. ಮಾನ್ಯ ಸೋಮಶೇಖರ್‌ರವರು ಹೇಳಿದ ರೀತಿಯಲ್ಲಿ ನಾವು ಯಾರೂ ಇದಕ್ಕೆ ವಿರೋಧವಿಲ್ಲ. ತಾವು ಹೇಳುವ ಧಾಟಿಯಲ್ಲಿ ಹಿಂದಿನ ಸರ್ಕಾರಗಳು ಯಾವುದೇ ಕೆಲಸಗಳನ್ನು ಮಾಡಿಲ್ಲ, ವ್ಯವಸ್ಥೆ ಬಗ್ಗೆ ಚಿಂತನೆ ಮಾಡಿಲ್ಲ ಎಂದು ಹೇಳುವುದರಲ್ಲಿ ನಮ್ಮ ಪೂರ್ತಿ ಸಹಾನುಭೂತಿ ಇದೆ. ಅದನ್ನು ಮಾಡೋಣ.

ಶ್ರೀ ಸಿ. ಬೈರೇಗೌಡ :— ನಾನು ಅರ್ಥ ಮಾಡಿಕೊಂಡಂತೆ ಮಾನ್ಯ ರಾಮಯ್ಯನವರು ಹೇಳತಕ್ಕದ್ದು, ಈ ದೇಶದಲ್ಲಿ ಯಾವ ರೀತಿಯಾಗಿ ಸಮಾಜ ಸೃಷ್ಟಿಯಾಗಿದೆ, ಇದನ್ನು ಮುಂದುವರಿಸಿಕೊಂಡು ಹೋಗುವ ಕೆಲಸ ಯಾವ ರೀತಿಯಾಗಿ ಮಾಡುತ್ತಾರೆಂದು ಹೇಳಿರುವುದು.

ಶ್ರೀ ವೈ.ಕೆ. ರಾಮಯ್ಯ :— ನಾವು ಈ ವಿಷಯವನ್ನು ವಿರೋಧ ಮಾಡುವುದಕ್ಕೆ ಮನಸಿಲ್ಲದಿದ್ದರೂ ಕೂಡ ವಿರೋಧ ಮಾಡಿದರೆ ಬೆಂಗಳೂರಿನಲ್ಲಿರುವ ಬಹುತೇಕ ಜನ ನಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ. ಅದ್ದರಿಂದ ವಿರೋಧ ಮಾಡುವುದಕ್ಕಾಗುವುದಿಲ್ಲ, ಮಾಡುತ್ತಿದ್ದಾರೆಂದು ನಾನು ಯಾರಿಗೂ ಹೇಲುವುದಿಲ್ಲ. ನನ್ನ ಅನಿಸಿಕೆ ಇಷ್ಟೆ, After the discussion with our full conscience, let us adopt the best course Let s not think within the framework of the parties.

ಶ್ರೀ ಎಸ್.ಎಸ್. ಪಾಟೀಲ್ :— ತಾವು ಏನು ಮಾತನಾಡುತ್ತೀರಿ, ಕೊನೆಗೆ ಬಂದಾಗ ಅಂಟಿಕೊಳ್ಳಿ, ಮತ್ತೆ ತಮ್ಮ ಪಕ್ಷವೆಂದು ಹೇಳಬೇಡಿ.

ಶ್ರೀ ವೈ.ಕೆ. ರಾಮಯ್ಯ :— ಮಾನ್ಯ ಅಧ್ಯಕ್ಷರೆ, ನಾನು ಇದನ್ನು ವಿರೋಧ ಮಾಡುತ್ತೇನೆಂದು ಹೇಳಲಿಲ್ಲ.

ಒಬ್ಬ ಮಾನ್ಯ ಸದಸ್ಯರು :— ಇದಕೇಕೆ ಅಂಟಿಕೊಳ್ಳಿ ಎಂದು ಎಸ್.ಎಸ್. ಪಾಟೀಲರು ಹೇಳಿದರು. ಅವರು ಸಹಕಾರ ಮಂತ್ರಿ ಇದ್ದಾಗ, ವೈಯಕ್ತಿಕವಾಗಿ ನಾನು ನಾಮಿನೇಷನ್‌ಗೆ ವಿರೋಧ ಇದ್ದೇನೆ, ಇದಕ್ಕೆ ನಾನು ಯಾವಾಗಲೂ ಅಂಟಿಕೊಳ್ಳುತ್ತೇನೆ; ನನ್ನ ಮಂತ್ರಿ ಪದವಿ ಹೋದರು ಚಿಂತೆ ಇಲ್ಲರೆಂದು ಹೇಳಿದರು, ಕೊನೆಗೆ ಪಕ್ಷದ ಒತ್ತಡದ ಮೇಲೆ ನಾನು ಅನಿವಾರ್ಯವಾಗಿ ಈಲ್ಡ್ ಆಗಬೇಕಾಯಿತು ಎಂದು ಹೇಳಿದರು.

ಶ್ರೀ ಎಸ್.ಎಸ್ ಪಾಟೀಲ್ :— ಇದೂ ಕೂಡ ಹಾಗೆ ಆಗುತ್ತದೆ, ಇವರ ಪರಿಸ್ಥಿತಿ ಎಷ್ಟರ ಮಟ್ಟಿಗೆ ಇದೆ ಎಂದು ಅರ್ಥವಾಯಿತು. ಒಂದೆರಡು ನಾಮಿನೇಷನ್ ಆದರೆ ಏನು ದೊಡ್ಡ ಅನಾಹುತವಾಗಲಿಲ್ಲ, ಆದರೆ ಹಳ್ಳಿಯಲ್ಲಿ ಅನಾಹುತವಾದರೆ ಅದರಿಂದ ಬಹಳ ಅನಾಹುತವಾಗತ್ತದೆ.

ಶ್ರೀ ವೈ.ಕೆ. ರಾಮಯ್ಯ :— ನಮ್ಮ ಎಲ್ಲ ಸ್ನೇಹಿತರಿಗೆ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕೃಪಾಂಕ ಕೊಡುವುದರಲ್ಲಿ ಎಷ್ಟು ಆಸೆ, ಆತಂಕ ಅಭಿಪ್ರಾಯ ಇದೆಯೋ ಅದಕ್ಕಿಂತ ಹೆಚ್ಚಿಗೆ ಇಲ್ಲದಿದ್ದರೂ, ಅದಕ್ಕಿಂತ ಕಡಿಮೆ ಈ ರಾಜ್ಯದ ಮುಖ್ಯಮಂತ್ರಿಗಳಾಗಲೀ, ನನಗಾಗಲಿ, ನಮ್ಮ ಪಕ್ಷದವರಿಗಾಗಲೀ ಇಲ್ಲ. ಅದ್ದರಿಂದ ಅವರೆಲ್ಲರ ಅಭಿಪ್ರಾಯ, ಈ ಚರ್ಚೆ ಆದಮೇಲೆ ಯಾವ ಒಂದ ತೀರ್ಮಾನದಿಂದ ಈ ಮಕ್ಕಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದಕ್ಕೆ ಸಾಧ್ಯರಾಗುತ್ತದೆ we will adopt the best course. ಅಂತಹ ತೀರ್ಮಾನಕ್ಕೆ ನಾವೆಲ್ಲರೂ ಬರುವುದಕ್ಕೆ ನನ್ನ ಅಭ್ಯಂತರವಿಲ್ಲ. ಕೃಪಾಂಕಕ್ಕಾಗಿ ವಾದ ಮಾಡುವ ಪರಿಸ್ಥಿತಿ ನನಗಿಲ್ಲ. ನಾನು ಈಗಾಗಲೇ ಹೇಳಿದ ಹಾಗೆ ಗ್ರಾಮೀಣ ಪ್ರದೇಶದಲ್ಲಿರುವ ಪರಿಸ್ಥಿತಿಗೂ ಪಟ್ಟಣದಲ್ಲಿರುವ ಪರಿಸ್ಥಿತಿಗೂ ಇರುವ ವ್ಯತ್ಯಾಸವೇನಿದೆ ಅದನ್ನು ಈ

ನಾಡಿನಲ್ಲಿ ಆಡಳಿತ ಮಾಡುವವರಿಗೆ, ನ್ಯಾಯ ಕೊಡುವವರರಿಗೆ, ಸಂವಿಧಾನ ರಚಿಸುವವರಿಗೆ ಅವರ ತಲೆಗೆ ಸ್ವಲ್ಪಹೊಕ್ಕಿಸುವ ಅವಶ್ಯಕತೆ ಇರುವುದರಿಂದ ನಾವೆಲ್ಲರೂ ಸೇರಿ ಆ ವಾತಾವರಣ ಕಲ್ಪಿಸಬೇಕಾಗಿದೆ. ಗ್ರಾಮೀಣ ಪ್ರದೇಶದ ಬದುಕಿನ ರುಚಿ ನಮ್ಮಲ್ಲಿ ಬಹಳಷ್ಟು ಜನರಿಗೆ ಇದೆ. ಇನ್ನು ಕೆಲವರಿಗೆ ಅದರ ವಾಸನೆ ಕೂಡ ಇದೆ. ನಾವೆಲ್ಲ ಆ ಬದುಕನ್ನು ಉಂಡು, ಆ ನೋವನ್ನು ಅನುಭವಿಸಿದವರು. ಇನ್ನು ಕೆಲವರು ಊಟ ಮಾಡಿ ರುಚಿ ಗೊತ್ತಿಲ್ಲದೆ ಇದ್ದರೂ ತಟ್ಟೆಯ ವಾಸನೆ ಕುಡಿಯುವಂತಹ ಅನುಭವ ಇದೆ. ವಿದ್ಯಾಭ್ಯಾಸಕ್ಕೆ ಸೀಮಿತವಾದ ಪರಿಸ್ಥಿತಿ ಬಗ್ಗೆ ಒಂದು ಸತ್ಯ ಘಟನೆ ಹೇಳಿದರೆ ಈ ಜಡ್ಜ್‌ಮೆಂಟ್ ಬರೆಯುವವರು, ಈ ಆರ್ಟಿಕಲ್ ಬರೆಯುವವರು ನಾಚಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ. ಸುಮಾರು 20 ವರ್ಷಗಳ ಹಿಂದೆ ನಡೆದ ಘಟನೆ. ಬೇಜರ ಹಳ್ಳಿಯಲ್ಲಿ ಒಬ್ಬ ವಿದ್ಯಾರ್ಥಿಯ ಜೀವನದಲ್ಲಿ ನಡೆದ ಘಟನೆ, ಅವರು ಇವತ್ತು ನ್ಯಾಯಸ್ಥಾನದಲ್ಲಿದ್ದಾರೆ. ನಾವೆಲ್ಲಾ ವಿದ್ಯಾಭ್ಯಾಸ ಮಾಡುವಾಗ ಇಂಗ್ಲೀಷ್ ಮತ್ತು ಗಣಿತ ಎಂದರೆ ನಮಗೆ ಚಳಿ ಜ್ವರ ಬರುತ್ತಿತ್ತು, ಈಗ ಪರಿಸ್ಥಿತಿ ಏನಾಗಿದೆ ನನಗೆ ಗೊತ್ತಿಲ್ಲ. ಬೆಳಿಗ್ಗೆ ಇಂಗ್ಲೀಷ್ ಪರೀಕ್ಷೆ ಇರುತ್ತದೆ, ಆ ಹುಡುಗ ಬೆಳಿಗ್ಗೆ ಎದ್ದು ನಾಲ್ಕು ಗಂಟೆಗೆ ಓದಿಕೊಳ್ಳುವುದಕ್ಕೆ ಮನೆಯಲ್ಲೆಲ್ಲಾ ಹುಡುಕಿದರು ದೀಪ ಹಚ್ಚುವುದಕ್ಕೆ ಬೆಂಕಿ ಪೊಟ್ಟಣ ಸಿಗಲಿಲ್ಲ. ಅವರ ಅಪ್ಪನ ಹತ್ತಿ ಹೋಗಿ, 'ನನಗೆ ಬೆಂಕಿಪೊಟ್ಟಣ ಕೊಡು, ನನಗೆ ಬೆಳಿಗ್ಗೆ ಇಂಗ್ಲೀಷ್ ಪರೀಕ್ಷೆ ಇದೆ, ನಾನು ಓದಿಕೊಳ್ಳಲೇಬೇಕೆಂದು ಹೇಳಿದರೆ, ಅವನು ಯಾರ ತೋಟದಲ್ಲಿ ಕೂಲಿ ಮಾಡಿ ಬಂದಿದ್ದನೋ 'ಏ ಬಿದ್ದುಕೋ ಹೋಗೋ, ಎಲ್ಲಿಯ ಬೆಂಕಿಪಟ್ಟಣ ತಂದಿದ್ದೀ." ಎಂದು ಹೇಳುತ್ತೇನೆ. ಆ ಹುಡುಗನಿಗೆ ಒಳಗಡೆ ಓದಿಕೊಳ್ಳಬೇಕೆಂಬ ಕಾತುರ. ಅವರ ಅಮ್ಮನಿಗೆ ಎಬ್ಬಿಸಿ, 'ಒಲೆಯಲ್ಲಿ ಬೆಂಕಿ ಇದ್ದರೆ ನೋಡು, ಆ ಬೆಂಕಿಯಲ್ಲಿ ಸ್ವಲ್ಪ ದೀಪ ಹಚ್ಚಿಕೊಂಡು ಓದುತ್ತೇನೆಂದು ಹೇಳುತ್ತಾನೆ; ಸಾಹುಕಾರರ ಮನೆಯಲ್ಲಾದರೆ ದೊಡ್ಡ ದೊಡ್ಡ ಒನಕೆ ಸೌದೆಯಲ್ಲಿ ಅಡುಗೆಯಲ್ಲಿ ಅಡುಗೆ ಮಾಡಿತ್ತಾರೆ, ಕೆಂಡ ಇರುತ್ತದೆ. ಇವರು ಕೂಲಿ ಮಾಡಿಕೊಂಡು ಬರುವಾಗ ಯಾರೋ ಗೌಡರ ಹೊಲದಿಂದ ಪುಳ್ಳೆ ಎತ್ತಿಕೊಂಡು ಬಂದಿದ್ದಳು, ಅಡಿಗೆ ಮಾಡಿದ್ದಳು, ಆ ಪುಳ್ಳೆ ಪೂರ್ತಿ ಬೂದಿಯಾಗಿರುತ್ತದೆ; ಅದರಲ್ಲಿ ಬೆಂಕಿ ಇರುವುದಿಲ್ಲ. ಅಪ್ಪನ ಹತ್ತಿರ ಬೆಂಕಿ ಪೊಟ್ಟಣ ಇಲ್ಲ, ಅಮ್ಮನ ಹತ್ತಿರ ಕೆಂಡ ಇಲ್ಲ. ಊರಿನಲ್ಲಿ ಹೋಗಿ ಜಗಲಿ ಮೇಲೆ ಮಲಗಿರುವ ಗೌಡರಿಗೆ ಕೇಳುತ್ತಾನೆ, "ಗೌಡರೆ, ನಮ್ಮ ಮನೆ ಪರಿಸ್ಥಿತಿ ಹೀಗಾಗಿದೆ, ದಯವಿಟ್ಟು, ಸ್ವಲ್ಪ ಬೆಂಕಿ ಪಟ್ಟಣ ಕೊಡಿ" ಎಂದು ಕೇಳುತ್ತಾನೆ, ಗೌಡರು, "ನೀನು ಮೋಟು ಉದ್ದ ಇದ್ದೀಯ, ಬೀಡಿ ಸೇದುತ್ತೀಯ" ಎಂದು ಕೇಳುತ್ತಾನೆ. ಆ ಹುಡುಗ "ನಾನು ಓದಬೇಕು ಗೌಡರೇ" ಎಂದು ಹೇಳಿ ಬೆಂಕಿ ಪೊಟ್ಟಣ ತೆಗೆದುಕೊಂಡು ಬರುತ್ತಾನೆ. ದೀಪ ಹಚ್ಚಿಕೊಂಡು ಓದುತ್ತಾನೆ, ಇದು 20 ವರ್ಷಗಳ ಹಿಂದಿನ ಮಾತು. Even today I am telling this. ದೀಪ ಇದ್ದರೆ ಬತ್ತಿ ಇಲ್ಲದೆ ಇರುವುದು, ದೀಪ, ಬತ್ತಿ ಎರಡೂ, ಇದ್ದರೆ ಎಣ್ಣೆ ಇಲ್ಲದೆ ಇರುವುದು, ಎಣ್ಣೆ

ಬತ್ತಿ ದೀಪ ಎಲ್ಲ ಇದ್ದರೂ ಅವನು ಹಚ್ಚಿಕೊಳ್ಳುವುದಕ್ಕೆ ಒಂದು ಬೆಂಕಿ ಪೊಟ್ಟಣ ಇಲ್ಲದೆ ಇರುವ ಸಂದರ್ಭ, 20 ವರ್ಷಗಳ ಹಿಂದಿನ ಕತೆ ಬೇಡ, ಇವತ್ತಿಗೂ ನಮ್ಮ ಹಳ್ಳಿ

12.30 ಪಿ.ಎಂ.

ಪ್ರದೇಶದಲ್ಲಿದೆ. ಈ ಹಿನ್ನಲೆಯಲ್ಲಿ ಈ ಸತ್ಯ ಕತೆಯನ್ನು ಹೇಳಿದ ಮೇಲೂ ಗ್ರಾಮಾಂತರ ಪ್ರದೇಶಕ್ಕೂ ಪಟ್ಟಣ ಪ್ರದೇಶಕ್ಕೂ ವ್ಯತ್ಯಾಸವಿಲ್ಲವೆನ್ನತಕ್ಕ ಚಿಂತನೆಯನ್ನೇಕೆ ನಾಡಿನ ಜನರು ಮಾಡುತ್ತಾರೋ ನನಗೆ ಅರ್ಥವಾಗುವುದಿಲ್ಲ. ಹಳ್ಳಿಗಾಡಿನಲ್ಲಿ ವಿದ್ಯಾಭ್ಯಾಸ ಅದೊಂದು ಆಕಸ್ಮಿಕ. ಆದರೆ ಪಟ್ಟಣದಲ್ಲಿ ಅದೊಂದು ಒತ್ತಾಯ. ನಾವೆಲ್ಲರೂ ಆಕಸ್ಮಿಕವಾಗಿ ವಿದ್ಯಾಭ್ಯಾಸ ಮಾಡಿ ಬಂದಿರತಕ್ಕವರು. ನನ್ನ ಅಣ್ಣ ಒಬ್ಬರು ನಾನು ಶಾಲೆಗೆ ಹೋಗುತ್ತೇನೆಂದು ಹಟ ಮಾಡಿದಾಗ, ನೀನು ಶಾಲೆಗೆ ಹೋಗದಿದ್ದರೆ ಕಂಬಗೋಪುರವೇನು ಎತ್ತಿಕೊಂಡು ಹೋಗುವುದಿಲ್ಲವೆಂದು ಹೇಳಿದ್ದನ್ನು ನಾನೂ ಈಗಲೂ ನೆನಪಿಸಿಕೊಳ್ಳುತ್ತೇನೆ. ಗದ್ದೆಯಲ್ಲಿ ಬಿತ್ತಬೇಕಾದರೆ, ನಾಟಿ ಮಾಡಬೇಕಾಗಿದ್ದರೆ ನಾವುಗಳು ಶಾಲೆಗೆ ಹೋಗುತ್ತಿರಲಿಲ್ಲ, ಇನ್ನು ಗದ್ದೆಗೆ ಹೋಗದಿದ್ದರೆ ದನ ಕಾಯಬೇಕಾಗಿದ್ದ ಪರಿಸ್ಥಿತಿ. ಆದರೆ ಪಟ್ಟಣದಲ್ಲಿ ಏನಿದೆ, ಬೆಳಗ್ಗೆ ಎದ್ದಕೂಡಲೇ ತಾಯಿ ಮಗುವಿಗೆ ಸ್ನಾನ ಮಾಡಿಸಿ, ಬಟ್ಟೆ ಹಾಕಿ, ಟೈ ಕಟ್ಟಿ ಕಾರಿನಲ್ಲಿ ಕರೆದುಕೊಂಡು ಹೋಗಿ ಶಾಲೆಗೆ ಬಿಡುವುದು; ಮತ್ತೆ ಸಂಜೆ ಕರೆದುಕೊಂಡು ಬಂದು ತಿಂಡಿ ತಿನಿಸಿ ಆ ಮಗುವಿಗೆ ಓದಿಸುವುದು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ತಂದೆ ತಾಯಂದಿರ ವಿದ್ಯಾಭ್ಯಾಸದ ಹಿನ್ನಲೆ ಏನೇನೂ ಇರುವುದಿಲ್ಲ. ಅವರು ಅನಕ್ಷರಸ್ತರು. ಆದರೆ ನಗರದಲ್ಲಿ ತಂದೆ ತಾಯಂದಿರು ಪದವಿ ಪಡೆದಿರುವವರು, ಅಧಿಕಾರಿಗಳು. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಅನಾನುಕೂಲ ಆರ್ಥಿಕ ಪರಿಸ್ಥಿತಿ ಒಂದು ಕಡೆ, ಹೊಟ್ಟೆಗೆ ಊಟ ಇಲ್ಲದಿರುವ ಸ್ಥಿತಿ ಒಂದು ಕಡೆ, ಓದಿ ಕೊಳ್ಳಲು ದೀಪ ಇಲ್ಲದಿರುವ ಸ್ಥಿತಿ, ಮತ್ತೊಂದು ಕಡೆ ವಿದ್ಯಾಭ್ಯಾಸವೇ ಇಲ್ಲದಂಥ ಬುದ್ಧಿಯ ದಿವಾಳಿತನ. ಯಾರಿಗಾದರೂ ಅರ್ಥವಾಗುವುದಿಲ್ಲವೆ? ಇದಕ್ಕೆ ಜಡ್ಜ್‌ಮೆಂಟ್ ಬೇಕಾ? ಸಂಧಾನ ಬೇಕಾ, ನಾವು ಇದರ ಬಗ್ಗೆ ಇಲ್ಲಿ ಮಾತನಾಡಬೇಕೆ? ಪಟ್ಟಣಗಳಲ್ಲಿ ಪರೀಕ್ಷೆ ನಡೆಯುವಾಗ ಪರೀಕ್ಷಾ ಪತ್ರಿಕೆಗಳ ಭೇಟಿಯಾಗುತ್ತದೆ. ಆದರೆ ಹುಲಿಯೂರಿನಲ್ಲೋ, ನಾಗರದಲ್ಲೋ ಆ ರೀತಿ ಮಾಡಲು ಆಗುತ್ತದೆಯೇ? ಪಟ್ಟಣಗಳಲ್ಲಿ ಪರೀಕ್ಷಾ ಪತ್ರಿಕೆಗಳ ಭೇಟಿಯಾಗಿ ಅದರಲ್ಲಿ ಸಫಲರೋ, ವಿಫಲರೋ ಆದಮೇಲೆ ಉತ್ತರ ಪತ್ರಿಕೆಗಳ ಭೇಟಿಯಾಗುತ್ತದೆ, ಯಾರ ಹತ್ತಿರ ಹೋಗಿದೆ, ಎಲ್ಲಿ ಹೋಗಿದೆ, ಕೋಡ್ ನಂಬರ್ ಏನು, ಪಿನ್ ನಂಬರ್ ಏನು ಮುಂತಾದವುಗಳ ಬಗ್ಗೆ ಭೇಟಿಯಾಗುತ್ತದೆ. ಈ ಎಲ್ಲಾ ಸೌಲಭ್ಯಗಳು ನಗರ ಪ್ರದೇಶದಲ್ಲಿರುವವರಿಗೆ ಇದೆ. ಆದರೆ ಹಳ್ಳಿಯ ಜನರಿಗೆ ಇದರ ಲಭ್ಯತೆ ಇದೆಯೇ? ಇನ್ನು ನಮ್ಮ ಹಳ್ಳಿಗಳಲ್ಲಿರುವ ಶಾಲೆಗಳ ಸ್ಥಿತಿ ಹೇಗಿದೆ? ಐ.ಎ.ಎಸ್. ಎಂಬ ಪರೀಕ್ಷೆ ಇದೆ, ಇಂಥ ಪರೀಕ್ಷೆ ಇದೆಯೆಂದು ನನಗಂತೂ ಬಹಳ ತಡವಾಗಿ ಗೊತ್ತಾಯಿತು. ಇಲ್ಲದಿದ್ದರೆ ಅದು ಎಷ್ಟೇ ಕಷ್ಟವಾಗಿದ್ದರೂ

ಪಾಸು ಮಾಡುತ್ತಿದ್ದೆ. ಐ.ಎ.ಎಸ್. ಎಂಬ ಪರೀಕ್ಷೆ ಇದೆಯೆಂಬುದು ನಮಗೆ ಗೊತ್ತಾಗಿದ್ದು ಕಾಲೇಜು ವಿದ್ಯಾಭ್ಯಾಸ ಆದಮೇಲೆ. ಇಂಥ ಪರಿಸ್ಥಿತಿಯಲ್ಲಿ ಹಳ್ಳಿಯವರಾದ ನಾವು ಬದುಕುತ್ತಿದ್ದೇವೆ. ಹೀಗಿರುವಾಗ ನಮಗೂ ನಿಮಗೂ ವ್ಯತ್ಯಾಸವಿಲ್ಲವೆಂದು ತೀರ್ಮಾನಕ್ಕೆ ಬರುವುದಾದರೆ ದೊಡ್ಡ ಅನ್ಯಾಯವಾದಂತೆ ಆಗುತ್ತದೆ. ನಮ್ಮ ಹಳ್ಳಿಗಳ ಶಾಲೆಗಳು ಎಲ್ಲಾ ಸೌಲಭ್ಯಗಳಿಂದ ವಂಚಿತವಾಗಿದೆ. ಶಾಲೆಗಳು ಇದ್ದರೂ ಸೋರುತ್ತಿರುತ್ತವೆ, ಬೆಂಚು ಕುರ್ಚಿ ಇಲ್ಲ, ಕಲ್ಲಿನ ಮೇಲೆ ಕುಳಿತುಕೊಳ್ಳಬೇಕು. ಎಷ್ಟೋ ಮಕ್ಕಳು ಹಸಿದ ಹೊಟ್ಟೆಯಲ್ಲಿ ಹೋಗಬೇಕಾಗುತ್ತದೆ. ನಮ್ಮ ಕುಣಿಗಲ್‌ನ ಒಂದು ಮೂಲೆಯ ಹಳ್ಳಿಯ ಶಾಲೆಗೆ ಬೆಂಗಳೂರಿನಿಂದ ಉಪಾಧ್ಯಾಯರು ಬರುತ್ತಾರೆ, ಅವರು ಇಲ್ಲಿಂದ ಅಲ್ಲಿಗೆ ಬರಬೇಕಾದರೆ 1 ಗಂಟೆಯಾಗಿರುತ್ತದೆ, ಮತ್ತೆ ಅವರು 2 ಗಂಟೆಯ ಬಸ್ಸಿಗೆ ನಿಂತಿರುತ್ತಾರೆ. ಇದು ನಮಗೆ ಉಪಾಧ್ಯಾಯರುಗಳನ್ನು ಒದಗಿಸುತ್ತಿರುವ ಸ್ಥಿತಿ. ಗ್ರಾಮೀಣ ಭಾಗದ ಜನರ ಜೀವನದ ಬಗ್ಗೆ ಅಪ್ರೈಸ್ ಮಾಡಬೇಕಾದರೆ ಈ ಅಧಿಕಾರಿಗಳಿಗೆ, ನ್ಯಾಯಾಧೀಶರಿಗೆ, ಆಡಳಿತಗಾರರಿಗೆ ಬೆಳಿಗ್ಗೆ ಹೆಗಲ ಮೇಲೆ ಶಾಲನ್ನು ಹಾಕಿಕೊಂಡು ಇಲ್ಲಿಗೆ ಬರುತ್ತಾರಲ್ಲ ಅವರನ್ನೇ ಗ್ರಾಮೀಣ ಪ್ರದೇಶದ ಪ್ರತಿನಿಧಿಗಳೆಂದು ತಿಳಿದುಕೊಂಡುಬಿಟ್ಟಿದ್ದಾರೆಯೇ ಎಂಬ ಅನುಮಾನ ಬರುತ್ತಿದೆ. ಆದರೆ ಇವರುಗಳು ನಮ್ಮ ಗ್ರಾಮೀಣ ಪ್ರತಿನಿಧಿಗಳಲ್ಲ. ಅಂಥವರು ನಮ್ಮ ಗ್ರಾಮೀಣ ಪ್ರದೇಶದ ರಾಜಕೀಯ ಪ್ರತಿನಿಧಿಗಳು. ಇವರು ಇಷ್ಟು ಚೆನ್ನಾಗಿ ಬರುತ್ತಾರಲ್ಲ ಇವರು ಚೆನ್ನಾಗಿರಬೇಕೆಂದು ಅವರುಗಳು ತಿಳಿದುಕೊಂಡಿದ್ದರೆ ದಯಮಾಡಿ ಇದನ್ನು ಅವರು ಸರಿಪಡಿಸಿಕೊಳ್ಳಬೇಕು. ಅವರು ನಮ್ಮ ಗ್ರಾಮೀಣ ಪ್ರದೇಶದ ಪ್ರತಿನಿಧಿಗಳಲ್ಲ. ಈ ವ್ಯತ್ಯಾಸದ ಅರಿವು ಆಗದವರಿಗೆ ಒಂದು ಕಿವಿ ಮಾತನ್ನು ಹೇಳುತ್ತೇನೆ. ಕವಿ ಕುವೆಂಪುರವರು "ಹಾಳುಮಾಡು" ಎಂಬ ಪದ್ಯವನ್ನು ಬರೆದಿದ್ದಾರೆ. ಇದನ್ನು ದಯಮಾಡಿ ಓದಿದರೆ ನಮ್ಮಂಥ ಸಾಮಾನ್ಯ ವ್ಯಕ್ತಿಗಳಿಂದ ಇದು ಅರ್ಥವಾಗದಿದ್ದರೂ ಆ ರಸ ಋಷಿ ಕವಿಯಿಂದ ತಮಗೆ ಅರ್ಥವಾಗಬಹುದು. ಆಗಲಾದರೂ ಹಳ್ಳಿಗಾಡಿನ ಜನತೆ ಬಗ್ಗೆ, ಅವರ ನೋವು ನಲಿವಿನ ಬಗ್ಗೆ ಸ್ವಲ್ಪವಾದರೂ ಕರುಣೆ ಬರಬಹುದು. ಆ ಪದ್ಯದ ಕೆಲವು ಸಾಲುಗಳನ್ನು ನಾನು ಓದುತ್ತೇನೆ. 'ಬಾ ಪುರದ ಗೆಳೆಯ ಹಾಳೂರ ನೋಡು, ಬಾ ಪುರದ ಗೆಳೆಯ ಹಾಳೂರು ನೋಡು' ಪಟ್ಟಣದವರನ್ನು ಕರೆದು ಹಳ್ಳಿಯಲ್ಲಿ ಏನಿದೆಯೆಂದು ಹೇಳುತ್ತಾರೆ. 'ದೇಶಕ್ಕೆ ಅನ್ನವನ್ನು ನೀಡುವರರ ಗೂಡ' ದೇಶಕ್ಕೆಲ್ಲ ಅನ್ನವನ್ನು ನೀಡುವರರ ಗೂಡ, ಅರೆ ಮುರಿದ ಗೋಡೆಸಾಲುಗಳ ಒರಗಿಕೊಂಡಿರುವುದಾ, ಸರಿಮಾಡಿ ಹುಲ್ಲಿನೋದಿಕೆ ಒಬ್ಬರಲ್ಲ ಪುರವನು ಸೇರಿದರು ಹಳ್ಳಿಗರೆಲ್ಲ' ಮಾನ್ಯ ಹನುಮೇಗೌಡರು ಮಾತನಾಡುತ್ತಾ, ನೀವು ನಾಶವಾಗಿ ಹೋಗುತ್ತೀರ, ನಿಮಗೆ ಹಳ್ಳಿಗರ ಶಾಪ ತಟ್ಟುತ್ತದೆ, ಅವರ ಉಸಿರು ಏನಾದರು ನಿಮಗೆ ತಗುಲಿದರೆ ಬೆಚ್ಚಿಬಿದ್ದು ಹೋಗುತ್ತೀರಾ, ನೀವು ಉದ್ಧಾರವಾಗುವುದಿಲ್ಲವೆಂದು ಹೇಳುತ್ತಿದ್ದರು. ಅದನ್ನೇ ಕವಿಗಳು ಈ ರೀತಿ ಹೇಳುತ್ತಾರೆ, 'ಹಳ್ಳಿಗಳು ಹಾಳಾಗುತಿರೆ ಪುರವೊಂದು ಸಾಕೆ?' ಹಳ್ಳಿಗಳ ಲೆಕ್ಕಿಸದೆ ಆಳ ಸರ್ಕಾರ ತನಾತಕ್ಕೆ ತಾನೇ ಆಧಾರ.

ಕಾನೂನು ಕಟ್ಟಳೆಗಳ ಬಗ್ಗೆ ಸಹ ಅವರು ಮಾತನಾಡಿದ್ದಾರೆ. 'ಸಿರಿಸುತರು ಕಾನೂನುಗಳ ರಚಿಸುತಿಹರು, ಬಡವರು ಅದರೊಳಗೆ ಗೋಳಾಡುತಿಹರು" ಸಿರಿಸುತರ ಬೊಬ್ಬೆಯಲಿ ಬಡಜನರ ಧ್ವನಿಯು ಸಾಗರದ ನಡುವೆ ಇಹ ತುಂತುರಿನ ಹನಿಯಾಗಿದೆ. ರಾಜ್ಯದಾಡಳಿತದ ಹಣಗಾರರದಲ್ಲಿ ರಾಜ್ಯದಲ್ಲಿರುವ ದಾಸ್ಯವನ್ನು ಬಡವರಲ್ಲಿ, ರಾಜ್ಯದ ಆಡಳಿತ ಹಣಗಾರರಲ್ಲಿ, ರಾಜ್ಯದಲ್ಲಿನ ದಾಸ್ಯ ಮಾತ್ರ ಬಡವರಲ್ಲಿ' ಎಂದು ಹೇಳುತ್ತಾರೆ. 'ಹಣಗಾರರಿಂದ ಬಡ ಜನರ ಗೋಳು', ಈ ರೀತಿ ಅವರು ಹೇಳಿಕೊಂಡು ಕೊನೆಗೆ 'ಅಮ್ಮ ಭಾರತಿ ಹಳ್ಳಿಹಾಳಾಗದಿರಲಿ, ಹಳ್ಳಿಗರ ಮಹಾತಾಯಿ ಭಾರತೀಯಮ್ಮ ಹಳ್ಳಿ ಹಾಳಾಗದಂತೆ ಸಲಹಮ್ಮ' ಎಂದು ಹೇಳಿದ್ದಾರೆ. ದಿವಂಗತ ಬಸವಲಿಂಗಪ್ಪನವರು ಒಂದು ಸಲ ಮಾತನಾಡುತ್ತಾ ಈ ಆಕ್ರೋಶ ಯಾರ ಬಗ್ಗೆ ಎಂದು ನನಗೆ ಕೇಳಿದ್ದರು. ಅದೇ ಮಾತನ್ನು ಆ ಸ್ಥಾನದಲ್ಲಿ ಕುಳಿತುಕೊಂಡು ಮಾನ್ಯ ರಂಗನಾಥ್‌ರವರು ಹೇಳುತ್ತಿದ್ದಾರೆ. ಎಲ್ಲಿಯವರೆಗೆ ನಮ್ಮ ಜನರಲ್ಲಿ ರೋಷ ಬರುವುದಿಲ್ಲವೋ, ಎಲ್ಲಿಯವರೆಗೆ ನಮ್ಮ ಜನರಲ್ಲಿ ಇರುವ ಸೌಲಭ್ಯಗಳನ್ನು ಪಡೆದುಕೊಳ್ಳಲು ಹೋರಾಟ ಪ್ರಾರಂಭವಾಗುವುದಿಲ್ಲವೋ ನೀವು ಕ್ರಾಂತಿಯ ಬಗ್ಗೆ ಮಾತನಾಡುವುದು ಬೇಡ ಎಂದು ಹೇಳಿದ್ದರು. ಹಾಗಾದರೆ ರೋಷ ನಮ್ಮ ಜನರಲ್ಲೇ ಇದೆಯೆಂದು ಇದರ ಅರ್ಥವೇ? ಅದನ್ನು ನಾನು ಒಪ್ಪುವುದಿಲ್ಲ. ಮಾನ್ಯ ಭೈರೇಗೌಡರು ಹೇಳಿದ ಹಾಗೆ ರೋಷವಿರುವುದು ನಮ್ಮ ವ್ಯವಸ್ಥೆಯಲ್ಲಿ. ಈ ಎರಡು ಸಾವಿರ ವರ್ಷಗಳಲ್ಲಿ ಗ್ರಾಮೀಣ ಬದುಕಿನ ಯಜಮಾನನಾದ ರೈತ ಯಾವ ಕವಿಗೂ ರಕ್ಷಿವಾಗಲಿಲ್ಲ. 12ನೇ ಶತಮಾನದಲ್ಲಿ ಮಾನ್ಯ ಬಸವಣ್ಣನವರು ಮಾಡಿದಂಥ ಕೆಲವು ಪ್ರಯತ್ನಗಳನ್ನು ಹೊರತುಪಡಿಸಿದರೆ ಬೇರೆ ಯಾರೂ ಮಾಡಿಲ್ಲ. ಹಳ್ಳಿಗಳಲ್ಲಿ ಆರ್ಥಿಕ ಪರಿಸ್ಥಿತಿ, ಬಡತನ, ನೋವು, ಗುಡಿಸಲು ಮಾತ್ರವಲ್ಲ, ನಮ್ಮ ಬುದ್ಧಿವಂತಿಕೆಯ ದಿವಾಳಿತನ ಮತ್ತು ಈ ದಿವಾಳಿತನಕ್ಕೆ ವ್ಯವಸ್ಥೆ ಮಾಡಿದಂಥ ಕುತಂತ್ರ, ಕುಯುಕ್ತಿ ಪಟ್ಟಭದ್ರಹಿತಾಸಕ್ತಿಗಳು ಮಾಡಿದಂಥ ತುಳಿತ, ಇದನ್ನು ನೀವು ಮಣಿಯಲು ಸಾಧ್ಯವಾಗುವುದಿಲ್ಲ. ಆ ವ್ಯವಸ್ಥೆ ಇದೆಯಲ್ಲಾ, ಆ ವ್ಯವಸ್ಥೆಯೊಳಗೆ ಸಿಕ್ಕಿ ಸಂಪೂರ್ಣವಾಗಿ ನಾವು ನಾಶವಾಗಿದ್ದೇವೆ. ಕೆಲವರು ಮಾತ್ರ ಆಕಸ್ಮಿಕವಾಗಿ ಆ ವ್ಯವಸ್ಥೆಯಿಂದ ಹೊರಗೆ ಬಂದಿದ್ದೇವೆ. ಆದ್ದರಿಂದ ಇದು ಜನರ ದೋಷವಲ್ಲ, ಇದು ವ್ಯವಸ್ಥೆಯ ದೋಷ ಎಂದು ನಾನು ಹೇಳಲಿಕ್ಕೆ ಸಂಪೂರ್ಣವಾಗಿ ಇಷ್ಟಪಡುತ್ತೇನೆ. ನಾನು ಆಗಲೇ ಹೇಳಿದ ಮಾತನ್ನು ಮತ್ತೆ ಹೇಳಲೇಬೇಕಾಗುತ್ತದೆ. ಕವಿಗಳು ಅರ್ಜುನ, ರಾಮ, ಶಕುಂತಲಾ, ದುಶ್ಯಂತ ಅವರೆಲ್ಲರ ಬಗ್ಗೆ ಮಾತ್ರ ಬರೆದಿದ್ದಾರೆ. ಗ್ರಾಮೀಣ ಬದುಕಿನ ಪ್ರತಿನಿಧಿಯಾದ ಯಾವ ರೈತನೂ ಕೂಡ ಅವರ ಕಾವ್ಯದ ವಸ್ತು ಆಗಲಿಲ್ಲ. ಯಾವುದೇ ದೊಡ್ಡ ಪುರಾಣದ ನಾಯಕನಾಗಿ ಆತ ಸೃಷ್ಟಿ ಆಗಲಿಲ್ಲ. ಹೀಗೆ ಬದುಕಿನ ಎಲ್ಲಾ ಸ್ಥಾವರಗಳಲ್ಲಿ, ಎಲ್ಲಾ ಕ್ಷೇತ್ರಗಳಲ್ಲಿ ಅತ್ಯಂತ ಹೀನಾಯವಾದಂತಹ ಪರಿಸ್ಥಿತಿಯನ್ನು ಸೃಷ್ಟಿ ಮಾಡಿ ವ್ಯವಸ್ಥೆಯ ಕುತಂತ್ರದಿಂದಾಗಿ ಹಳ್ಳಿಯವರು ಬದುಕು ಇವತ್ತು ದುರ್ಭರವಾಗಿದೆ. ಆದ್ದರಿಂದ ಈ ಹಳ್ಳಿಗಾಡಿನ ಜನರಿಗೆ ಸವಲತ್ತನ್ನು ಕೊಡುವಂತಹ

ಸಂದರ್ಭದಲ್ಲಿ ಅದಕ್ಕೂ ಇದಕ್ಕೂ ಏನೂ ವ್ಯತ್ಯಾಸವಿಲ್ಲ ಎನ್ನುವಂತಹ ದಡ್ಡತನದಲ್ಲಿ ಯಾರಾದರೂ ಅಭಿಪ್ರಾಯ ಪಟ್ಟರೆ ಅದೊಂದು ದೊಡ್ಡ ತಪ್ಪಾಗುತ್ತದೆ. ನನಗೆ ತಿಳಿದ ಹಾಗೆ, ನಮ್ಮ ಆರ್ಥಿಕ ಪ್ರಗತಿಗೆ, ಅದು ರಾಷ್ಟ್ರದ್ದು ಇರಬಹುದು, ವ್ಯಕ್ತಿಯದ್ದು ಇರಬಹುದು, ನಮ್ಮ ಸಾಮಾಜಿಕ ಹಿನ್ನಲೆ ಕೂಡ ಕಾರಣವಾಗಿದೆ. ಎಕನಾಮಿಕ್ಸ್ ಅನ್ನು ಓದಿದವನಿಗೆ ಕೇಳಿದರೆ ಇದು ತಿಳಿಯುತ್ತದೆ. ನಾನು ಕೂಡ ಎಂ.ಎ.ವರೆಗೆ 35 ಅಂಕಗಳು ಬರಲೆಂದು ಎಕನಾಮಿಕ್ಸ್ ಅನನ್ನು ಓದಿದೆ. ಎಲ್ಲೋ ಒಂದು ಕಡೆ ಭಾರತ ದೇಶ ಆರ್ಥಿಕವಾಗಿ ಅಭಿವೃದ್ಧಿಯಾಗದಿರುವುದಕ್ಕೆ ಕಾರಣಗಳನ್ನು ಹೇಳಿಕೊಂಡು ಬರುತ್ತಾರೆ. ನನಗೆ ಜ್ಞಾಪಕವಿರುವಂತೆ ಆ ಬರಹಗಾರನ ಹೆಸರು "ಮ್ಯಕವರ್" ಎಂದು ಕಾಣುತ್ತದೆ. ಸರಿಯಾದ ಬಹರಗಾರನ ಹೆಸರನ್ನು ನಾನು ಮರೆತಿದ್ದೇನೆ. ಭಾರತ ದೇಶದಲ್ಲಿ ಹುಟ್ಟಿ ಬಂದಂತಹ ಯಾವ ಫಿಲಾಸಫರ್ ಕೂಡ they have not preached to acquire wealth. Rather they have discouraged. ಬುದ್ಧ ಸಂಪತ್ತನ್ನು ಕೂಡಿಸುವುದು ಅತ್ಯಂತ ದೊಡ್ಡದಾದಂತಹ ಒಂದು ತಪ್ಪು ಅಥವಾ ಅನ್ಯಾಯ ಎಂದು ಹೇಳುತ್ತಾನೆ. ಗಾಂಧೀಜಿಯವರೂ ಕೂಡ ಅದನ್ನೇ ಹೇಳುತ್ತಿದ್ದರು. ನಿಮಗೆ ಬೇಕಾಗಿದಕ್ಕಿಂತ ಹೆಚ್ಚಿನ ಸಂಪತ್ತನ್ನು ನೀವು ಕ್ರೋಢೀಕರಿಸಿ ಇಟ್ಟುಕೊಂಡರೆ ಅದೊಂದು ಪಾಪ ಎಂದು ಅವರು ಹೇಳುತ್ತಿದ್ದರು. ಮಾನ್ಯ ಅಧ್ಯಕ್ಷರೇ, ನಮ್ಮ ಯಾರ ಮಾತನ್ನೂ ಇವರು ಕೇಳುವುದು ಬೇಡ. ಆ ಪುಣ್ಯಾತ್ಮನ ಮಾತನ್ನಾದರೂ ಕೇಳಲಿ. ಗಾಂಧೀಜಿಯವರು ಈ ದೇಶದ ಭವಿಷ್ಯತ್ತು,, ಈ ದೇಶದ ಪ್ರಗತಿ, ಈ ದೇಶದ ಒಳಿತು-ಕೆಡಕು ಗ್ರಾಮೀಣ ಬದುಕಿನ ಅಭ್ಯುದಯದ ಮೇಲೆ ಅವಲಂಬಿತವಾಗಿದೆ ಎಂದು ಹೇಳಿದ್ದಾರೆ. ಅವರ ಮಾತನ್ನಾದರೂ ಕೇಳಿ ಗ್ರಾಮೀಣ ಬದುಕನ್ನು ಉತ್ತಮಪಡಿಸುವುದಕ್ಕೆ ಈ ನಮ್ಮ ತೀರ್ಮಾನ ತೆಗೆದುಕೊಳ್ಳುವವರರು, ತೀರ್ಮಾನವನ್ನು ತೆಗೆದುಕೊಳ್ಳಲಿ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾವುದೇ ಒಂದು ವ್ಯಕ್ತಿ ಅಥವಾ ದೇಶದ ಪ್ರಗತಿ ಆಗಬೇಕಾದರೆ it hsould be exposed to calamities, difficulties and hardship. ಬಹುಶ: ಈ ಸರ್ಕಾರಕ್ಕೆ ಕೂಡ ಈ ಎಲ್ಲಾ ಘಟನೆಗಳು, ಈ ಒಂದು ಆಘಾತಗಳು ಸ್ವಲ್ಪ ಪ್ರಗತಿಯನ್ನು ಸಾಧಿಸಲಿಕ್ಕೆ ಪೂರಕವಾಗಿ ಬಂದಿದೆಯೇ ಹೊರತು ಅಡ್ಡಿಯಾಯಿತು ಎಂದು ನನಗನ್ನಿಸುವುದಿಲ್ಲ. ಆ ಒಂದು ಕಾರಣದಿಂದ ಈ ಎಲ್ಲಾ ಅಡ್ಡಿ ಆತಂಕಗಳನ್ನು ಎದುರಿಸಿ ಹಳ್ಳಿಗಾಡಿನ ಮಕ್ಕಳಿಗೆ ಸವಲತ್ತನ್ನು ಕೊಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಂತಹ ಸರ್ಕಾರಕ್ಕೆ ನಾನು ಕೃತಜ್ಞತೆಯನ್ನು ಅರ್ಪಿಸುತ್ತಾ ಕೊನೆಯದಾಗಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಕಾನೂನಿನ ಅಡ್ಡಿ ಆತಂಕದಾರು ಏನೇ ಇರಲಿ, ಸಂವಿಧಾನದ ತೊಡಕುಗಳು ಎಂತಹುದೇ ಇರಲಿ, ಮೊದಲು ನಮಗೆ ಇಚ್ಛಾಶಕ್ತಿ ಬೇಕಾಗಿದೆ. ಆ ಇಚ್ಛಾಶಕ್ತಿಯ ಕೊರತೆ ಏನಾದರೂ ಆದರೆ ಯಾವುದೇ ಸಾಧನೆ ಮಾಡುವುದಕ್ಕಾಗುವುದಿಲ್ಲ. where there is a will there is a way. ಎಂದು ಹೇಳುವ ಹಾಗೆ ಮೊದಲು ನಾವು ಈ ವ್ಯವಸ್ಥೆಯನ್ನು ಸರಿ ಮಾಡಬೇಕೆಂಬ ಇಚ್ಛಾಶಕ್ತಿ ಇದ್ದರೆ ಅದನ್ನು ಸರಿ ಮಾಡಲಿಕ್ಕೆ

ಸಾಧನವಾಗುತ್ತದೆ. ಯಾವ ಕುಂಟು ನೆಪವನ್ನು ಮುಂದೊಡ್ಡಿ ಈ ಸವಲತ್ತನ್ನು ಕಿತ್ತುಕೊಳ್ಳುವಂತಹ ಕುತಂತ್ರ ಈ ದೇಶದಲ್ಲಿ ನಡೆದಿದೆಯೋ, ನಾನು ಹೇಳುತ್ತೇನೆ, ಇದೊಂದು ಕುಂಟು ನೆಪ ಮಾತ್ರ. It is just a pretext. ಇವರ ಮನೆ ಹಾಳಾಗ ಏನಾದರೂ ನೆಪ ಸಿಗುತ್ತದೆಯೇ? ಎಂದು ಹುಡುಕುತ್ತಿರುತ್ತಾರೆ. ನನ್ನ ಸ್ನೇಹಿತರುಗಳು ಯಾರೂ ಕೂಡ ಸಿಟ್ಟು ಮಾಡಿಕೊಳ್ಳಬಾರದು, ನಾನು ಬೇಕಾದರೆ ಕ್ಷಮೆ ಕೇಳುತ್ತೇನೆ. ಅಧಿಕಾರಿಗಳ ಇಂಕ್ರಿಮೆಂಟ್, ಪ್ರಮೋಷನ್ ಇತ್ಯಾದಿಗಳ ಬಗ್ಗೆ ಹೈಕೋರ್ಟಿನ ಮುಂದೆ ಎಷ್ಟು ಜನ ಪೇಪರ್ಸ್ ಸಬ್‌ಮಿಟ್ ಮಾಡಿದ್ದಾರೆ ಎಂಬುದನ್ನು ಹೇಳಲಿ ನೋಡೋಣ. ಗ್ರಾಮೀಣ ಬದುಕಿನ ಮಕ್ಕಳ ಅಭ್ಯುದಯಕ್ಕೆ ಸಂಬಂಧಪಟ್ಟ ವಿಷಯಕ್ಕೆ ವ್ಯತ್ಯಾಸ ಇದೆ ಎನ್ನುವಂತಹ ಕಾಗದ ಪತ್ರಗಳನ್ನು ಕೊಡಲಿಲ್ಲ ಎನ್ನುವಂತಹ ಕಾರಣಕ್ಕಾಗಿ ಈ ನಾಡಿನಲ್ಲಿ ಅವರಿಗೆ ವಿರುದ್ಧವಾಗಿ ಒಂದು ಜಡ್ಜ್‌ಮೆಂಟ್ ಬರುತ್ತದೆ. ಅದಕ್ಕೆ ಸಂಬಂಧಪಟ್ಟಂತಹ ಸವಲತ್ತುಗಳನ್ನು ಒದಗಿಸಲಿಲ್ಲ ಎನ್ನುವಂತಹ ಸರ್ಕಾರ ಈ ದೇಶದಲ್ಲಿ ಆಡಳಿತ ಮಾಡುತ್ತಿದೆ. ನಾನು ಯಾರನ್ನೂ ದೂಷಿಸಲು ಈ ಮಾತನ್ನು ಹೇಳುತ್ತಿಲ್ಲ. ಇರುವಂತಹ ವಸ್ತುಸ್ಥಿತಿಯನ್ನು ತಮ್ಮ ಮುಖಾಂತರ ಈ ನಾಡಿನ ಜನತೆಗೆ ತಿಳಿಸಿ ಹೇಳುತ್ತಿದ್ದೇನೆ. ಸೂರ್ಯ ಚಂದ್ರರ ಬೆಳಕಿನಷ್ಟು ಸ್ಪಷ್ಟವಾಗಿರುವಂತಹ ವಿಷಯವನ್ನು ನ್ಯಾಯಾಧೀಶರಿಂದ, ಆಡಳಿತ ಮಾಡುವವರಿಂದ, ಕಾನೂನಿನ ಮಂತ್ರಿಗಳಿಂದ ತಿಳಿದುಕೊಳ್ಳಬೇಕಾ? ಸೂರ್ಯ ಚಂದ್ರರ ಬೆಳಕು ಎಷ್ಟು ಸ್ಪಷ್ಟವೋ, ಎಷ್ಟು ಸ್ವಚ್ಛವೋ ಪಟ್ಟಣ ಪ್ರದೇಶಕ್ಕೂ ಮತ್ತು ಹಳ್ಳಿಗಾಡಿನ ಪ್ರದೇಶಕ್ಕೂ ಇರುವ ಅಂತರವೂ ಕೂಡ ಅಷ್ಟೇ ಸ್ಪಷ್ಟವಾಗಿದೆ. ಆರ್ಥಿಕವಾಗಿ, ವಿದ್ಯೆಯ ದೃಷ್ಟಿಯಿಂದ, ಸವಲತ್ತುಗಳ ದೃಷ್ಟಿಯಿಂದ ಯಾವುದೇ ದೃಷ್ಟಿಯಿಂದ ತೆಗೆದುಕೊಂಡರೂ ಕೂಡ ಈ ಎರಡೂ ಬದುಕಿನ ಮಧ್ಯದಲ್ಲಿ ಒಂದು ದೊಡ್ಡ ಅಂತರ ಇದೆ. ಈ ಅಂತರವನ್ನು ಗುರುತಿಸಲಿಕ್ಕೆ ಆಗುವುದಿಲ್ಲ ಎಂದ ಹೇಳುವುದು ಅತ್ಯಂತ ದಡ್ಡತನವಾಗುತ್ತದೆ. ಈ ಬಗ್ಗೆ ವಿಷಯಗಳನ್ನು ಹೇಳಿಕೊಂಡು ಹೋದರೆ ಸಾಕಷ್ಟು ಹೇಳುವುದಕ್ಕೆ ಸಾಧ್ಯವಿದೆ. ನಾನು ಮಾತನ್ನು ಮುಗಿಸುವುದಕ್ಕಿಂತ ಮೊದಲು ಸದನದ ಮುಖಾಂತರ ಈ ನಾಡಿನಲ್ಲಿ ಮತ್ತೊಂದು ಸಾರಿ ಕಾನೂನಿನ ಚೌಕಟ್ಟಿನಲ್ಲಿ ನ್ಯಾಯವನ್ನು ಕೊಡುವಂತಹವರು, ಆಡಳಿತವನ್ನು ಮಾಡುವಂತಹವರು, ಏನಾದರೂ ಕುಂಟು ನೆಪಗಳನ್ನು ಒಡ್ಡಿ ಗ್ರಾಮೀಣ ಪ್ರದೇಶದ ಜನತೆಗೆ ಸಿಕ್ಕಬೇಕಾದಂತಹ ಸವಲತುಗಳನ್ನು ಕಿತ್ತುಕೊಳ್ಳುವಂತಹ ಪ್ರಯತ್ನ ಮಾಡಿದರೆ ಆ ಪ್ರಯತ್ನವನ್ನು ಆಳುವಂತಹವರು ನೋಡಿಕೊಂಡು ಕಣ್ಣುಮುಚ್ಚಿಕೊಂಡು ಕುಳಿತರೆ, ಬಹುಶ: ಮಾನ್ಯ ಹನುಮೇಗೌಡರು ಹೇಳಿದಂತೆ ಯಾವತ್ತಾದರೂ ಒಂದು ದಿನ ಈ ದೇಶದಲ್ಲಿ ಕ್ರಾಂತಿ ಮಾಡಲೇಬೇಕಾಗುತ್ತದೆ, ಅದು ಆಗಲೇಬೇಕಾಗುತ್ತದೆ. ಅದನ್ನು ಯಾರಿಂದಲೂ ತಡೆಯಲಿಕ್ಕೆ ಸಾಧ್ಯವಿಲ್ಲ. ನಮ್ಮ ಸಂಯಮಕ್ಕೂ ಕೂಡ ಒಂದು ಮಿತಿ ಇದೆ. ಆ ಒಂದು ಪ್ರವೃತ್ತಿ ಇರುವವರು ತಿದ್ದಿಕೊಳ್ಳಬೇಕು ಎನ್ನುವಂತಹ ಸಂದೇಶವನ್ನು ನಾವೆಲ್ಲರೂ ಕೂಡ ಈ ಸದನದ ಮುಖಾಂತರ ಕೊಡಬೇಕೆಂದು ಕೋರುತ್ತೇನೆ. ಗ್ರಾಮೀಣರಿಗೆ ಕೃಪಾಂಕ ವಿಷಯದಲ್ಲಿ ಅಷ್ಟೇ ಅಲ್ಲ, ಎಲ್ಲಾ ವಿಷಯಗಳಲ್ಲೂ ಕೂಡ ಅನ್ಯಾಯವಾಗಿದೆ.

ಮಾನ್ಯ ಸದಸ್ಯರಾದ ಬೈರೇಗೌಡರು ಆಗಾಗ್ಗೆ ಕೃಷಿಗೆ ಶೇಕಡ 8ರಷ್ಟು ಆದ್ಯತೆ ಕೊಟ್ಟೆ ಕೈಗಾರಿಕೆಗಳಿಗೆ ಶೇಕಡ 36ರಷ್ಟು ಕೊಟ್ಟಿದ್ದಾರೆ ಎಂದು ಹೇಳುತ್ತಿರುತ್ತಾರೆ. ಇನ್ನೂ ಎಷ್ಟು ಅಂಕಿಅಂಶಗಳನ್ನು ಕೊಟ್ಟರೆ ಇವರ ತಲೆ ಸರಿ ಮಾಡುವುದಕ್ಕಾಗುತ್ತದೆ ಎಂಬುದನ್ನು ಹೇಳಿ. ಇನ್ಯಾವ ಆಸ್ಪತ್ರೆಗೆ ತೆಗೆದುಕೊಂಡು ಸೇರಿಸಿದರೆ ಇವರ ತಲೆ ಸರಿಮಾಡುವುದಕ್ಕಾಗುತ್ತದೆ ಎಂಬುದನ್ನು ಹೇಳಿ. ಇನ್ನೆಷ್ಟು ಅಂಶಗಳನ್ನು ಹೇಳಿದರೆ ನಾವು ಇವರನ್ನು ಮೆಂಟಲಿ ಪ್ರಿಪೇರ್ ಮಾಡುವುದಕ್ಕೆ ಆಗುತ್ತದೆ ಹೇಳಿ? ನೀವು ತಿದ್ದಿಕೊಳ್ಳಬೇಕಾಗುತ್ತದೆ, ನೀವು ತಿದ್ದಿಕೊಳ್ಳದಿದ್ದರೆ ಕಾಲ ಬರುತ್ತದೆ, ಸಾಮಾನ್ಯರು ಎಚ್ಚೆತ್ತುಕೊಂಡು ತಿದ್ದಬೇಕಾಗುತ್ತದೆ. ಅದಕ್ಕೆ ಅವಕಾಶ ಕೊಡದೇ ದಯಮಾಡಿ ಅವರಿಗೆ ಕೊಡುವಂತಹ ಸವಲತ್ತುಗಳನ್ನು ಕಿತ್ತುಕೊಳ್ಳುವಂತಹ ಸಣ್ಣತನವನ್ನು, ಧಾರ್ಷ್ಟ್ಯ ತನವನ್ನು ಮಾಡಬೇಡಿ ಎನ್ನುವಂತಹ ಎಚ್ಚರಿಕೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮನಗೌಡ :— ಮಾನ್ಯ ಅಧ್ಯಕ್ಷರೇ, ಬಿ.ಎ.ಸಿ.ಯಲ್ಲಿ ಸಭೆಯ ಕಾರ್ಯ ಕಲಾಪಗಳ ಬಗ್ಗೆ ನಿರ್ಧರಿಸುವುದು ಸರಿಯಷ್ಟೆ. ಈಗ ಚರ್ಚೆಯಾಗುತ್ತಿರುವ ಮಸೂದೆ ಕೂಡ ಬಹಳ ಪ್ರಾಮುಖ್ಯವಾದದ್ದೇ. ಅದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಆದರೆ ಶೂನ್ಯ ವೇಳೆ, ಗಮನ ಸೆಳೆಯುವ ಸೂಚನೆಗಳು ಮೂಲಕ ಪ್ರಸ್ತಾಪಿಸಬೇಕಾದ ನಮ್ಮದೇ ಆದಂತಹ ಕೆಲವು ಸಣ್ಣ ಸಣ್ಣ ಸಮಸ್ಯೆಗಳು ನಮಗೆ ಇವೆ. ಪ್ರಶ್ನೋತ್ತರದಿಂದ ನಮಗೆ ಮುಖ್ಯ ಮಾಹಿತಿ ಸಿಗುವುದಿಲ್ಲ. ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು ಸದನದಲ್ಲಿದ್ದಾರೆ. ದಯವಿಟ್ಟು ಶೂನ್ಯ ವೇಳೆ, ಗಮನ ಸೆಳೆಯುವ ಸೂಚನೆಗಳಿಗೂ ಕೂಡ ಸ್ವಲ್ಪ ಟೈಮ್ ಅನ್ನು ಪ್ರಿಸರ್ವ್ ಮಾಡಬೇಕೆಂದು ಕೋರುತ್ತೇನೆ, ಇದರಿಂದ ನಮ್ಮ ಸಣ್ಣ ಸಣ್ಣ ಸಮಸ್ಯೆಗಳನ್ನು ಪ್ರಸ್ತಾಪ ಮಾಡಲು ಅವಕಾಶ ಸಿಗುತ್ತದೆ. ಇವೆಲ್ಲವನ್ನೂ ನಮ್ಮ ಲೀಡರ್ಸ್ ನಿಮ್ಮ ಗಮನಕ್ಕೆ ತರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಉಳಿದ ಎಲ್ಲಾ ಫ್ಲೋರ್ ಲೀಡರ್ಸ್‌ಗಳು ಈ ವಿಚಾರ ತಮ್ಮ ಗಮನಕ್ಕೆ ತರುತ್ತಾರೋ ಇಲ್ಲವೋ ಅದೂ ಸಹಿತ ನನಗೆ ಗೊತ್ತಿಲ್ಲ. ದಯಮಾಡಿ ಅದಕ್ಕೊಂದು ಸ್ವಲ್ಪ ಸಮಯ ಸ್ಪೇರ್ ಮಾಡಬೇಕೆಂದು ಕೋರುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, ನಾನು ಬೆಳಿಗ್ಗೆ ತಮ್ಮ ಛೇಂಬರ್‌ಗೆ ಬಂದಾಗ ಇದೇ ವಿಷಯವನ್ನು ಪ್ರಸ್ತಾಪ ಮಾಡಿದ್ದೇ. ಮಾನ್ಯ ಸದಸ್ಯರಾದ ಶಿವಾನಂದ ಪಾಟೀಲ್ ಪ್ರಸ್ತಾಪಿಸಲಿದ್ದ ಗಮನ ಸೆಳೆಯುವ ಸೂಚನೆ ನಿನ್ನೆ ಅಜೆಂಡಾದಲ್ಲಿ ಬಂದಿತ್ತು. ಆದರೆ ಅದನ್ನು ಪ್ರಸ್ತಾಪಿಸಲು ಅವರಿಗೆ ಅವಕಾಶ ಸಿಗಲಿಲ್ಲ., ಅದರ ಬಗ್ಗೆ ಇವತ್ತು ಬೆಳಿಗ್ಗೆ ತಮಗೆ ನೆನಪು ಮಾಡಿದ್ದೇನೆ. ಅಟ್‌ಲೀಸ್ಟ್ ಶೂನ್ಯ ವೇಳೆಯಲ್ಲಾದರೂ

ಇಂತಹ ವಿಷಯಗಳನ್ನು ಪ್ರಸ್ತಾಪಿಸಲು ತಾವು ಅವಕಾಶ ಮಾಡಿಕೊಡಬೇಕು. ಬಿಎಸಿ ಮೀಟಿಂಗ್‌ನಲ್ಲಿ ತಾವು ಜೀರೋ ಹವರ್‌ಗೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದ್ದಿರಿ.

ಅಧ್ಯಕ್ಷರು :— ನಿನ್ನೆಯ ಬಿ.ಎ.ಸಿ. ಮೀಟಿಂಗ್‌ನಲ್ಲಿ ಶೂನ್ಯ ವೇಳೆ, ಪ್ರಶ್ನೋತ್ತರ ವೇಳೆ ಗಮನ ಸೆಳೆಯುವ ಸೂಚನೆ ಯಾವುದನ್ನೂ ಕೂಡ ತೆಗೆದುಕೊಳ್ಳಬಾರದೆಂದು ತೀರ್ಮಾನವಾಗಿದೆ. ಸಮಯ ಸಿಕ್ಕರೆ ಜೀರೋ ಹವರ್‌ಗೆ ಅವಕಾಶ ಕೊಡೋಣ ಎಂದು ನಾನು ಹೇಳಿದ್ದೆ ಅಷ್ಟೆ. ಬಿ.ಎ.ಸಿ.ನಲ್ಲಿ ಆದ ತೀರ್ಮಾನವನ್ನು ನಾನು ಇಲ್ಲಿ ಇಂಪ್ಲಿಮೆಂಟ್ ಮಾಡಬೇಕೋ ಬಿಡಬೇಕೋ ಎಂದು ನೀವೇ ಹೇಳಿ. ನಾನು ಅದರಂತೆ ನಡೆದುಕೊಳ್ಳದಿದ್ದರೆ ಬಿಎಸಿ ತೀರ್ಮಾನ ವಯೋಲೇಟ್ ಮಾಡಲಾಗಿತ್ತಿದೆ ಎಂದು ನನ್ನನ್ನು ದೂಷಿಸಲಾಗುತ್ತದೆ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮನಗೌಡ :— ಬಿ.ಎ.ಸಿ.ನಲ್ಲಿ ನಮ್ಮ ಲೀಡರ್ಸ್ ಏನು ಮಾಡುತ್ತಾರೂ ಏನೋ ನಮಗೆ ಒಂದೂ ಗೊತ್ತಾಗುತ್ತಿಲ್ಲ. ಈ ಅಧಿವೇಶನದಲ್ಲಿ ಮೂವತ್ತು ವಿಧೇಯಕಗಳನ್ನು ಅಂಗೀಕರಿಸಿಕೊಂಡಿರಿ.

ಅಧ್ಯಕ್ಷರು :— ಇಲ್ಲ, ಅಂಗೀಕರಿಸಿರುವುದೇ ಹದಿಮೂರು ವಿಧೇಯಕಗಳು. ಮೂವತ್ತು ವಿಧೇಯಕಗಳೆಂದು ಏಕೆ ಹೇಳುತ್ತಿದ್ದೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ನೀವು ಒಪ್ಪಿಕೊಂಡಿರುವಂತೆ ವಿಷಯಗಳನ್ನು ಪ್ರಸ್ತಾಪಿಸಲು ನಮಗೆ ಶೂನ್ಯ ವೇಳೆಯಲ್ಲಿ ಅವಕಾಶ ಕಲ್ಪಿಸಿಕೊಡಬೇಕು.

ಅಧ್ಯಕ್ಷರು :— ನಾನು ಒಪ್ಪಿಕೊಂಡಿಲ್ಲ. ಸಮಯವಿದ್ದರೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕಲ್ಪಿಸಿಕೊಡುವುದಾಗಿ ಹೇಳಿದ್ದೇನಷ್ಟೆ. ಈಗ ಒಂದು ಕೆಲಸ ಮಾಡೋಣ. ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ 2000, ಇದರ ಮೇಲಿನ ಚರ್ಚೆಗೆ ಎರಡು ಗಂಟೆ ಕಾಲ ನಿಗದಿಪಡಿಸಿದ್ದರೂ, ಈಗ ಎರಡು ಗಂಟೆ ಇಪತ್ತು ನಿಮಿಷಗಳಾದವು. ಅದುದದರಿಂದ, ನನ್ನ ಒಂದು ಸಲಹೆಯೇನೆಂದರೆ, ಇದರ ಬಗ್ಗೆ ಎಲ್ಲಾ ಮಾನ್ಯ ಸದಸ್ಯರು ಮಾತನಾಡುವುದರಿಂದ ಇದರ ಮೇಲಿನ ಚರ್ಚೆಗೆ ಇನ್ನೂ ಒಂದು ಗಂಟೆ ಕಾಲ ನಿಗದಿಪಡಿಸಿ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕ, 2000 ಇದರ ಮೇಲಿನ ಚರ್ಚೆಗೆ ಒಂದು ಗಂಟೆಯಷ್ಟು ಕಾಲಾವಕಾಶವನ್ನು ಕಡಿತಗೊಳಿಸೋಣ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮನಗೌಡ :— ಇಂದು 2000ದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೇ, 2000ದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕದ ಮೇಲಿನ ಚರ್ಚೆಯನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು :— ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನವನ್ನು ನಾನು ಅನುಷ್ಠಾನಗೊಳಿಸುತ್ತಿದ್ದೇನೆ. ಇದಕ್ಕೆ ಸರ್ಕಾರದವರು ಏನೂ ಹೇಳುತ್ತಾರೆಂದು ಕೇಳೋಣ.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು :— ಮೊದಲು ವಿಧೇಯಕಗಳ ಮೇಲಿನ ಚರ್ಚೆಯನ್ನು ಕೈಗೆತ್ತಿಕೊಳ್ಳೋಣ, ಅನಂತರ ಶೂನ್ಯ ವೇಳೆಯನ್ನು ತೆಗೆದುಕೊಳ್ಳೋಣವೆಂದು ಹೇಳಿದೆ. ಇದರ ಬಗ್ಗೆ ಸರ್ಕಾರದವರು ಹೇಳಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಅಧಿವೇಶನದ ಕಲಾಪ ನಾಳೆಗೆ ಮುಕ್ತಾಯವಾಗಬೇಕೆಂದು ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ನಾವು ಒಂದು ತಾತ್ವಿಕ ತೀರ್ಮಾನಕ್ಕೆ ಬಂದಿದ್ದೇವೆ. ಕೆಲವು ವಿಧೇಯಕಗಳು ಇಲ್ಲಿಂದ ಅಂಗೀಕಾರವಾಗಿ ಮೇಲ್ಮನೆಗೆ ಹೋಗಬೇಕು ಮತ್ತು ಈ ವಿಧೇಯಕಗಳನ್ನು ಅದ್ಯತೆ ಮೇಲೆ ಅಂಗೀಕರಿಸಿಕೊಡಬೇಕೆಂದು ಸಹ ಹೇಳಿದ್ದೇವೆ. ಅನಂತರ, ಮತ್ತೊಂದು ಮನವಿ ಏನೆಂದರೆ, ಹಣಕಾಸಿಗೆ ಸಂಬಂಧಿಸಿದ ವಿಧೇಯಕಗಳೇನಿವೆ, ಅವುಗಳನ್ನು ಪೂರೈಸಿಕೊಂಡು ತದನಂತರ ಚರ್ಚೆಗೆ ತಾವು ಯಾವುದೇ ವಿದೇಯಕಗಳನ್ನಾದರೂ ತೆಗೆದುಕೊಳ್ಳಬಹುದು. ಈಗ ವಿಧೇಯಕವನ್ನು ಚರ್ಚೆಗೆ ತೆಗೆದುಕೊಂಡಿರುವುದರಿಂದ ಮೊದಲು ಇದನ್ನು ಪೂರೈಸಬೇಕು. ವಿವಾದಾತ್ಮಕವಾಗಿರುವ ವಿಧೇಯಕಗಳಾವುವೂ ಇಲ್ಲ. ನಿಭಾಯಿಸಿಕೊಂಡು ಹೋಗಬಹುದೆನ್ನುವ ಒಂದೆರಡು ವಿಧೇಯಕಗಳು ಉಳಿದುಕೊಂಡರೆ ಪರವಾಗಿಲ್ಲ. ಆದರೆ, ಮೇಲ್ಮನೆಗೆ ಕಳುಹಿಸಿಕೊಡಬೇಕಾಗಿರುವ ವಿಧೇಯಕ ಇವೊತ್ತು ಅಂಗೀಕಾರವಾಗದಿದ್ದರೆ ಮೇಲ್ಮನೆಯ ಅಧಿವೇಶನದ ಅವಧಿಯನ್ನು ಪುನ: ವಿಸ್ತರಿಸಬೇಕಾಗುತ್ತದೆ ಅಥವಾ ಅಲ್ಲಿಂದ ಅಂಗೀಕಾರವಾಗಿ ಬರುವ ವಿಧೇಯಕವನ್ನು ನಾಳೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸಬೇಕು. ಉಳಿದುದರ ಬಗ್ಗೆ ತಾವು ಯಾವ ರೀತಿ ನಿರ್ಣಯಿಸುತ್ತೀರೋ ಆ ರೀತಿ ಮಾಡಬಹುದಾಗಿದೆ.

ಅಧ್ಯಕ್ಷರು :— ಅಧಿವೇಶನ ನಡೆದ ಇದುವರೆಗಿನ ಒಟ್ಟು 78 ಗಂಟೆಗಳ ಕಲಾಪದಲ್ಲಿ ಸರ್ಕಾರಿ ಕಾರ್ಯಕ್ರಮ ಕೇವಲ 16 ಗಂಟೆಗಳಾಗಿದ್ದು, 59 ಗಂಟೆಗಳ ಕಾಲವನ್ನು ಬೇರೆಯವರು ಉಪಯೋಗಿಸಿಕೊಂಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಅಧಿವೇಶನ ಕರೆಯದಿದ್ದರೆ ನಾವೇನು ಮಾಡುವುದು? ಅಧಿವೇಶನವನ್ನು ಹೆಚ್ಚು ದಿವಸ ನಡೆಸಬೇಕೆನ್ನುವುದು ನಮ್ಮ ಅಪೇಕ್ಷೆ.

ಅಧ್ಯಕ್ಷರು :— ವಿಧೇಯಕಗಳು ಅಂಗೀಕಾರವಾದ ನಂತರ ಯಾವುದೇ ವಿಷಯವನ್ನು ಬೇಕಾದರೂ ಚರ್ಚೆಗೆ ತೆಗೆದುಕೊಳ್ಳೋಣ. ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನವಾಗಿರುವುದನ್ನು ನಾನು ಅನುಷ್ಠಾನಗೊಳಿಸುತ್ತಿದ್ದೇನಷ್ಟೆ. ನಾನೇನು ಮಾಡಲಿ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಒಂದು ವರ್ಷದಲ್ಲಿ ಒಂದು ನೂರು ದಿವಸಗಳ ಕಾಲ ಅಧಿವೇಶನ ನಡೆಸುವುದಾಗಿ ಹೇಳಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಯಾವಾಗಲೂ ಅಧಿವೇಶನ ನಡೆಸಕ್ಕಂಥ ವಿಚಾರದಲ್ಲಿ ಒಂದು ಕೈಯಿಂದ ಚಪ್ಪಾಳೆಯಾಗುವುದಿಲ್ಲ, ಎರಡೂ ಕೈಗಳು ಸೇರಿದರೆ ಮಾತ್ರ ಚಪ್ಪಾಳೆಯಾಗುತ್ತದೆ. ಆ ವಿಚಾರದಲ್ಲಿ ಪ್ರತಿಪಕ್ಷಗಳು ಸ್ಪಂದಿಸಿದರೆ ಮಾತ್ರ ನಾವು ಅಧಿವೇಶನವನ್ನು ಒಂದು ನೂರು ದಿವಸಗಳ ಕಾಲ ನಡೆಸಬಹುದು. ನನಗೆ ಇದರ ಬಗ್ಗೆ ಸಾಕಷ್ಟು ಅನುಭವವಿರುವುದರಿಂದ, ಅನುಭವವನ್ನು ಸ್ವಲ್ಪ ಹಂಚಿಕೊಳ್ಳೋಣ. ನನಗೆ ಲೋಕಸಭೆಯಲ್ಲಿ ರಾಜ್ಯ ಸಭೆಯಲ್ಲಿ, ಇಲ್ಲಿ ಮೇಲ್ಮನೆ ಹಾಗೂ ಕೆಳಮನೆಯಲ್ಲಿ ಕೆಲಸ ಮಾಡಿರುವ ಅನುಭವವಿದೆ. ಪಾರ್ಲಿಮೆಂಟ್‌ನಲ್ಲಿ ಆಯವ್ಯಯ ಅಧಿವೇಶನವನ್ನು 75 ದಿವಸಗಳ ಕಾಲ ನಡೆಸುತ್ತಾರೆ. ನಮ್ಮಲ್ಲಿ ನಡೆಸೋಣರೆಂದರೆ ನೀವು ಕೋಪಿಸಿಕೊಂಡು ಎದ್ದು ಹೋದಿರಿ. ಹಾಗಾಗಿ, ಅಧಿವೇಶನವನ್ನು ಹೆಚ್ಚು ಕಾಲ ನಡೆಸುವುದಕ್ಕಾಗಲಿಲ್ಲವೇ ಹೊರತು ಆಯವ್ಯಯ ಅಧಿವೇಶನದಲ್ಲಿ ನಾವು ಪೂರ್ಣ ಪ್ರಮಾಣದ ಕಲಾಪ ನಡೆಸಬೇಕಿರುತ್ತದೆ. ಈಗಾಗಲೇ ಇದು ವಿಸ್ತರಣೆಗೊಂಡ ಅಧಿವೇಶನವಾಗಿದ್ದು, ವಿಸ್ತರಣೆ ಒಂದು ಬಾರಿಯಲ್ಲ, ಎರಡು ಬಾರಿಯಾಗಿದೆ. ನಿಗದಿತ ದಿನಾಂಕದಂತೆ ಅಧಿವೇಶನ 17 ತಾರೀಖಿನಂದು ಮುಕ್ತಾಯಗೊಳ್ಳಬೇಕಿತ್ತು. ಇದನ್ನು 22ನೇ ತಾರೀಖಿನವರೆಗೆ ವಿಸ್ತರಿಸಬೇಕೆಂದಿರಿ, ಒಪ್ಪಿಕೊಂಡೆವು. ಇದೆಲ್ಲವೂ ತಮಗೆ ಗೊತ್ತಿದೆ. ನಾವು ಇನ್ನೇನು ಮಾಡಬೇಕೆಂದು ನೀವು ಹೇಳಿದರೆ ಅದರಂತೆ ನಡೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮಾತನಾಡುತ್ತಾ 'ಅಧಿವೇಶನ ಸಮಯದಲ್ಲಿ ಕೋಪ ಮಾಡಿಕೊಂಡು ಎದ್ದು ಹೋದಿರಿ' ಎಂದರು. ತಾವು (ಚಂದ್ರೇಗೌಡರು) ವಿರೋಧ ಪಕ್ಷದ ನಾಯಕರಾಗಿ ಇತ್ತ ಕಡೆ ಕುಳಿತಿದ್ದಂಥ ಸಂದರ್ಭದಲ್ಲಿ ನಮಗೆ ನೀವೇನು ಪಾಠ ಕಲಿಸಿದಿರಿ?

ಶ್ರೀ ಡಿ.ಬಿ. ಚಂದ್ರೇಗೌಡ :— ಆ ತಪ್ಪಿನಿಂದ ಪಾಠ ಕಲಿತು ನಾವು ಇತ್ತ ಕಡೆ (ಆಡಳಿತ ಪಕ್ಷದಕಡೆ) ಕುಳಿತುಕೊಂಡಿದ್ದೇವೆ.

ಶ್ರೀ ಸಿ. ಬೈರೇಗೌಡ :— ಆ ಸಂದರ್ಭದಲ್ಲಿ ನಮ್ಮನ್ನು ಅಧಿವೇಶನದ ಪೂರ್ತಿ ಬಾಯ್ಕಾಟ್ ಮಾಡಿಸಿದಿರಿ. ಅಂದು ನಮಗೆ ತಾವು ಏನು ಪಾಠ ಕಲಿಸಿದಿರಿ, ಆ ಪಾಠವನ್ನು ನಾವು ಸ್ವಲ್ಪಮಟ್ಟಿಗೆ ಕಲಿತುಕೊಂಡಿದ್ದೇವೆ.

ಅಧ್ಯಕ್ಷರು :— ಈಗ ಒಂದು ಕೆಲಸ ಮಾಡೋಣ. ಎರಡು ಗಂಟೆ ತನಕ ಈ ವಿಧೇಯಕದ ಮೇಲಿನ ಚರ್ಚೆ ಮುಗಿಸೋಣ. ನಂತರ ನಾವು-ನೀವುಗಳೆಲ್ಲರೂ ಸೇರಿ ಕುಳಿತುಕೊಂಡು ಕಲಾಪವನ್ನು ಹೇಗೆ ನಡೆಸಬೇಕೆಂದು ತೀರ್ಮಾನಿಸೋಣ.

ಶ್ರೀ ಡಿ.ಬಿ. ಚಂದ್ರೇಗೌಡ :— ಅಧ್ಯಕ್ಷರಾದ ತಾವೇ ಇದರ ಬಗ್ಗೆ ನಿರ್ಧರಿಸಿ. ಮತ್ತೆ ಅದಕ್ಕೊಂದು ಸಭೆ ಏಕೆ? ಈ ವಿಧೇಯಕದ ಮೇಲಿನ ಚರ್ಚೆ ದೀರ್ಘಕಾಲ ತೆಗೆದುಕೊಳ್ಳುವುದಿಲ್ಲ. I have to implement the decidion of the B.A.C., I cannot voilate the decision of the B.A.C.

ಅಧ್ಯಕ್ಷರು :— ಮಾನ್ಯ ಬೈರೇಗೌಡರೆ, ನಿನ್ನೆ ನಡೆದಂಥ ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ತಾವೂ ಇದ್ದೀರಿ. ಈ ವಿಧೇಯಕದ ಮೇಲಿನ ಚರ್ಚೆಗೆ ಎರಡು ತಿಂಗಳುಗಳ ಕಾಲ ನಿಗದಿಪಡಿಸಿದ್ದು, ಈಗಾಗಲೇ ಎರಡೂವರೆ ಗಂಟೆ ಕಾಲವಾಗಿದೆ. ಆದುದರಿಂದ, 2000ದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕಗಳ ಮೇಲಿನ ಚರ್ಚೆಗೆ ನಿಗದಿಪಡಿಸಿದ್ದ ಕಾಲದಲ್ಲಿ ಒಂದು ಗಂಟೆಯಷ್ಟು ಹೆಚ್ಚು ಕಾಲಾವಕಾಶ ಕೊಡೋಣ.

ಶ್ರೀ ಸಿ. ಬೈರೇಗೌಡ :— ತಾವು ಸಲಹೆ ಕೊಟ್ಟಿದ್ದೀರಿ, ಅದರ ಬಗ್ಗೆ ಅನಂತರ ಮಾತನಾಡೋಣ.

ಅಧ್ಯಕ್ಷರು :— ಈಗ ವಿಧೇಯಕದ ಮೇಲಿನ ಚರ್ಚೆ ಮುಕ್ತಾಯಗೊಂಡು ಅಂಗೀಕಾರವಾಗಬೇಕು. ಎರಡು ಗಂಟೆ ಬಳಿಕ ನಾವು ಸಭೆ ಸೇರೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ನಮಗೆ ಅವಕಾಶ ಮಾಡಿಕೊಡುತ್ತೇವೆಂದು ತಾವು ಹೇಳಿದ್ದೀರಿ.

ಅಧ್ಯಕ್ಷರು :— ಶೂನ್ಯ ವೇಳೆಯನ್ನು ಸಂಜೆ ಎಷ್ಟೊತ್ತಿಗಾದರೂ, ಯಾವತ್ತಾದರೂ ತೆಗೆದುಕೊಳ್ಳಬಹುದು, ಅದಕ್ಕೆ ತೊಂದರೆಯೇನೂ ಇಲ್ಲ. ಶೂನ್ಯ ವೇಳೆ ಎಂದರೆ ಪ್ರಶ್ನೋತ್ತರವಾದ ಬಳಿಕ ತೆಗೆದುಕೊಳ್ಳುವುದು. ವಿಧೇಯಕಗಳನ್ನು ಚರ್ಚೆಗೆ ತೆಗೆದುಕೊಂಡ

ಬಳಿಕ ಚರ್ಚೆ ಮುಕ್ತಾಯವಾಗಿ ಅಂಗೀಕಾರವಾಗಬೇಕು. ಅನಂತರ, ಬೇರೆ ವಿಷಯಗಳ ಕುರಿತು ಮಾತನಾಡಬೇಕು. ಅದಕ್ಕೋಸ್ಕರವೇ ನಾನು ಹೇಳುತ್ತಿರುವುದೇನೆಂದರೆ, ಮಧ್ಯಾಹ್ನ ಎರಡರಿಂದ ಮೂರು ಗಂಟೆ ನಡುವೆ ಭೋಜನ ವಿರಾಮ ಇರುತ್ತದಲ್ಲ, ಆ ಸಮಯದಲ್ಲಿ ಐದು ನಿಮಿಷ ಕುಳಿತು ಮಾತನಾಡುತ್ತೇವೆ. ನಂತರ ಸಂಜೆಯೊಳಗಾಗಿ ಈ ವಿಧೇಯಕದ ಮೇಲಿನ ಚರ್ಚೆ ಮುಗಿಸಬೇಕು.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ನನ್ನದೊಂದು ಸಲಹೆ ಇದೆ. ನಮ್ಮ ಹಿರಿಯ ಸದಸ್ಯರು ಯಾವುದಾದರೊಂದು ವಿಷಯದ ಬಗ್ಗೆ ಮಾತನಾಡಬೇಕಾದರೆ ಗಂಟೆಗಟ್ಟಳೆ ಮಾತನಾಡುವುದು ಸರಿಯಲ್ಲ. ಅವರು ಆಈ ಸದನದಲ್ಲಿ ಹಲವಾರು ವರ್ಷಗಳಿಂದ ಮಾತನಾಡುತ್ತಿದ್ದಾರೆ. ಹೊಸದಾಗಿ ಆಯ್ಕೆಯಾಗಿ ಬಂದಿರುವ ಶಾಸಕರುಗಳಿಗೆ ಮಾತನಾಡಲು 5-10 ನಿಮಿಷಗಳಾದರೂ ಸಮಯ ಸಿಗಬೇಕಲ್ಲ. ಮಾತನಾಡುವವರು ಗಂಟೆಗಟ್ಟಳೆ ಮಾತನಾಡಿ ಎರಡು ಗಂಟೆಗೆ ಮುಗಿಸಬೇಕೆಂದರೆ, ಅಷ್ಟೊತ್ತಿಗೆ ಅವರು ತಮ್ಮ ಮಾತನ್ನು ನಿಲ್ಲಿಸಬೇಕಲ್ಲ.

ಅಧ್ಯಕ್ಷರು :— ಈಗಾಗಲೇ ನಾನು ಎರಡು ಗಂಟೆಗಳಷ್ಟು ಕಾಲವನ್ನು ನಿಗದಿಪಡಿಸಿದ್ದು, ಅದರಲ್ಲಿ 40 ನಿಮಿಷಗಳಷ್ಟು ಕಾಲವನ್ನು ಬಿ.ಜೆ.ಪಿಯವರಿಗೆ 30 ನಿಮಿಷಗಳಷ್ಟು ಕಾಲವನ್ನು ಕಾಂಗ್ರೆಸ್ ಪಕ್ಷದವರಿಗೆ, 30 ನಿಮಿಷಗಳಷ್ಟು ಕಾಲ ಜನತಾದಳದವರಿಗೆ ಮತ್ತು ಉಳಿದ ಸಮಯವನ್ನು ಇತರ ಪಕ್ಷಗಳ ಸದಸ್ಯರಿಗೆಂದು ಹಂಚಿಕೆ ಮಾಡುವ ಅಂದಾಜು ಇಟ್ಟುಕೊಂಡಿದ್ದೆ. ಬಿ.ಜೆ.ಪಿ.ಯವರು ಈಗಾಗಲೇ ಒಂದೂವರೆ ಗಂಟೆಯಷ್ಟು ಕಾಲ ತೆಗೆದುಕೊಂಡಿರುವುದರಿಂದ ನಾನೇನು ಮಾಡಲಿ?

ಶ್ರೀ ಬಿ.ಬಿ. ಶಿವಪ್ಪ :— ನಲವತ್ತು ನಿಮಿಷಗಳಷ್ಟು ಕಾಲಾವಕಾಶವನ್ನು ಒಬ್ಬರಿಗೆ ಹಂಚಿಕೆ ಮಾಡಿದ ಮೇಲೆ ಅಷ್ಟರೊಳಗೆ ಮಾತುಗಳನ್ನು ಮುಗಿಸಬೇಕು.

ಅಧ್ಯಕ್ಷರು :— ಮಾನ್ಯ ಸದಸ್ಯರಾದ ಹನುಮೇಗೌಡರು ನಲವತ್ತು ನಿಮಿಷಗಳ ಕಾಲ ಮಾತನಾಡಿದರೆ, ವಿರೋಧ ಪಕ್ಷದ ನಾಯಕರು ಅರ್ಧ ಗಂಟೆ ಮಾತನಾಡಿದರು, ಸಂತೋಷ. ನಮ್ಮ ಕಷ್ಟವನ್ನು ಅವರು ಅರ್ಥಮಾಡಿಕೊಳ್ಳಬೇಕು.

ಶ್ರೀ ಬಿ.ಬಿ. ಶಿವಪ್ಪ :— ನಾನೂ ಕೂಡ ಒಬ್ಬ ಸದಸ್ಯನಾಗಿದ್ದು, ನಾವೂ ಕೂಡ ಸ್ವಲ್ಪ ಅರ್ಥಮಾಡಿಕೊಳ್ಳಬೇಕಲ್ಲವೇ? ಸುಮ್ಮನೆ ಕುರ್ಚಿ ಬಳಿ ನಿಂತು ವಾದ ಮಾಡುವುದು ಸರಿಯಲ್ಲ. ಮಾತನಾಡಲು ಎದ್ದು ನಿಂತ ಬಳಿಕ ಯಾರ್‍ಯಾರು ಎಷ್ಟೆಷ್ಟು ಸಮಯ ಮಾತನಾಡಬೇಕೆಂಬ ಬಗ್ಗೆ ಅವರವರ ಪಕ್ಷಗಳ ನಾಯಕರು ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :— ಆಯಾ ಪಕ್ಷಗಳ ನಾಯಕರುಗಳೇ ತಂತಮ್ಮ ಸದಸ್ಯರುಗಳಿಗೆ ತಿಳಿಸಬೇಕು. ನಾಯಕರುಗಳೇ ಅದನ್ನು ಸರಿಪಡಿಸಿಕೊಳ್ಳಬೇಕು. ಈಗ 2000ದ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ

ಹುದ್ದೆಗಳ ಮೀಸಲಾತಿ, ವಿಧೇಯಕ ಬಹಳ ಮುಖ್ಯವಾಗಿರುವುದರಿಂದ ಇದರ ಮೇಲಿನ ಚರ್ಚೆಗೆ ಇನ್ನು ಒಂದು ಗಂಟೆಯಷ್ಟು ಹೆಚ್ಚು ಕಾಲವನ್ನು ನಿಗದಿಪಡಿಸಿದ್ದೇನೆ. 2000ದ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕದ ಮೇಲಿನ ಚರ್ಚೆಗೆ ನಿಗದಿಪಡಿಸಿದ್ದ ಕಾಲಾವಧಿಯಲ್ಲಿ ಒಂದು ಗಂಟೆಯಷ್ಟು ಅವಧಿಯನ್ನು ಕಡಿತಗೊಳಿಸೋಣ. ಇವೊತ್ತು ಪರ್ಯಾಲೋಚನೆ ಹಾಗೂ ಅಂಗೀಕಾರಕ್ಕಾಗಿ ಎರಡು ವಿಧೇಯಕಗಳನ್ನು ಕೈಗೆತ್ತಿಕೊಂಡಿದ್ದು, ಇಂದು ಸಂಜೆ ಎಷ್ಟೊತ್ತಿನವರೆಗಾದರೂ ಚರ್ಚೆಯಾಗಿ ಅಂಗೀಕಾರವಾಗಲೇಬೇಕು.

+ಶ್ರೀ ಸಿ. ಬೈರೇಗೌಡ (ವೇಮಗಲ್) :— ಮಾನ್ಯ ಅಧ್ಯಕ್ಷರೆ, ಈ ದಿವಸ ಬಹಳ ಮುಖ್ಯವಾದ ವಿಚಾರಕ್ಕೆ ಸಂಬಂಧಿಸಿದ ಮಸೂದೆಯನ್ನು ಸದನದ ಒಪ್ಪಿಗೆಗಾಗಿ ಸರ್ಕಾರದವರು ಮಂಡಿಸಿದ್ದಾರೆ. ಬಹುಶ: ಈ ಸದನದ ಚರಿತ್ರೆಯಲ್ಲಿ ಈ ವಿಚಾರದ ಬಗ್ಗೆ ಇಷ್ಟೊಂದು ವಿಪುಲವಾಗಿ ಚರ್ಚೆಯಾಗಿರುವುದು ನನಗಂತೂ ಜ್ಞಾಪಕವಿಲ್ಲ. ಮೊದಲನೇ ಬಾರಿಗೆ ಈ ವಿಚಾರದ ಮೇಲಿನ ಚರ್ಚೆಯಲ್ಲಿ ಎಲ್ಲಾ ಮಾನ್ಯ ಸದಸ್ಯರೂ ಪಾಲ್ಗೊಂಡು ತಮ್ಮೆಲ್ಲಾ ಬುದ್ಧಿಶಕ್ತಿಯನ್ನು ಉಪಯೋಗಿಸುತ್ತಿರುವದನ್ನು ಕಂಡು ನನಗಂತೂ ಸಂತೋಷವಾಗಿದೆ. ಸರ್ಕಾರಿ ನೌಕರಿಯಲ್ಲಿ ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಾತಿ ಕಲ್ಪಿಸಿಕೊಡಬೇಕು, ಇದರಿಂದ ಬಹಳ ದೊಡ್ಡ ಪರಿಣಾಮವುಂಟಾಗುತ್ತದೆ ಮತ್ತು ಗ್ರಾಮೀಣ ಜನತೆಯ ಬದುಕಿನಲ್ಲಿ ಮಹತ್ತರವಾದ ಬೆಳವಣಿಗೆಯುಂಟಾಗುತ್ತೆಂದು ನಾನಂತೂ ಭಾವಿಸಿಲ್ಲ. ಕಾರಣ ಏನೆಂದರೆ

1.00 ಪಿ.ಎಂ.

ಸರ್ಕಾರಿ ನೌಕರಿಯಲ್ಲಿ ಇರತಕ್ಕಂಥ ಒಟ್ಟು ಜನಸಂಖ್ಯೆ ಹೋಲಿಸಿದರೆ ಶೇಕಡ ಎರಡರಷ್ಟು ಮಾತ್ರ. ಶೇಕಡ ಎರಡರಷ್ಟರಲ್ಲಿ ನೀರು ಮೀಸಲಾತಿಯನ್ನು ಗ್ರಾಮೀಣ ಪ್ರದೇಶಗಳಿಗೆ ಶೇಕಡ 70ರಷ್ಟು ಇರತಕ್ಕಂಥ ಜನಸಂಖ್ಯೆಗೆ ಶೇಕಡ ಹತ್ತರಷ್ಟು ಎನ್ನುವುದು ಸರ್ಕಾರದವರು ತಂದಿದ್ದಾರೆ. ಆದುದರಿಂದ ಈ ಶೇಕಡ ಹತ್ತರಷ್ಟು ಮೀಸಲಾತಿಯನ್ನು ಗ್ರಾಮೀಣ ಪ್ರದೇಶದವರಿಗೆ ಕೊಟ್ಟರೆ ಗ್ರಾಮೀಣ ಬದುಕಿನಲ್ಲಿ ಬದಲಾವಣೆಯಾಗುತ್ತದೆ ಎನ್ನುವ ನಂಬಿಕೆ ನನಗಿಲ್ಲ. ಗ್ರಾಮೀಣ ಬದುಕಿಗೆ ಸಂಬಂಧಪಟ್ಟಂತೆ ಅನೇಕ ವಿಚಾರಗಳಿವೆ. ಅಲ್ಲಿ ಮೂಲಭೂತವಾದಂತಹ ಬದಲಾವಣೆಗಳನ್ನು ತರುವುದಾದರೆ ಅವರ ಬದುಕನ್ನು ಸ್ವಲ್ಪ ಮಟ್ಟಿಗೆ ನಾವು ಮೇಲೆ ತರುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಇದು ಸೀಮಿತವಾಗಿರತಕ್ಕಂಥ ವಿಚಾರ ಎನ್ನುವುದನ್ನು ನಾವು ಅರಿತು ಈ ಮಸೂದೆ ಇವತ್ತು ಚರ್ಚೆಗೆ ಬಂದಿದೆ. ಏಕೆ ಈ ರೀತಿಯಾದಂತಹ ಒಂದು ಒತ್ತಡ, ಈ ರೀತಿಯಾದಂತಹ ಒಂದು ಅವಶ್ಯಕತೆ ಏಕೆ ಇವತ್ತಿನ ದಿವಸ ಬಂದಿದೆ ಎನ್ನುವುದನ್ನು ನಾವು ಸೂಕ್ಷ್ಮವಾಗಿ ಇದರ ಹಿನ್ನಲೆಯನ್ನು ನೋಡಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಯಾರು ಏನೇ ಹೇಳಲಿ, ನಮ್ಮ ದೇಶ ಪುರಾತನವಾದಂತಹ ದೇಶ. ಸಾವಿರಾರು ವರ್ಷಗಳ ಚರಿತ್ರೆ ಇರತಕ್ಕಂಥ ದೇಶ. ಮನುಷ್ಯ ಯಾವ ರೀತಿ ಕಾಡಿನಲ್ಲಿ ವಾಸ ಮಾಡುತ್ತಿರುವವನು ಗುಹೆ ಬೆಟ್ಟಗುಡ್ಡಗಳಲ್ಲಿ ವಾಸ

ಮಾಡುತ್ತಿರುವವನು ಗುಂಪುಗಳಲ್ಲಿ ವಾಸ ಮಾಡುವುದಕ್ಕೆ ಪ್ರಯತ್ನಪಟ್ಟ. ಆ ರೀತಿಯಾಗಿ ಸಂಘಜೀವಿಯಾದ. ಆ ಸಂಘ ಜೀವಿಯಾದಂತಹ ಸಂದರ್ಭದಲ್ಲಿ ಒಂದು ಗುಂಪಿನಲ್ಲಿ ಇರುವಂತಹ ಒಬ್ಬನಿಗೆ ಆ ಕೆಲಸ, ಇನ್ನೊಬ್ಬನಿಗೆ ಈ ಕೆಲಸ ಎಂದು ಮಾಡಿಕೊಂಡು ಒಬ್ಬ ವ್ಯವಸಾಯ ಮಾಡಬೇಕು, ಒಬ್ಬ ಕಾವಲು ಕಾಯಬೇಕು ಮತ್ತೊಬ್ಬ ರಕ್ಷಣೆ ಮಾಡಬೇಕು ಎನ್ನುವಂತಹ ಡಿವಿಜನ್ ಆಫ್ ಲೇಬರ್ ಎನ್ನತಕ್ಕಂಥ ವ್ಯವಸ್ಥೆ ಉಂಟಾಯಿತು. ಅಲ್ಲಿಂದ ಪ್ರಾರಂಭವಾದಂತಹ ಈ ವ್ಯವಸ್ಥೆ ಈ ದೇಶದಲ್ಲಿ ನಮ್ಮ ಸಮಾಜದಲ್ಲಿ ಒಂದು ಜಾತಿಯಾಗಿ ಮಾರ್ಪಾಟಾಯಿತು. ಆಯಾಯ ವೃತ್ತಿಗೆ ಸಂಬಂಧಪಟ್ಟಂತೆ ಅದೇ ಒಂದು ಜಾತಿಯಾಯಿತು. ಅದರಿಂದ ವರ್ಣಾಶ್ರಮಧರ್ಮ ಈ ದೇಶದಲ್ಲಿ ಜಾರಿಗೆ ಬಂತು. ಆ ವರ್ಣಾಶ್ರಮಧರ್ಮದಲ್ಲಿ ಕೆಲವರಿಗೆ ಏನಿದ್ದರೂ ಕೂಡ ಅವರಿಗೆ ಆಸ್ತಿ ಏನೆಂದರೆ ಕೈಕಾಲು ಅಷ್ಟೆ. ಈ ವರ್ಣಾಶ್ರಮ ಧರ್ಮದ ಆಧಾರದ ಮೇಲೆ ರೂಪುಗೊಂಡ ಸಮಾಜದಲ್ಲಿ ಬಹುತೇಕ ಜನರಿಗೆ ಆಸ್ತಿ ಎಂದರೆ ಅವರ ಕೈಕಾಲು. ಏಕೆಂದರೆ ಅವರು ದುಡಿಯಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಿಗೆ ಮಾತನಾಡುವುದಕ್ಕೆ ಎಷ್ಟು ಸಮಯ ಬೇಕೋ ಗೊತ್ತಿಲ್ಲ. ಈ ಬಿಲ್ ಅಲ್ಲಿಗೆ ಟ್ರಾನ್ಸ್‌ಮಿಟ್ ಆಗಬೇಕು. ತಾವು ಅನುಮತಿ ಕೊಟ್ಟರೆ ಒಂದು ತಿದ್ದುಪಡಿ ತರಬೇಕೆಂದು ಆಲೋಚನೆ ಮಾಡಿದ್ದೇನೆ. ಅದರ ಬಗ್ಗೆ ತಮ್ಮ ಜೊತೆ ಚರ್ಚೆ ಮಾಡಿದ್ದೇನೆ. ಆದುದರಿಂದ ಹೆಚ್ಚು ಚರ್ಚೆಗೆ ಅವಕಾಶ ಇಲ್ಲದ ಹಾಗೆ ಈ ತಿದ್ದುಪಡಿ ಸಹಿತ ಒಪ್ಪಿಕೊಳ್ಳಬಹುದೇನೋ ಎಂದು ನನಗೆ ಅನಿಸುತ್ತದೆ. ಕೆಲವು ಡೌಟ್‌ಗಳಿದ್ದರೆ ಅದನ್ನು ಕ್ಲಿಯರ್ ಮಾಡೋಣ.

ಶ್ರೀ ಸಿ. ಬೈರೇಗೌಡ :— ಮೂವ್ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೆ, ನಾನು ಈ ಮೂಲಕ ಮಸೂದೆಗೆ ತಿದ್ದುಪಡಿಯನ್ನು ತಾವು ಅನುಮತಿ ಕೊಟ್ಟರೆ ಮಂಡಿಸುತ್ತೇನೆ. ಇದರಿಂದ ಹೆಚ್ಚು ಚರ್ಚೆಯಿಲ್ಲದೆ ಆಗಬಹುದು. ಇದರ ಬಗ್ಗೆ ನಾನೂ ಎಲ್ಲಾ ಮುಖಂಡರ ಹತ್ತಿರ ಮಾತನಾಡಿದ್ದೇನೆ.

ಅಧ್ಯಕ್ಷರು :— ಆಯಿತು, ಮೂವ್ ಮಾಡಿ.

<u>ಖಂಡ 3ಕ್ಕೆ ತಿದ್ದುಪಡಿ</u>

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕ ಖಂಡ 3 ರಲ್ಲಿ "ಶೇಕಡ ಹತ್ತರಷ್ಟನ್ನು" ಎಂಬ ಪದಗಳ ಬದಲಾಗಿ "ಶೇಕಡ ಇಪ್ಪತ್ತೈದರಷ್ಟನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಅಧ್ಯಕ್ಷರು :— ತಿದ್ದುಪಡಿಯನ್ನು ಮಂಡಿಸಲಾಯಿತು. ಈಗ ಸನ್ಮಾನ್ಯ ಸದಸ್ಯರುಗಳಾದ ಶ್ರೀ ಕೆ.ಹೆಚ್. ಹನುಮೇಗೌಡ, ಶ್ರೀ ಎಸ್.ಎಸ್. ಪಾಟೀಲ್, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಹೆಚ್.ಎಸ್. ಮಹದೇವಪ್ರಸಾದ್ ಮತ್ತು ಶ್ರೀ ಕೆ.ಟಿ. ಮಲ್ಲಿಕಾರ್ಜುನ ಅವರುಗಳು ಖಂಡ 3ಕ್ಕೆ ಕೆಲವೊಂದು ತಿದ್ದುಪಡಿಯನ್ನು ನೀಡಿದ್ದಾರೆ. ಅದನ್ನು ಮಂಡಿಸುವುದು.

ಖಂಡ 3

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕದ ಖಂಡ 3ರ 9ನೇ ಮತ್ತು 10ನೇ ಸಾಲಿನಲ್ಲಿ "ಶೇಕಡಾ 10ರಷ್ಟನ್ನು ಗ್ರಾಮೀಣ ಅಭ್ಯರ್ಥಿಗಳಿಗಾಗಿ ಮೀಸಲಿಡತಕ್ಕದ್ದು" ಎಂಬುದರ ಬದಲಾಗಿ ಶೇಕಡ 70 ರಷ್ಟನ್ನು ಗ್ರಾಮಾಂತರ ಪ್ರದೇಶದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಿಡತಕ್ಕದ್ದು" ಎಂದು ಪ್ರತಿಯೋಜಿಸತಕ್ಕದ್ದು.

ಅಧ್ಯಕ್ಷರು :— ಮಂಡಿಸಲಾಯಿತು.

+ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಅಧ್ಯಕ್ಷರೆ, ನಾವು ಏನು ಒಂದು ತಿದ್ದುಪಡಿಯನ್ನು ಕೊಟ್ಟಿದ್ದೇವೆ ಅದಕ್ಕೆ ವಿವರಣೆ ನೀಡುತ್ತೇನೆ. ಅದೇನೆಂದರೆ ಮೀಸಲಾತಿ ಶೇಕಡ 70 ರಷ್ಟು ಮಾಡಬೇಕೆಂದು ತಿಳಿಸಿದ್ದೇನೆ. ತಾವೂ ಸಹ ಅದರ ಪರವಾಗಿ ಇದ್ದೀರಿ. ಬಹುಶ: 25ಕ್ಕಿಂತ ಶೇಕಡ 75 ಮಾಡುವುದರಲ್ಲಿ ಯಾವ ತೊಂದರೆ ಇಲ್ಲ. ತಾವು ಇದನ್ನು ತಂದಿರುವುದು ನನಗೆ ಸಂತೋಷವಾಗಿದೆ. ಗ್ರಾಮೀಣ ಜನಸಂಖ್ಯೆ 60ಕ್ಕಿಂತ ಹೆಚ್ಚು ಎಂದು ತಾವು ಹೇಳಿದ್ದೀರಿ. ಶೇಕಡ 25 ರಷ್ಟು ಕೊಟ್ಟರೂ ಅಷ್ಟೆ, ಶೇಕಡ 60 ಕೊಟ್ಟರು ಅಷ್ಟೆ. ನೀವು 25 ಪರ್‌ಸೆಂಟ್ ಕೊಟ್ಟರೆ ಅದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಐದು ಜನ ಇದರಲ್ಲಿ ಇದ್ದರು ಎಂದರೆ ಅದರಲ್ಲಿ 25 ಪರ್‌ಸೆಂಟ್ ಒಬ್ಬ ಎಸ್‌ಸಿ ಬರುತ್ತಾನೆ. ಆ ಒಂದು ಎಸ್‌ಸಿಗೆ ಹಳ್ಳಿಯಲ್ಲಿ ಯಾರಿಗೆ ಕೊಡುತ್ತೀರಿ? ಒಂದು ಸಿಗುವುದಿಲ್ಲ. ನಾವು ನೋಡಿದ್ದೇವೆ. ಹಿಂದೆ ಒಂದು ಜಡ್ಜ್‌ಮೆಂಟ್ ಆಯಿತು. ಏನೆಂದರೆ ಸಿಂಗಲ್ ಪೋಸ್ಟ್ ಇದ್ದಲ್ಲಿ ರಿಸರ್ವೇಷನ್ ಬೇಡ ಎಂದು ಜಡ್ಜ್‌ಮೆಂಟ್ ಆಯಿತು. ಅದನ್ನು ತಪ್ಪಿಸುವುದಕ್ಕೆ ಏನು ಮಾಡಿದರೆಂದರೆ ಎಲ್ಲಾ ಕಡೆ ಸಿಂಗಲ್ ಪೋಸ್ಟ್ ಕರೆಯುವುದಕ್ಕೆ ಪ್ರಾರಂಭ ಮಾಡಿದರು. ಸಿಂಗಲ್ ಪೋಸ್ಟ್ ಮಾಡಿ ಒಬ್ಬ ಹರಿಜನರಿಗೂ ಸಿಗಲಿಲ್ಲ. ಎಲ್ಲಾ ಜನರಲ್‌ಗೆ ಹೋಗಿಬಿಟ್ಟಿತು. ಇದನ್ನು ಆ ರೀತಿ ಉಪಯೋಗಿಸಿಕೊಳ್ಳುತ್ತಾರೆ. ಆಮೇಲೆ ಗ್ರಾಮೀಣ ಜನರಿಗೆ ಒಂದೂ ಸಿಗುವುದಿಲ್ಲ. ತಾವು ಜನಸಂಖ್ಯೆ 60,000 ಎಂದು ಹೇಳಿದ್ದೀರಿ. ನಾವೂ ಹಟ ಹಿಡಿಯುವುದಿಲ್ಲ. ತಾವೂ ಹಠ ಹಿಡಿಯದ ಹಾಗೆ ಅದನ್ನು ಒಪ್ಪಿಕೊಂಡರೆ ಅದರ ಬಗ್ಗೆ ಚರ್ಚೆಯೇ ಬೇಡ.

ಶ್ರೀ ಕೆ.ಬಿ. ಕೋಳಿವಾಡ (ರಾಣೆಬೆನ್ನೂರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರು 10 ಪರ್‌ಸೆಂಟ್ ಬದಲಿಗೆ 25 ಪರ್‌ಸೆಂಟ್ ಎಂದು ಒಂದು ಅಮೆಂಡ್‌ಮೆಂಟನ್ನು ತಂದಿದ್ದಾರೆ; ಸಂತೋಷ. ಆದರೆ ನಾವು ಏನಾದರೂ ಒಂದು ಕಾನೂನು ತರಬೇಕಾದರೆ ಅದು ದೇಶದ ಮತ್ತು ರಾಜ್ಯದ ಜನ ಒಪ್ಪಬೇಕು. ಅದನ್ನು ಒಪ್ಪದೇ ಇದ್ದರೆ ಉಪಯೋಗವಾಗುವುದಿಲ್ಲ. ನಾವು ಇಲ್ಲಿ ಬಂದಂತಹ ಶಾಸಕರು ಒಪ್ಪಬಹುದು ಈ ಕಾನೂನನ್ನು. ಆದೆರ ಇದನ್ನು ಸಮಾಜದಲ್ಲಿ ಇರುವ ಜನ ಅಕ್ಸೆಪ್ಟ್ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಜನರು ಶೇಕಡ 75ರಷ್ಟು ಇರುವಾಗ ಎಂದರೆ 5 ಕೋಟಿ ಜನಸಂಖ್ಯೆಯಲ್ಲಿ ಒಂದು ಕೋಟಿ 30 ಲಕ್ಷ ಜನ ನಗರ ಪ್ರದೇಶದಲ್ಲಿ, 3 ಕೋಟಿ 20 ಲಕ್ಷ ಜನ ಗ್ರಾಮಾಂತರ ಪ್ರದೇಶದಲ್ಲಿ ಇರುವಾಗ ಜನ ಏನು ಅಂದುಕೊಳ್ಳುತ್ತಾರೆ? ನಾನು ನಿಮ್ಮನ್ನು ಕೇಳಿದೆ, 70-75 ಪರ್‌ಸೆಂಟ್ ಏಕೆ ಮಾಡಬಾರದೆಂದು. ಕೇಳಿದಾಗ ಅದಕ್ಕೆ ಇಲ್ಲ, ಅಧಿಕಾರಿಗಳು ಹೇಳುತ್ತಾರೆ, 30 ಪರ್‌ಸೆಂಟ್ ಅದರಲ್ಲಿ ವಿಮೆನ್ ಬರುತ್ತಾರೆ, ಐದು ಪರ್‌ಸೆಂಟ್ ಅಂಗವಿಕಲರಿಗೆ, ಸೈನಿಕರಿಗೆ ಇಟ್ಟಿದ್ದೇವೆ ಎಂದು ಹೇಳಿದಿರಿ. ಆದರಲ್ಲಿ 50 ಪರ್‌ಸೆಂಟ್ ನಮ್ಮ ಗ್ರಾಮಾಂತರ ಪ್ರದೇಶದವರಿಗೆ ಕೊಡಿ ವಿಮೆನ್‌ಗೆ 30 ಪರ್ಸೆಂಟ್ ಕೊಡಿ; ಬೇಡ ಎಂದು ಹೇಳುವುದಿಲ್ಲ. 30 ಪರ್ಸೆಂಟ್‌ನಲ್ಲಿ 60-70 ಪರ್ಸೆಂಟ್ ಗ್ರಾಮಾಂತರ ಮಹಿಳೆಯರಿಗೆ ಕೊಡಿ. ಅಂಗವಿಕಲರಿಗೆ ಐದು ಪರ್ಸೆಂಟ್ ಅದರೊಳಗೆ ಕೊಡಿ. ಗ್ರಾಮಾಂತರ ಪ್ರದೇಶದವರಿಗೆ ಕೊಡಿ. ಏನು ತಪ್ಪಾಗುತ್ತದೆ? 10 ಪರ್ಸೆಂಟ್ ಇಟ್ಟಾಗ ಕಾನೂನಿನ ತೊಡಕು ಬರದೇ ಇದ್ದರೆ 60 ಪರ್ಸೆಂಟ್ ಇಟ್ಟಾಗ ಕಾನೂನು ತೊಡಕು ಯಾವ ರೀತಿಯಿಂದ ಬರುತ್ತದೆ? ಅದಕ್ಕೆ ಈ ತೊಡಕು ಬರುವುದಿಲ್ಲ. ಮಾನ್ಯ ರಾಮಯ್ಯನವರು ಗ್ರಾಮಾಂತರ ಪ್ರದೇಶ ಮತ್ತು ಪಟ್ಟಣ ಪ್ರದೇಶದ ಬಗ್ಗೆ ಚೆನ್ನಾಗಿ ವಿವರಣೆ ಕೊಟ್ಟಿದ್ದಾರೆ. ಗ್ರಾಮಾಂತರ ಪ್ರದೇಶಕ್ಕೆ ಏನಾದರೂ ಲಾಭವಾಗುತ್ತದೆ ಎಂದರೆ ಈ ಪಟ್ಟಣದಲ್ಲಿ ಇರತಕ್ಕಂಥ ಸಿಟಿ ಓರಿಯೆಂಟೆಡ್ ಜನರೇನಿದ್ದಾರೆ ಅವರು ಏನಾದರೂ ಉಳುಕು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇವತ್ತು ನಿಮ್ಮ ಕೃಪಾಂಕದ ಜಡ್ಜ್‌ಮೆಂಟ್ ಏನಿದೆ ಅದಕ್ಕೆ ಜಸ್ಟಿಫಿಕೇಷನ್ ಇಲ್ಲ. ನಾವು ಗ್ರಾಮಾಂತರ ಪ್ರದೇಶದಲ್ಲಿ ಇರುವಂತಹ ಜನರಿಗೆ ಏಕೆ ವೈಟೇಜ್ ಕೊಡಬೇಕೆಂದು ನಾವು ಜಸ್ಟಿಫೈ ಮಾಡಲಿಲ್ಲ. ಯಾರು ಈ xxx ಅವರಿಗೆ ಅರ್ಥ ಆಗುವುದಿಲ್ಲವೇ? ಗ್ರಾಮಾಂತರ ಪ್ರದೇಶದಲ್ಲಿ ಶಾಲೆಯ ಮಕ್ಕಳ ವ್ಯವಸ್ಥೆ ಏನಿದೆ? ಪಟ್ಟಣ ಪ್ರದೇಶದ ಮಕ್ಕಳ ಶಾಲೆಯ ವ್ಯವಸ್ಥೆ ಏನಿದೆ ಎಂದು. ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಮಕ್ಕಳು ಪಟ್ಟಣದ ಪ್ರದೇಶದಲ್ಲಿ ಇರತಕ್ಕಂಥ ಮಕ್ಕಳ ಜೊತೆ ಅವರು ಹೋರಾಡುವುದಕ್ಕೆ ಸಾಧ್ಯವಿದೆಯೇ? ಏಕೆ ಇಂತಹ xxx ಬರೆಯುತ್ತಿದ್ದಾರೆ ಎಂದರೆ ಯಾರೂ ಈ ಗ್ರಾಮಾಂತರ ಪ್ರದೇಶದ

---

xxx ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಜನರ ಬಗ್ಗೆ ಅನುಕಂಪ ಇಲ್ಲ, ಹೃದಯ ಇಲ್ಲ, ಚಿಂತನೆ ಇಲ್ಲ. XXX ಈ XXX ಬರುತ್ತಿವೆ. ನಾವೇನಾದರೂ ಮಾತನಾಡಿದರೆ ಕಂಟೆಪ್ಟ್ ಆಗುತ್ತದೆ ಒಂದಲ್ಲ ಒಂದು ದಿನ ಅದು ಬಂದಾಗ ನನ್ನ ತಿಳಿವಳಿಕೆಯ ಬಗ್ಗೆ ಗಮನ ಹರಿಸಿರಿ. XXX ಹೀಗೆ ಬರೆಯುವುದರಿಂದ ಕ್ರಾಂತಿ ಈ ದೇಶದಲ್ಲಿ ಬಂದರೂ ಆಶ್ಚರ್ಯಪಡಬಾರದು, ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಆ ಪಕ್ಷ, ಈ ಪಕ್ಷ ಎಂದು ಇಲ್ಲ. ಎಲ್ಲರೂ ನಾವು ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥ ಜನರಿದ್ದೇವೆ. ನಾವು ಒಕ್ಕೊರಲಿನಿಂದ ಇದು ಆಗಬೇಕೆಂದು ಹೇಳುತ್ತೇವೆ. ಆದರೆ ಕಾನೂನಿನ ತೊಡಕುಗಳು ಆಗುತ್ತವೆ. ಅದನ್ನು ಯಾರು ತರುತ್ತಾರೆ ಎಂದರೆ ಯಾರಿಗೆ ಗ್ರಾಮೀಣ ಪ್ರದೇಶದ ಜನರ ಬಗ್ಗೆ ಹಿತಚಿಂತನೆ ಇಲ್ಲ, ಅವರ ಬಗ್ಗೆ ಅನುಕಂಪ ಇಲ್ಲ, ಯಾರು ಏರ್‌ಕಂಡೀಷನ್‌ನಲ್ಲಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಾರೆ ಅವರೆಲ್ಲಾ ಹುಡುಕಿ ಕಾನೂನಿಗೆ ಅಡೆತಡೆ ಬರುವ ರೀತಿಯಲ್ಲಿ ನೋಡುತ್ತಾರೆ. ಆದುದರಿಂದ ಯಾವುದೇ ಪ್ರಸಂಗದಲ್ಲೂ 25 ಪರ್ಸೆಂಟ್ ಇರುವುದನ್ನು ತಾವು 50 ಪರ್ಸೆಂಟ್‌ಗಿಂತ ಕಡಿಮೆ ನೀವು ರಿಸರ್ವೇಶನ್ ಇಟ್ಟರೆ ಗ್ರಾಮಾಂತರ ಪ್ರದೇಶದವರಿಗೆ ಅನ್ಯಾಯವಾಗುತ್ತದೆ ಎನ್ನುವಂತಹ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಾ, 50 ಪರ್ಸೆಂಟ್‌ಗಿಂತ ಕಡಿಮೆಯಾಗಬಾರದು ಎನ್ನುವುದು ನನ್ನ ವೈಯಕ್ತಿಕ ವಿಚಾರವನ್ನು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಹಿಂದೆ ಹೋಗುವುದಿಲ್ಲವೆಂದು ಹೇಳಿ ತಾವೇ ಸಿ ಅಂಡ್ ಡಿ ಗೆ ಇದ್ದದ್ದನ್ನು (ಎ) ಮತ್ತು (ಬಿ) ಗೂ ಎಕ್ಸ್‌ಟೆಂಡ್ ಮಾಡಿಸಿದಿರು. ಆಗ ಇದೇ ತರಹ ಬಿಲ್ ಬೀಳಬಾರದು ಎಂದು ವಾದಮಾಡಿದ್ದಿರಿ. ನನ್ನ ವಿರೋಧವೇನೂ ಇಲ್ಲ. ಬೇಕಾದರೆ ಈಗ (ಎ) ಅಂಡ್ (ಬಿ) ಗೂ ವಿಸ್ತರಿಸಿ.

ಶ್ರೀ ಎಸ್.ಎಸ್. ಪಾಟೀಲ್ :— ಹಳ್ಳಿ ಜನರಿಗೆ ವಿಸ್ತರಿಸಿ ಕೊಡಿ. ಇದರಲ್ಲಿ ಏನು ತಪ್ಪಾಗುತ್ತದೆ? ರಿಸರ್ವೇಷನ್ ಎಂದರೆ ರಿಸರ್ವೇಷನ್. ಇದು ಕೋರ್ಟಿಗೆ ಏನೂ ಹೋಗುವುದಿಲ್ಲ. 25 ಪರ್ಸೆಂಟ್ ಕೊಟ್ಟರೂ ಅಷ್ಟೆ, 75 ಪರ್ಸೆಂಟ್ ಕೊಟ್ಟರೂ ಅಷ್ಟೆಯ ಸುಮ್ಮನೆ ವಾದಕ್ಕೆ ಏಕೆ ಹೋಗಬೇಕು? ತಾವು ಒಪ್ಪಿಕೊಂಡರೆ 'ಹೂಂ' ಎನ್ನಬೇಕಾಗುತ್ತದೆ. ಅದಕ್ಕೆ ಚರ್ಚೆಯೇ ಬೇಡ. ಇದು ಸದನಕ್ಕೂ ಇದೆ. ತಮಗೂ ಇದೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಅದಕ್ಕೆ ಯಾರೂ ವಿರೋಧವಿಲ್ಲ. 25 ಪರ್ಸೆಂಟ್ ಕೊಟ್ಟರೂ ಕೋರ್ಟಿಗೆ ಹೋಗಬೇಕು ಎಂದರೆ ಹೋಗುತ್ತಾರೆ.70 ಪರ್ಸೆಂಟ್ ಕೊಟ್ಟರೂ ಹೋಗುತ್ತಾರೆ. ಸುಮ್ಮನೆ ಏಕೆ ಹಠ ಹಿಡಿಯುತ್ತೀರಿ? ದಯವಿಟ್ಟು ತಾವು ಹೂಂ ಅನ್ನಿ. ಅದು ಕೋರ್ಟಿಗೆ ಹೋದರೆ ನೋಡೋಣ, ಅದು ಹೋಗುವುದಿಲ್ಲ. ಏಕೆ ಹೋಗುತ್ತದೆ? ಕೋರ್ಟಿಗೆ ಹೋಗಬೇಕಾದರೆ 25 ಪರ್ಸೆಂಟ್ ಇದ್ದರೂ ಹೋಗುತ್ತದೆ.

XXX ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಇದರ ಬಗ್ಗೆ ನಿಮಗಿಂತ ಕಡಿಮೆ ಕಳಕಳಿ ನಮಗೆ ಏನೂ ಇಲ್ಲ. ಸ್ವಲ್ಪ ಹೆಚ್ಚು ಇರಬಹುದು. ಮಾನ್ಯ ಹನುಮೇಗೌಡರಾಗಲಿ, ಮಾನ್ಯ ಕೋಳಿವಾಡ್‌ರವರರಾಗಲಿ, ಮಾನ್ಯ ರಾಮಯ್ಯನವರಾಗಲಿ ತಾವೆಲ್ಲಾ ಹೇಳಿದಿರಿ. ಆದರೆ ನನ್ನ ಪ್ರಶ್ನೆ ಇಷ್ಟೆ. ನಾವು ಯಾವ ಶಾಸನವನ್ನು ಮಾಡಿದ್ದೇವೆ ಅದು ಜನರಿಗೆ ತಲುಪಬೇಕು; ಅನೂರ್ಜಿತವಾಗಬಾರದು. ಅದಕ್ಕೆ ಏನೂ ಪ್ರೊಟೆಕ್ಷನ್ ತೆಗೆದುಕೊಳ್ಳಬೇಕೆಂದು ನಾನು ನಮ್ಮ ಸಂವಿಧಾನ ತಜ್ಞರು ಅಥವಾ ಹಿರಿಯ ವಕೀಲರನ್ನು ಅಥವಾ ಸಂಸದೀಯ ಕಾರ್ಯದರ್ಶಿಯವರನ್ನು, ಎಲ್ಲರನ್ನೂ ಕನ್‌ಸಲ್ಟ್ ಮಾಡಿ ನಮಗೆ ಇದು ಎಷ್ಟರ ಮಟ್ಟಿಗೆ ಸಹಾಯವಾಗಬಹುದು, ಯಾವ ರೀತಿಯಿಂದ ಇದು ಬಾಧಕ ಬರುವುದಿಲ್ಲವೆಂದು ಅಭಿಪ್ರಾಯಕ್ಕೆ ಬಂದಮೇಲೆ ಮಾಡಿದ್ದೇನೆ. ನೀವು ಮೀಸಲಾತಿ 50 ಪರ್ಸೆಂಟ್ ಮಾಡೋಣ, 75 ಪರ್ಸೆಂಟ್ ಮಾಡೋಣ ಎಂದರೆ ಅದಕ್ಕೆ ನನ್ನ ವಿರೋಧವಿಲ್ಲ. ಆದರೆ ಪರಿಸ್ಥಿತಿಯನ್ನು ನಾವು ಅರ್ಥಮಾಡಿಕೊಂಡರೆ ಸೀರೀಸ್ ಆಫ್ ಜಡ್ಜ್‌ಮೆಂಟ್ ಏನು ಎನ್ನುವುದನ್ನು ನೋಡಬೇಕಾಗುತ್ತದೆ. ನಾನು ವಿರೋಧ ಪಕ್ಷದ ನಾಯಕನಾಗಿ ಬಹಳ ಸಂತೋಷದಿಂದ ಒಪ್ಪಿಕೊಂಡಿದ್ದೆ. ಏನು ಹೇಳಿದರು.

"80% of the population of UP in rural areas cannot be said to be the homogeneous class itself. They are not same kind. Their occupation is different, their standards are different; their lives are diffirent. Population cannot a class itself. Rural element does not make it a class."

Further:

``The State Government had made provision for giving 10% rural weightage to the candidates having passed SSLC from rural areas. Their lordship have held that giving weightage to rural candidates would virtually convert merit into de-merit and de-merit into merit and per se violation of Article 14 of the Constitution, as being impermissible classification."

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಆಗಲೇ ಮಾನ್ಯ ಕೋಳಿವಾಡ್‌ರವರು ಹೇಳಿದರು; ಏನೆಂದರೆ xxx ಜಡ್ಜ್‌ಮೆಂಟ್ ಬರೆಯತಕ್ಕಂಥವರು ಯಾರು ಎಂದು ಬಹಳ ಹಿಂದೆಯೇ ಶ್ರೀ ನಂಬೂದರಿಪಾದ್‌ರವರು xxx ಬರೆಯುವವರ ಬಗ್ಗೆ ಹೇಳಿದ್ದಾರೆ. ಅವರಿಗೆ 50 ರೂಪಾಯಿಗಳ ದಂಡವನ್ನೂ ಕೂಡ ಸುಪ್ರೀಂ ಕೋರ್ಟ್‌ನಲ್ಲಿ ಬಿದ್ದಿದೆ. ಆದೆ ಅವತ್ತು ಆ ನಂಬೂದರಿಪಾದ್ ಅವರು ಏನು ಹೇಳಿದ್ದಾರೆ ಅದು ಇವತ್ತಿಗೂ ಸಹ ಸತ್ಯವಿದೆ.

---

xxx ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

Sri. D.B.Chandra Gowda :— Do you mean to say, Shall I withdraw the Bill?

Sri C. Byre Gowda :— We are not for that.

ಶ್ರೀ ಕೋಳಿವಾಡ್ :— ಮಾನ್ಯ ಬೈರೇಗೌಡರು ಏನು ಹೇಳಿದರಲ್ಲ ಈ xx ಬರೆಯುವವರ ಬಗ್ಗೆ, ಇದು ಬೇಡ ಎಂದಾಗ ಈ ರೀತಿ ಬರೆಯುತ್ತಾರೆ. ನನ್ನದು ಒಂದು ಪರ್ಟಿಕ್ಯುಲರ್ ಕೇಸ್ ಇದೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾರೂ ರಿಟ್-ಪಿಟಿಷನರ್ ಇದ್ದಾರೆ ಅವರು ಅದನ್ನು ಆರ್ಗ್ಯೂಮೆಂಟ್ ಮಾಡುವುದಕ್ಕೆ ಹೋಗಲಿಲ್ಲ. ಆ ಪಾಯಿಂಟ್ ರೈಸ್ ಮಾಡಲಿಲ್ಲ. ರೆಸ್ಪಾಂಡೆಂಟ್ ಯಾರೂ ಅದರ ಬಗ್ಗೆ ತಕರಾರು ಮಾಡಲಿಲ್ಲ. ಸ್ವತಃ ಹುಡುಕಿ ಅದನ್ನು ಬರೆದು ಆ xxx ಹೇಳುವಂತಹ ಉದಾಹರಣೆಗಳು ನಮ್ಮ xx ಕಂಡು ಬರುತ್ತಿದೆ. ಅದಕ್ಕೆ ನಾವು ಬಹಳ ವೈಟೇಜ್ ಕೊಡುವುದು ಅಷ್ಟು ಸರಿ ಕಾಣುವುದಿಲ್ಲ.

ಅಧ್ಯಕ್ಷರು :— ಜಡ್ಜಸ್ ಆ ರೀತಿ ಬರೆಯುತ್ತಾರೆ, ಈ ರೀತಿ ಬರೆಯುತ್ತಾರೆ ಎಂದು ಮಾತನಾಡಬೇಡಿ. Please expunge that.

ಶ್ರೀ ಎಸ್.ಎಸ್. ಪಾಟೀಲ್ :— ಈಗ ತಾವೇನು ಆ xxx ಬಗ್ಗೆ ಹೇಳಿದಿರಿ ಅದರಿಂದ ಯಾವುದೇ ಲಾಭವಾಗುವುದಿಲ್ಲವೆಂದು ನನ್ನ ಅಭಿಪ್ರಾಯ. ಇವತ್ತು ಆ xx ಇರುವುದು 25ಕ್ಕೂ ಲಾಭವಾಗುತ್ತದಾ? 25 ಪರ್ಸೆಂಟ್‌ಗೂ ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ :— ಮೊದಲ ತತ್ವ ಒಪ್ಪಿಕೊಂಡರೆ 25 ಪರ್ಸೆಂಟ್ ಆದರೆ ಏನು? 50 ಪರ್ಸೆಂಟ್ ಆದರೆ ಏನು?

ಶ್ರೀ ಕೆ.ಹೆಚ್. ಹನುಮೇಗೌಡ :— ಇವತ್ತು ನಾವು ಅಮೆಂಡ್‌ಮೆಂಟ್ ಪಾಸ್ ಮಾಡುತ್ತೇವೆ. ಅದನ್ನೆಲ್ಲಾ ಟೆಸ್ಟ್‌ನಲ್ಲಿ ಉಳಿದುಕೊಂಡರೆ ಅದು ಬಹಳ ಒಳ್ಳೆಯದು. ಆ ದೃಷ್ಟಿಯಿಂದ ನಮಗೇನೋ ಒಂದು ಆಸೆ ಇದೆ. ಆದರೆ ಒಂದೇ ಸಲ ಅಲ್ಲಿಗೆ ಹೋಗುವುದ ಬದಲು ಸ್ಟೆಪ್ ಬೈ ಸ್ಟೆಪ್ ಮಾಡಿಕೊಂಡು ಏನೂ ಇಲ್ಲದೆ ಇರುವ ಆಪ್ಪೊತ್ತಿಗೆ ಬಂತಲ್ಲ. ಈಗ ನಿಮ್ಮ ವಿವೇಚನೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಹಳ್ಳಿ ಮಕ್ಕಳ ಹಿತದೃಷ್ಟಿಯಿಂದ ಏನು ಮಾಡಬೇಕು? ಇದು ಇನ್ನು ಬೇರೆ ಟೆಸ್ಟ್‌ಗಳಲ್ಲಿ ಕೂಡ ಊರ್ಜಿತವಾಗಬೇಕು. ಆದಕ್ಕೆ ನೀವು ಎಕ್ಸ್‌ಪರ್ಟ್‌ಗಳವರ ಹತ್ತಿರ ಕನ್‌ಸಲ್ಟ್ ಮಾಡಿ ಒಂದು ತೀರ್ಮಾನಕ್ಕೆ ಬರುವುದು ಉತ್ತಮ. ಏಕೆಂದರೆ ನಾವು ಹೇಳುವುದೆಲ್ಲಾ ಆರ್ಬಿಟರರಿ

---

xxx ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಆಗಬಾರದು. ಏಕೆಂದರೆ ನಾವು ಒಪ್ಪಿಕೊಂಡು ಬಿಟ್ಟಿದ್ದೇವೆ. ಅದು ಸರಿಯೋ ತಪ್ಪೋ ಒಂದು ಕಾಲದಲ್ಲಿ ಆಗಿಬಿಟ್ಟಿದೆಯ ಆದುದರಿಂದ ಅದರ ಇತಿಮಿತಿಯೊಳಗೆ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅನುಕೂಲವಾಗಬೇಕು; ನೋಡಿದವರಿಗೆ ಅದು ಕಾನೂನು ಉಲ್ಲಂಘನೆಯಾಗುವುದಿಲ್ಲವೆನ್ನುವ ತರಹ ನೋಡಿ ಬಿಟ್ಟ ಎಕ್ಸ್‌ಪರ್ಟ್‌ಗಳನ್ನು ಕನ್‌ಸಲ್ಟ್ ಮಾಡಿ ಮಾಡಿದರೆ ಒಳ್ಳೆಯದು.

ಶ್ರೀ ಡಿ.ಬಿ. ಚಂದ್ರೇಗೌಡ :— ಮೊದಲೇ ತಾವು ಸಲಹೆ ಕೊಟ್ಟ ಹಾಗೆ ಹತ್ತು ಪರ್ಸೆಂಟ್ ಏಕೆ ಇಪ್ಪತ್ತೈದು ಪರ್ಸೆಂಟ್ ಮಾಡಿ ನೋಡೋಣ; ಆ ಬಗ್ಗೆ ಪ್ರಯೋಗ ಮಾಡೋಣ. ಯಾವುದೇ ಬಾಧಕ ಇಲ್ಲದೆ ಅದು ನಡೆದರೆ ಮಂದೆ ಅದನ್ನು ಆಲೋಚನೆ ಮಾಡೋಣ. ಒಂದು ವೇಳೆ ಕೋರ್ಟಿನಲ್ಲಿವರು ಇಂಟರ್‌ಫಿಯರ್ ಮಾಡಿದರೆ, ಅದು ಅಸಿಂಧು ಎಂದು ಹೇಳಿದರೆ ಆಗ ಆಲೋಚನೆ ಮಾಡೋಣ. ಅಕಸ್ಮಾತ್ ಹೇಳಲಿಲ್ಲವೆಂದರೆ the we can think of extending it, ಇದರಲ್ಲಿರುವ ಒಂದು ಲಾಜಿಕ್ ಏನೆಂದರೆ..

(ಗೊಂದಲ)

ಅಧ್ಯಕ್ಷರು :— ಎಂಟತ್ತು ಜನ ಒಂದೇ ಸಲ ಎದ್ದು ನಿಂತರೆ ಹೇಗೆ? ಯಾರಾದರೂ ಒಬ್ಬರು ಮಾತನಾಡಿ ಮಾನ್ಯ ಚಂದ್ರೇಗೌಡರೆ ತಾವು ಎಕ್ಸ್‌ಪರ್ಟ್ ಕನ್‌ಸಲ್ಟ್ ಮಾಡಿ ಇವತ್ತು ತಾವೇನು ತಂದಿದ್ದೀರಿ ಅದನ್ನು ಎಕ್ಸ್‌ಪೆರಿಮೆಂಟ್ ಆಗಿ ಮಾಡಿ ನೋಡೋಣ. ಈಗ ಅದು 25 ಪರ್ಸೆಂಟ್ ಇರಲಿ ಸಧ್ಯಕ್ಕೆ. ನಂತರ ಜಾಸ್ತಿ ಮಾಡಿಕೊಳ್ಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ :— ನಾನು ಹೇಳಿದ್ದು ಒಟ್ಟು ಹತ್ತು ಪರ್ಸೆಂಟ್ ಮೀಸಲಾತಿ ಎಂದರೆ ಏನು? ಒಂದು ಮತ್ತು 10ನೆಯದು, 20ನೆಯದು, 30ನೆಯದು 40ನೆಯದು ಮತ್ತು 50ವರೆಗೂ ಅದು ಹೋಗುತ್ತದೆ. ಈಗ ನಾವು ಏನು ಮಾಡಿದ್ದೇವೆ ಅದು ಸರಿಯೋ ತಪ್ಪೋ ನಾವು ಹೇಳಲು ಹೋಗಲಿಲ್ಲ. ಇದನ್ನು ಯಾರೂ ಪ್ರಶ್ನೆ ಮಾಡಿಲ್ಲ. ಹೆಣ್ಣುಮಕ್ಕಳಿಗೆ 40 ಪರ್‌ಸೆಂಟ್ ಮೀಸಲು ಎಂದು ಹೇಳಿದ್ದೇವೆ. ಎಕ್ಸ್‌ಸರ್ವೀಸ್ ಮನ್‌ಗೆ ಹತ್ತು ಪರ್‌ಸೆಂಟ್ ಎಂದು ಹೇಳಿದ್ದಾರೆ. ಇಲ್ಲಿಗೆ 40 ಪರ್‌ಸೆಂಟ್ ಆಯಿತು. ಅಂಗವಿಕಲರಿಗೆ ಐದು ಪರ್‌ಸೆಂಟ್ ಎಂದು ಹೇಳಿದ್ದಾರೆ 45 ಪರ್‌ಸೆಂಟ್ ಆಯಿತು. ಪ್ರಾಜೆಕ್ಟ್ ಡಿಸ್‌ಪ್ಲೇಸ್ಡ್ ಪರ್‌ಸನ್ಸ್ ಯಾರಿದ್ದಾರೆ ಇರಿಗೇಷನ್ ಪ್ರಾಜೆಕ್ಟ್ ಕಟ್ಟುತ್ತೀವೋ, ಪವರ್ ಪ್ರಾಜೆಕ್ಟ್ ಕಟ್ಟುತ್ತೀವೋ ಅವರಿಗೆ ಐದು ಪರ್‌ಸೆಂಟ್ ಎಂದು ಮಾಡಿ ಒಟ್ಟು 50 ಪರ್‌ಸೆಂಟ್ ಇಟ್ಟಿದ್ದು, ಈಗ ತಾವು 25 ಪರ್‌ಸೆಂಟ್ ಸೇರಿಸಿದರೆ 75 ಪರ್‌ಸೆಂಟ್ ಆಗುತ್ತದೆ. ಆಗ ಏನಾಗುತ್ತದೆ 75 ಪರ್‌ಸೆಂಟ್ ಹೋದರೆ ಇನ್ನು 25 ಪರ್ಸೆಂಟ್ ಓಪನ್ ಫೀಲ್ಡ್‌ನಲ್ಲಿ ಇರುತ್ತದೆ. ಅದಕ್ಕೆ ನಮ್ಮ ಹುಡುಗರು ಈಗಾಗಲೇ ಬಂದಿದ್ದಾರೆ. ಈ 25 ಪರ್‌ಸೆಂಟ್‌ನಲ್ಲಿ ಒಬ್ಬನಾದರೂ ಬರುತ್ತಾನೆ. ಅವರಿಗೆ ಅಲ್ಲಿ ಬೆನಿಫಿಟ್ ಸಿಗುತ್ತದೆ. ನಾವು ಹಿಂದೆ ಆದಂತಹ ಗೊಂದಲಗಳನೆಲ್ಲಾ ಗಮನದಲ್ಲಿಟ್ಟುಕೊಂಡು ಮಾಡಬೇಕು ಏನು ಗೊಂದಲವಾಯಿತು

ಎಂದರೆ 20 ಸಾವಿರ ಜನಸಂಖ್ಯೆ ಎಂದು ಫಿಕ್ಸ್ ಮಾಡಿದರು. ಅದರದು ಒಂದು ವಿಚಿತ್ರ ಲೋಕ ಆಯಿತು. ಇದಾದ ಮೇಲೆ 50 ಸಾವಿರ ಜನಸಂಖ್ಯೆ ಎಂದು ಆಯಿತು. ಅದರ ಲಾಭವೆಲ್ಲಾ ದೊಡ್ಡ ದೊಡ್ಡ ಪಟ್ಟಣಕ್ಕೆ ಹೋಯಿತು. ಪುರಸಭೆಗಳ ವ್ಯಾಪ್ತಿಯಲ್ಲೆಲ್ಲಾ ಹೋಯಿತು. ಅದಕ್ಕೆ ನಾನು ಏನು ಕಾನ್ಸೆಪ್ಟ್ ಅನ್ನು ಯೋಚನೆ ಮಾಡಿದೆ ಎಂದರೆ ಈಗ ಹೇಗೋ ಮಾಡಿದ್ದೇವೆ, ಗ್ರಾಮಾಂತರ ಪ್ರದೇಶ ಎಂದರೆ ಏನು? ಚುನಾವಣೆ ಮಾಡಿದ್ದೇವೆ, ಬೌಂಡರಿ ಫಿಕ್ಸ್ ಮಾಡಿಕೊಳ್ಳಿ, ಜಿಯಾಗ್ರಫಿಕಲ್ contiguity ಬರುತ್ತದೆ. ಆದುದರಿಂದ ವಿಲೇಜ್ ಪಂಚಾಯತ್ ಒಂದು ಯುನಿಟ್ ಎಂದು ಮಾಡಿದ್ದೇವೆ; ಎಕ್ಸ್‌ಕ್ಲೂಡಿಂಗ್ ಕಾರ್ಪೊರೇಷನ್, ಎಕ್ಸ್‌ಕ್ಲೂಡಿಂಗ್ ಮುನ್ಸಿಪಲ್ ವಿಸ್ತೃತ ಮಂಡಲಗಳು.

ಶ್ರೀ ವಿ. ಪಾಪಣ್ಣ :— ಇವರು ಪುರಸಭೆಯನ್ನು ಹೊರತುಪಡಿಸಿದ್ದಾರೆ, ಪಟ್ಟಣ ಪಂಚಾಯತ್ ಅನ್ನು ಹೊರತುಪಡಿಸಿದ್ದಾರೆ. ಯಾವುದೋ ಒಂದು ಗ್ರಾಮಾಂತರ ಪ್ರದೇಶದಲ್ಲಿ ಎಸ್‌ಎಸ್‌ಎಲ್‌ಸಿ ವರೆಗೆ ಇದೆಯೇ? ಒಂದನೇ ತರಗತಿಯಿಂದ ಏಳನೆ ತರಗತಿಯವರೆಗೂ ಒಂದೇ ಶಾಲೆ ಕಟ್ಟಡ ಒಬ್ಬರೇ ಮಾಸ್ಟರು; ಅವರು ಬರುತ್ತಾರೆ. ಪುರಸಭೆ ತೆಗೆದು ಹಾಕಿದ್ದಾರೆ, ಪಟ್ಟಣ ಪಂಚಾಯತ್ ತೆಗೆದು ಹಾಕಿದ್ದಾರೆ. ಯಾವ ಹಳ್ಳಿಯಲ್ಲಿ ಎಸ್‌ಎಸ್‌ಎಲ್‌ಸಿ ಇದೆ? ಯಾವ ಗ್ರಾಮೀಣ ಪ್ರದೇಶದಲ್ಲಿ ಎಸ್‌ಎಸ್‌ಎಲ್‌ಸಿಯವರೆಗೂ ಶಾಲೆ ಬರುತ್ತದೆ? ಪುರಸಭೆ ಪಟ್ಟಣ ಪಂಚಾಯತ್ ತೆಗೆದು ಹಾಕಿದಿರಿ.

ಶ್ರೀ ಡಿ.ಬಿ. ಚಂದ್ರೇಗೌಡ :— ಈ ಹಿಂದೆ ಆದ ಅನುಭವಗಳನ್ನು ಇಟ್ಟು ನಂತರ ಏನು ಮಾಡಿದರು? ಸೆನ್ಸಸ್‌ಗೆ ಯಾವ ಗ್ರಾಮ ಎಂದು ಇದೆಯೋ, ಆ ಸೆನ್ಸಸ್ ಗ್ರಾಮಕ್ಕೆ ಮೀಸಲು ಮಾಡಿ ಎಂದು ಹೇಳಿದರು. ಆ ಸೆನ್ಸಸ್ ಗ್ರಾಮಕ್ಕೆ ಎಷ್ಟು ಪಾಪ್ಯುಲೇಷನ್ 4,999. ಅದರಲ್ಲಿ ಎಷ್ಟು ಹಳ್ಳಿ ಬರಬಹುದು? Please try to understand the problem. Let us understand ourselves. Let us get ourselves convinced. ಜನಗಣತಿಯ ಪ್ರಕಾರ ಜನ ಸಂಖ್ಯೆಯ 5 ಸಾವಿರ ಇರಬೇಕೆನ್ನುವುದೆಲ್ಲಾ ಬೇಡ, ಐದು ಸಾವಿರದ ಒಂದು ಇದ್ದರೆ ಗ್ರಾಮ ಪಂಚಾಯಿತಿ ಒಂದು ಘೋಷಿತ ಪ್ರದೇಶ, ತಪ್ಪಾಗುವುದಿಲ್ಲವೆನ್ನುವ ಕಾರಣಕ್ಕೋಸ್ಕರ ಇದನ್ನು ತಂದಿದ್ದೇವೆ. ತಾವು ಹೇಳಿದಂತೆ ಆ 7ನೇ ತರಗತಿ ಹಾಗೂ 10ನೇ ತರಗತಿಗೆ ಯಾರು ಬರುತ್ತಾರೆನ್ನುವುದನ್ನು ಗಮನದಲ್ಲಿಟ್ಟುಕೊಂಡೇ ಈ ಶೇಕಡ 25 ಮೀಸಲಾತಿ ಕೊಡುವ ಪ್ರಯತ್ನ ಮಾಡಿರುವುದು, ಇದು ಪ್ರಯತ್ನ ಕೂಡ ಪರ್ಫೆಕ್ಷನ್ ಎಂದು ಹೇಳುವುದಿಲ್ಲ, ಮುಂದೆ ಇದನ್ನು ಸರಿಪಡಿಸಿಕೊಳ್ಳುವುದಕ್ಕೆ ಕೂಡ ಅವಕಾಶವಿದೆ.

ಶ್ರೀ ಎಸ್.ಎಸ್. ಪಾಟೀಲ್ :— ಒಂದು ಉದಾಹರಣೆಗೆ ಹೇಳುತ್ತೇನೆ, ನಮ್ಮಲ್ಲಿ ಶಿರಹಟ್ಟಿ ಮೊದಲು ಗ್ರಾಮ ಪಂಚಾಯಿತಿಯಾಗಿತ್ತು, ಅದನ್ನು ಟೌನ್ ಪಂಚಾಯಿತಿ ಮಾಡಬೇಕೆಂದು ಹೇಳಿದಾಗ ಟೌನ ಪಂಚಾಯಿತಿ ಮಾಡಿಬಿಟ್ಟಿದ್ದಾರೆ. ತಾಲ್ಲೂಕು ಕೇಂದ್ರಗಳನ್ನೆಲ್ಲಾ

ಟೌನ್ ಪಂಚಾಯಿತಿ ಎಂದು ಟೌನ್ ಪಂಚಾಯಿತಿ ವ್ಯಾಪ್ತಿಗೆ ತಂದು ಬಿಟ್ಟಿದ್ದೀರಿ, ಮೊದಲಿಗೆ ಅವು ಗ್ರಾಮ ಪಂಚಾಯಿತಿಗಳು, ಅಲ್ಲಿ ಜನಸಂಖ್ಯೆ ಏನೂ ಹೆಚ್ಚಾಗಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಅದಕ್ಕೆ ನಾನು ಫುಲ್ ಪ್ರೂಫ್ ಇದಲ್ಲವೆಂದು ಹೇಳಿದೆ, ನಾವೇ ಒಪ್ಪಿಕೊಂಡಿರುವ ವ್ಯವಸ್ಥೆಯನ್ನು ಇದರಲ್ಲಿ ತರುವುದಕ್ಕೆ ಪ್ರಯತ್ನ ಮಾಡಲಾಗಿದೆ. ಅದನ್ನು ಮೀರಿ ಹೋದರೆ ಮತ್ತೆ ನಾವು ಎಲ್ಲಿ ಅವರ ಕೈಗೆ ಸಿಕ್ಕಿಹಾಕಿಕೊಳ್ಳುತ್ತೇವೋ ಅದಕ್ಕೆ ಬೇಡವೆಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :— ಮೊದಲು ಶೇಕಡ 10 ಇತ್ತು, ನಮ್ಮೆಲ್ಲರ ಸಲಹೆ ಮೇರೆಗೆ 25 ಎಂದು ಮಾಡಲು ಹೊರಟ್ಟಿದ್ದೀರಿ, ಎಸ್.ಎಸ್. ಪಾಟೀಲ್‌ರವರು ಶೇಕಡ 70 ಮಾಡಿ ಎಂದು ಹೇಳುತ್ತಾರೆ. ನನ್ನ ಅಭಿಪ್ರಾಯವೇನೆಂದರೆ, ಇವತ್ತು ಶೇಕಡ 25ರಷ್ಟು ಮಾಡುತ್ತಿರುವುದನ್ನು ಪ್ರಾಯೋಗಿಕವಾಗಿ ಒಪ್ಪಿಕೊಳ್ಳೋಣ, ನಾಳೆ ಇದೆಲ್ಲೂ ಕೂಡ ಚಾಲೆಂಜ್ ಆಗದಿದ್ದರೆ, ಮುಂದೆ ಹೆಚ್ಚು ಮಾಡುವ ವಿಚಾರ ಮಾಡಬಹುದು.

ಅಧ್ಯಕ್ಷರು :— ಮಾನ್ಯ ಬೈರೇಗೌಡರೆ, ಸರ್ಕಾರದವರೇ ಈಗ ಒಂದು ತಿದ್ದುಪಡಿ ಮಾಡಿ ಶೇಕಡ 25ಕ್ಕೆ ಹೆಚ್ಚು ಮಾಡಿ ಇದನ್ನು ತಂದಿರುವಾಗ, ಸ್ವಲ್ಪ ಕ್ಲಾರಿಫಿಕೇಷನ್‌ಗೆ ಚರ್ಚೆ ನಡೆದು ಆರ್‌ಗ್ಯುಮೆಂಟ್ಸ್ ಕೌಂಟರ್ ಆರ್‌ಗ್ಯುಮೆಂಟ್ಸ್ ಎಲ್ಲಾ ನಡೆದಿದೆ, ಇನ್ನು ಮಾತನಾಡುವುದೇನಿದೆ? ಸರ್ಕಾರದವರು ತಿದ್ದುಪಡಿ ತಂದಿರುವುದನ್ನು ಒಪ್ಪಿಕೊಳ್ಳಿ.

ಶ್ರೀ ಸಿ. ಬೈರೇಗೌಡ :— ಇಲ್ಲಿ ನಾವು ಮಾತನಾಡದಿದ್ದರೆ ಹೇಗೆ? ಇದು ನಾವೆಲ್ಲರೂ ಮಾತನಾಡುವ ಮನೆ; ಹೌದು, ಇಲ್ಲವೆಂದು ಹೇಳುವ ಮನೆಯಷ್ಟೇ ಅಲ್ಲ.

ಅಧ್ಯಕ್ಷರು :— ತಾವು ಸಂಕ್ಷಿಪ್ತವಾಗಿ ಮಾತನಾಡಿ ಅಷ್ಟೆ. ಏಕೆಂದರೆ ನಮ್ಮ ಮುಂದೆ ಇನ್ನೂ ಮೂರು ಬಿಲ್‌ಗಳಿವೆ.

ಶ್ರೀ ಕೆ.ಬಿ. ಕೋಳಿವಾಡ್ :— ಮಾನ್ಯ ಅಧ್ಯಕ್ಷರೆ, ನಾನು ಎರಡು ಸಲಹೆಗಳನ್ನು ಸರ್ಕಾರಕ್ಕೆ ಕೊಡಲಿಚ್ಛಿಸುತ್ತೇನೆ, ಶೆಡ್ಯೂಲ್ 9ರಲ್ಲಿ ಇದನ್ನು ಸೇರಿಸಬೇಕೆಂದು ಸರ್ವ ಸಮ್ಮತವಾದ ಒಂದು ರೆಸಲ್ಯೂಷನ್ ಅನ್ನು ಈ ಸದನ ಮಾಡುವುದು, ಮತ್ತು ಮೀಸಲಾತಿಯನ್ನು ಶೇಕಡ 25ರಷ್ಟು ಹೆಚ್ಚು ಮಾಡುವುದಕ್ಕೂ ನೀವು ಒಪ್ಪಿಕೊಳ್ಳೋಣ. ಆದರೆ ಗ್ರಾಮ ಮಟ್ಟದಲ್ಲಿ 10 ವರ್ಷ ಓದಬೇಕೆಂದಿದೆಯಲ್ಲ, ಅದನ್ನು 7 ವರ್ಷಕ್ಕೆ ಇಳಿಸಿದರೆ ಬಹಳ ಜನರಿಗೆ ಅನುಕೂಲ ವಾಗುತ್ತದೆನ್ನುವುದು ನನ್ನ ಅಭಿಪ್ರಾಯವಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ :— ಮೊದಲು ಬಿಜಾಪುರದ ಒಂದು ಕಡೆ ಒಂದೇ ಒಂದು ಹೈಸ್ಕೂಲ್ ಇರಲಿಲ್ಲ. ಖಾಸಗಿಯವರ ಒಂದೇ ಒಂದು ಹೈಸ್ಕೂಲ್

ಇತ್ತು, ಅಲ್ಲಿ ಪ್ರವೇಶಾವಕಾಶ ಸಿಗದೆ 22 ಕಿ.ಮಿ. ದೂರ ಬಂದು ಬಿಜಾಪುರದಲ್ಲಿ ಮಕ್ಕಳು ಕಲಿಯಬೇಕಾಯಿತು. ಅವರ ಹಣೆಬರಹಕ್ಕೆ 7ನೇ ತರಗತಿಯವರೆಗೆ ಗ್ರಾಮದಲ್ಲಿ ಕಲಿತು, 10ನೇ ತರಗತಿಯವರೆಗೆ ನಗರಕ್ಕೆ ಬರಬೇಕಾಯಿತು; ಅವರು ನಗರಕ್ಕೆ ಬಂದದ್ದರಿಂದ ಅವರಿಗೆ ಗ್ರಾಮೀಣ ಮೀಸಲಾತಿ ಹೊರಟು ಹೋಯಿತು. ಆದುದರಿಂದ ಮಾನ್ಯ ಸದಸ್ಯರು ಹೇಳಿದಂತೆ ದಯಮಾಡಿ 7ನೇ ತರಗತಿಯವರೆಗೆ ಮಿತಿ ಮಾಡಿದರೆ ಒಳ್ಳೆಯದು.

ಶ್ರೀ ಡಿ.ಬಿ. ಚಂದ್ರೇಗೌಡ :— ನಾನೇ ಆಗ 6 ಮೈಲಿ ನಡೆದುಕೊಂಡು ಹೈಸ್ಕೂಲಿಗೆ ಬರುತ್ತಿದ್ದೆ, ಈಗ ನಮ್ಮ ಊರಿನಲ್ಲೇ ಹೈಸ್ಕೂಲ್ ಇದೆ.

ಶ್ರೀ ಸಿ. ಬೈರೇಗೌಡ :— ಈಗಿರುವ ವ್ಯಾಖ್ಯೆಯೊಳಗೆ ಅಭ್ಯರ್ಥಿಗಳು ಸಿಗದಿದ್ದರೆ ಅಂತಹ ಪರಿಸ್ಥಿತಿಯಲ್ಲಿ ಇದನ್ನು ಯೋಚನೆ ಮಾಡಬಹುದು, ಆಗ ನೋಡೋಣ.

ಅಧ್ಯಕ್ಷರು :— ಮಾನ್ಯ ಚಂದ್ರೇಗೌಡರೆ; ಹೈಸ್ಕೂಲಿಗೆ ನಾನು 8 ಮೈಲಿ ದೂರ ನಡೆದುಕೊಂಡು ಹೋಗಿದ್ದೇನೆ. ಮಾನ್ಯ ಬೈರೇಗೌಡರೆ ತಾವು ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ವರ್ಣಾಶ್ರಮ ಧರ್ಮದ ಮೇಲೆ ನಮ್ಮ ಸಮಾಜ ವಿಭಜನೆಯಾಗಿ ಅದನ್ನೇ ಒಂದು ಆಧಾರವಾಗಿಟ್ಟುಕೊಂಡು ಈ ವರೆಗೆ ಆ ವ್ಯವಸ್ಥೆಯೇ ಮುಂದುವರೆಯುತ್ತಿದೆ. ಮಾನ್ಯ ಕಾನೂನು ಮಂತ್ರಿಗಳು ಉತ್ತರ ಪ್ರದೇಶದಲ್ಲಿ ಈ ರೀತಿಯಾದ ಒಂದು ತೀರ್ಪು ಬಂದಿದೆ ಎಂದು ಅದನ್ನು ಆಗಲೇ ಓದಿದರು. ಆ ರೀತಿಯಾದ ಒಂದು ತೀರ್ಪು ಬರುವುದಕ್ಕೆ ಈ ದೇಶದಲ್ಲಿ ಈ ವ್ಯವಸ್ಥೆಯೇ ಕಾರಣ. ಅದು ಹೇಗೆಂದರೆ, ವಿದ್ಯೆ ಎನ್ನುವುದು ಕೇವಲ ಕೆಲವರ ಸ್ವತ್ತಾಯಿತು, ಬೇರೆಯವರು ಯಾರೂ ಓದುವಂತಿಲ್ಲ, ಬರೆಯುವಂತಿಲ್ಲ, ಸಂಸ್ಕೃತ ಪದ ಅವರ ಬಾಯಲ್ಲಿ ಬಂದರೆ ಅವರ ನಾಲಿಗೆಯನ್ನು ಕತ್ತರಿಸಬೇಕೆನ್ನುವ ನಿಯಮಾವಳಿ ಕೂಡ ಇತ್ತು. ಆದುದರಿಂದ ಆ ಒಂದು ಪರಿಸ್ಥಿತಿ ಇಲ್ಲಿಯವರೆಗ ಮುಂದುವರಿಸಿಕೊಂಡು ಬಂದಿದ್ದರಿಂದಲೇ ಇದಕ್ಕೆ ಎಲ್ಲಾ ಹಂತಗಳಲ್ಲೂ ಕೂಡ ಅಡ್ಡಿ ಆತಂಕಗಳು ಎದುರಾಗಿವೆ. ನ್ಯಾಯಾಲಯವಿರಬಹುದು, ಬೇರೆ ಬೇರೆ ಸಮಸ್ಯೆಗಳಿರಬಹುದು ಅವೆಲ್ಲವೂ ಕೂಡ ಇವತ್ತು ಅನ್ಯಾಯಕ್ಕೆ ಒಳಗಾಗಿರುವವರನ್ನು, ತುಳಿತಕ್ಕೊಳಗಾಗಿರುವವರನ್ನು ಶೋಷಣೆಗೆ ಒಳಗಾಗಿರುವವರನ್ನು ಮತ್ತಷ್ಟು ತುಳಿಯತಕ್ಕಂಥ ಶೋಷಣೆ ಮಾಡತಕ್ಕಂಥ ಒಂದು ವ್ಯವಸ್ಥೆ ಈವರೆಗೆ ಮುಂದುವರೆದುಕೊಂಡು ಬಂದಿದೆ. ಇವತ್ತು ಅದೃಷ್ಟವಶಾತ್ ವಿದ್ಯಾಭ್ಯಾಸ ಎಲ್ಲರ ಸ್ವತ್ತಾಗುತ್ತಿದೆ, ಎಲ್ಲರೂ ಅರ್ಥ ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ, ಇಂತಹ ಸಂದರ್ಭದಲ್ಲಿ ಅದರ ಅವಶ್ಯಕತೆಗಳಾದ ಶಾಲೆಗಳು, ಶಾಲಾಕಟ್ಟಡಗಳು ಇತ್ಯಾದಿಗಳು ಇವತ್ತು ಹೆಚ್ಚಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಅವಕಾಶ ಎಲ್ಲರಿಗೂ ಇದ್ದರೂ ಕೂಡ, ಅದರಲ್ಲೂ ಗ್ರಾಮಾಂತರ ಪ್ರದೇಶದಲ್ಲಿರುವ

ಶೇಕಡ 60 ರಷ್ಟು ಜನ ಅದನ್ನು ಉಪಯೋಗಿಸಿಕೊಳ್ಳುವ ಪರಿಸ್ಥಿತಿಯಲಿಲ್ಲ. ಆದಕ್ಕೆ ಆರ್ಥಿಕ ಕಾರಣಗಳ ಜೊತೆಗೆ, ಅಲ್ಲಿರುವ ಆ ಶಾಲೆಗಳ ಪರಿಸ್ಥಿತಿ, ಪಟ್ಟಣವಲ್ಲಿರುವ ಶಾಲೆಗಳ ಪರಿಸ್ಥಿತಿಯನ್ನು ಕೂಡ ನೋಡುವುದಾದರೆ ಭೂಮಿ ಆಕಾಶದಷ್ಟು ವ್ಯತ್ಯಾಸವನ್ನು ನಾವು ಕಾಣುತ್ತೇವೆ. 1991ರ ಜನಗಣತಿಯ ಪ್ರಕಾರ ನಮ್ಮ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಶೇಕಡ 47.6 ರಷ್ಟು ಮಾತ್ರ ಅಕ್ಷರಸ್ಥರಿದ್ದಾರೆ, ಪಟ್ಟಣ ಪ್ರದೇಶದಲ್ಲಿ ಸಾಕ್ಷರತೆ ಶೇಕಡ 74.2 ರಷ್ಟಿದೆ, ಎಸ್‌ಸಿ/ಎಸ್‌ಟಿ ಸಾಕ್ಷರತೆ 39 ರಷ್ಟಿದೆ, ಮಹಿಳೆಯರ ಸಾಕ್ಷರತೆ ಶೇಕಡ 25.95 ರಷ್ಟಿದೆ. 1993 ರಲ್ಲಿ ನಮ್ಮ ದೇಶದಲ್ಲಿ 6ನೇ ಅಖಿಲ ಭಾರತ ಎಜುಕೇಷನಲ್

1.30 ಪಿ.ಎಂ.

ಸರ್ವೆ ನಡೆದಿದೆ. ರಾಜ್ಯದಲ್ಲಿರುವ ಒಟ್ಟು ಪ್ರಾಥಮಿಕ ಶಾಲೆಗಳು 21,956. ಇದರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 20,198 ಶಾಲೆಗಳಿವೆ. ಪಟ್ಟಣ ಪ್ರದೇಶಗಳಲ್ಲಿ 1,758 ಶಾಲೆಗಳಿವೆ. ರಾಜ್ಯದಲ್ಲಿ ಒಟ್ಟು 18, 283 ಹಿರಿಯ ಪ್ರಾಥಮಿಕ ಶಾಲೆಗಳಿವೆ. ಅದರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ 13,566 ಶಾಲೆಗಳಿವೆ, ಪಟ್ಟಣ ಪ್ರದೇಶಗಳಲ್ಲಿ 4,717 ಶಾಲೆಗಳಿವೆ. ರಾಜ್ಯದಲ್ಲಿ ಸೆಕೆಂಡರಿ ಸ್ಕೂಲುಗಳು ಇರತಕ್ಕಂಥಾದ್ದು 1,276. ಅದರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರುವುದು 696 ಶಾಲೆಗಳು ಮತ್ತು ಪಟ್ಟಣ ಪ್ರದೇಶಗಳಲ್ಲಿ 580 ಶಾಲೆಗಳಿವೆ. ಈ ಶಾಲೆಗಳ ಪರಿಸ್ಥಿತಿ ಹೇಗೆ ಇದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಮೇಲೆ ಹೇಳಿದ ಶಾಲೆಗಳಲ್ಲಿ, ಎಷ್ಟು ಶಾಲೆಗಳಿಗೆ ಕಟ್ಟಡವಿದೆ? 1,803 ಸರ್ಕಾರಿ ಪ್ರಾಥಮಿಕ ಶಾಲೆಗಳು ಕಚ್ಚಾ ಕಟ್ಟಡಗಳಲ್ಲಿ ನಡೆಯುತ್ತಿವೆ. ಆ ಕಟ್ಟಡಗಳು ಮೇಲುಗಡೆ ಸುರಿಯುತ್ತಿರುತ್ತವೆ, ಗೋಡೆ ಸರಿಯಾಗಿರುವುದಿಲ್ಲ, ಕಿಟಕಿ ಇದ್ದರೆ ಬಾಗಿಲು ಇರುವುದಿಲ್ಲ, ಬಾಗಿಲು ಇದ್ದರೆ ಕಿಟಕಿ ಇರುವುದಿಲ್ಲ. 188 ಪ್ರಾಥಮಿಕ ಶಾಲೆಗಳು ಗುಡಿಸಲುಗಳಲ್ಲಿ ನಡೆಯುತ್ತಿವೆ. 32 ಪ್ರಾಥಮಿಕ ಶಾಲೆಗಳು ಟೆಂಟ್‌ಗಳಲ್ಲಿ ನಡೆಯುತ್ತಿವೆ. ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ 1,015 ಶಾಲೆಗಳು ಕಚ್ಚಾ ಕಟ್ಟಡದಲ್ಲಿ ನಡೆಯುತ್ತಿವೆ, 58 ಶಾಲೆಗಳು ಗುಡಿಸಲುಗಳಲ್ಲಿ ನಡೆಯುತ್ತಿವೆ, 13 ಶಾಲೆಗಳು ಟೆಂಟ್‌ಗಳಲ್ಲಿ ನಡೆಯುತ್ತಿವೆ. ಇನ್ನು ಹೈಸ್ಕೂಲ್‌ಗಳ ಪರಿಸ್ಥಿತಿ ಏನಾಗಿದೆ ಎಂದರೆ, 378 ಹೈಸ್ಕೂಲುಗಳು ಕಚ್ಚಾ ಬಿಲ್ಡಿಂಗ್‌ನಲ್ಲಿ ನಡೆಯುತ್ತಿವೆ. ಒಂದು ರೀತಿಯಲ್ಲಿ ಅವುಗಳಿಗೆ ಕಟ್ಟಡವೇ ಇಲ್ಲವೆಂದು ಹೇಳಬಹುದು. 90 ಹೈಸ್ಕೂಲುಗಳು ಗುಡಿಸಲುಗಳಲ್ಲಿ ನಡೆಯುತ್ತಿವೆ. 15 ಹೈಸ್ಕೂಲುಗಳು ಟೆಂಟ್‌ನಲ್ಲಿ ನಡೆಯುತ್ತಿವೆ. ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಹೈಸ್ಕೂಲುಗಳಲ್ಲಿ 173ಕ್ಕೆ ಕ್ಲಾಸ್ ರೂಂಗಳೇ ಇಲ್ಲ ಎನ್ನತಕ್ಕಂಥಾದ್ದು ಇದೆ. 5,694 ಶಾಲೆಗಳಲ್ಲಿ ಒಂದೇ ಒಂದು ತರಗತಿ ಇರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಗ್ರಾಮೀಣ ಪ್ರದೇಶಗಳಲ್ಲಿನತಕ್ಕಂಥ 392 ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರೇ ಇಲ್ಲ. ಆದರೂ ಅಲ್ಲಿ ಶಾಲೆ ನಡೆಯುತ್ತಿದೆ. ಪಟ್ಟಣ ಪ್ರದೇಶಗಳಲ್ಲಿರುವ ಉಪಾಧ್ಯಾಯರು ಇಲ್ಲದಿರುವಂಥ ಶಾಲೆಗಳ ಸಂಖ್ಯೆ ಕೇವಲ 23. ಇವತ್ತಿನ ದಿವಸ ಇಂಥ ಪರಿಸ್ಥಿತಿ ಇರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ನಾನು

ಆಗಲೇ ಹೇಳಿದಹಾಗೆ ಗ್ರಾಮೀಣ ಪ್ರದೇಶಕ್ಕೂ ಮತ್ತು ಪಟ್ಟಣ ಪ್ರದೇಶಕ್ಕೂ ಇವತ್ತು ಭೂಮಿ-ಆಕಾಶದಷ್ಟು ವ್ಯತ್ಯಾಸವಿರುವುದನ್ನು ನಾವು ಕಾಣುತ್ತಿದ್ದೇವೆ. ನನ್ನ ಕ್ಷೇತ್ರದಲ್ಲೇ ನಡೆದಿರತಕ್ಕಂಥ ಒಂದು ಘಟನೆಯನ್ನು ಹೇಳುವುದಾದರೆ, ಶಾಲೆಗೆ ಹೋದಂಥ ಒಬ್ಬ ಹುಡುಗ ಹೆಣವಾಗಿ ಮನೆಗೆ ಬಂದ. ಕಾರಣವೇನೆಂದರೆ ಶಾಲೆ ನಡೆಯುತ್ತಿದ್ದಂಥ ಕಟ್ಟಡದಲ್ಲಿ ಹಾವು ಇತ್ತು. ಹಾವು ಕಚ್ಚಿ ಒಬ್ಬ ಹುಡುಗ ಶಾಲೆಯಲ್ಲೇ ಸತ್ತಿರತಕ್ಕಂಥಾದ್ದು ನನ್ನ ಕಣ್ಣೆದುರಿಗೇ ನೋಡಿದ ಅನುಭವ. ಇಂಥ ಶಾಲೆಗಳಲ್ಲಿ ಓದಿರತಕ್ಕಂಥ ಮಕ್ಕಳನ್ನು, ಬೆಂಗಳೂರಿನ ಸುಸಜ್ಜಿತವಾಗಿರತಕ್ಕಂಥ ಶಾಲೆಗಳಲ್ಲಿ ಓದಿರತಕ್ಕಂಥ ಮಕ್ಕಳನ್ನು ಜೊತೆಗೂಡಿಸಿ, ಮೆರಿಟ್ ಇಂಟು ಡಿ-ಮೆರಿಟ್, ಡಿಮೆರಿಟ್ ಇಂಟು ಮೆರಿಟ್ ಎನ್ನುವ ಜಡ್ಜ್‌ಮೆಂಟನ್ನು ಮಾನ್ಯ ಚಂದ್ರೇಗೌಡರು ಓದುತ್ತಿದ್ದರು. ಗ್ರಾಮೀಣ ಪ್ರದೇಶದ ಮಕ್ಕಳಿಗೆ ಈ ರೀತಿಯ ಅನಾನುಕೂಲತೆಗಳನ್ನು ಕೊಟ್ಟಿರುವಾಗ ಡಿ-ಮೆರಿಟ್ ಇಂಟು ಮೆರಿಟ್ ಹೇಗಾಗುತ್ತದೆ? ನಾನು ಹೇಳಿದಂಥ ಪರಿಸ್ಥಿತಿ ಶಾಲೆಗಳಲ್ಲಿರುವಾಗ ಅದನ್ನು ಮೆರಿಟ್ ಎಂದು ಹೇಗೆ ಹೇಳುತ್ತೀರಿ? ಎಲ್ಲರಿಗೂ ಸಮಾನವಾದಂಥ ವ್ಯವಸ್ಥೆಯನ್ನು ಕಲ್ಪಿಸಿ, ಸಮಾನವಾದ ರೀತಿಯಲ್ಲಿ ಎಲ್ಲರಿಗೂ ವಿದ್ಯಾಭ್ಯಾಸವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಜಾರಿಗೆ ತಂದರೆ ಅದನ್ನು ಮೆರಿಟ್ ಎಂದು ಕರೆಯುವುದಾದರೆ, ಅದನ್ನು ನಾವು ಒಪ್ಪಿಕೊಳ್ಳೋಣ. ಕತ್ತೆ ಮತ್ತು ಕುದುರೆ ಇವೆರಡನ್ನೂ ಓಟಕ್ಕೆ ಬಿಟ್ಟರೆ ಯಾವುದೇ ಮುಂದೆ ಬರುತ್ತದೆ? ಸ್ವಾಭಾವಿಕವಾಗಿ ಕುದುರೇ ಓಡೇ ಓಡುತ್ತದೆ, ಮುಂದೆ ಬರುತ್ತದೆ. ಆದರೆ ಕತ್ತೆ ಕುದುರೆಗೆ ಸಮಾನವಾಗಿ ಓಡುವುದಕ್ಕೆ ಆಗುತ್ತದೆಯೇ? ಈ ಕಾರಣಗಳಿಂದಾಗಿ ಇವತ್ತು ಈ ಮೀಸಲಾತಿಯ ಅವಶ್ಯಕತೆ ಇದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇದನ್ನು ಮನಗಂಡು ಕರ್ನಾಟಕ ರಾಜ್ಯದಲ್ಲಿ ಬಹಳ ಹಿಂದೆಯೇ, ಅಂದರೆ 1878ರಲ್ಲೇ ಮೈಸೂರಿನಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಅಂದಿನ ಆಡಳಿತ ವರ್ಗದವರು ಮೀಸಲಾತಿಯನ್ನು ನೀಡಿರತಕ್ಕಂಥಾದ್ದೂ ಉಂಟು.

ಶ್ರೀ ಕಾಗೋಡು ತಿಮ್ಮಪ್ಪ :— ಹೆಚ್ಚು ಕಡಿಮೆ ಸದನದಲ್ಲಿರುವ ಎಲ್ಲರೂ ಶೇಕಡ 10ರಷ್ಟು ಇರುವುದನ್ನು ಶೇಕಡ 25ರಷ್ಟು ಮಾಡಿ ಎಂದು ಒಪ್ಪಿಕೊಂಡಿದ್ದಾರೆ. ಇನ್ನೂ ಕೆಲವು ಸದಸ್ಯರು, ಗ್ರಾಮಮಟ್ಟದಲ್ಲಿ ಓದಬೇಕೆಂದಿರುವ 10 ವರ್ಷಗಳ ಬದಲಾಗಿ 7 ವರ್ಷಗಳು ಎಂದು ಮಾಡಿ ಎಂದು ಹೇಳಿದ್ದಾರೆ. ಅಂಥ ಕೆಲವು ವಿಶಿಷ್ಟವಾದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರೆ ಸರ್ಕಾರಕ್ಕೆ ಸಹಾಯವಾಗುತ್ತದೆ. ಈ ಸಿದ್ಧಾಂತವನ್ನೆಲ್ಲಾ ನಾವು ಮನೆಯಲ್ಲಿ ಕುಳಿತು ಆಮೇಲೆ ನಿಧಾನವಾಗಿ ಮಾತನಾಡಿಕೊಳ್ಳೋಣ. ಈಗ ಸದ್ಯಕ್ಕೆ, ನಮ್ಮ ಮುಂದೆ ಇರುವ ಬಿಲ್‌ಗೆ ಕಾಣಿಸುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಹೇಳಿ.

ಶ್ರೀ ಸಿ. ಭೈರೇಗೌಡ :— ಆ ಸಿದ್ಧಾಂತಗಳು ಚರ್ಚೆಯಾಗಬೇಕಾಗಿರುವುದು ಇಲ್ಲಿಯೇ. ನಮ್ಮ ರಾಜ್ಯದಲ್ಲಿ ಹ್ಯೂಮನ್ ರಿಸೋರ್ಸಸ್ ಡೆವಲಪ್‌ಮೆಂಟ್ ಯಾವರೀತಿ

ಆಗುತ್ತಿವೆ ಎನ್ನುವುದಕ್ಕೆ 1999ರಲ್ಲಿ ನಮ್ಮ ಪ್ಲಾನಿಂಗ್ ಡಿಪಾರ್ಟ್‌ಮೆಂಟಿನವರು ಒಂದು ಡಾಕ್ಯುಮೆಂಟನ್ನು ಹೊರತಂದಿದ್ದಾರೆ. ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾಭ್ಯಾಸ ಯಾವ ರೀತಿ ನಡೆಯುತ್ತಿದೆ ಎನ್ನುವುದಕ್ಕೆ ಅವರು ಅದರಲ್ಲಿ ಏನು ಹೇಳಿದ್ದಾರೆ ಎಂದರೆ....

ಶ್ರೀ ಕಾಗೋಡು ತಿಮ್ಮಪ್ಪ:— ಅದನ್ನು ಇಲ್ಲ ಎಂದು ಈಗ ಯಾರು ಹೇಳುತ್ತಿದ್ದಾರೆ? ನಮ್ಮ ಮುಂದೆ ಒಂದು ಬಿಲ್ ಇದೆ. ಆ ಬಿಲ್‌ನಲ್ಲಿ ಏನಾದರೂ ಬದಲಾವಣೆ ಮಾಡಬೇಕೇ ಎನ್ನುವುದನ್ನು ಹೇಳಿ ಎಂದರೆ, ನೀವು ಕತೆ ಹೇಳಿದರೆ ಹೇಗೆ?

ಶ್ರೀ ಸಿ. ಬೈರೇಗೌಡ:— ಹೌದು, ಕತೆಯನ್ನೇ ಹೇಳಬೇಕಾಗುತ್ತದೆ. ಏಕೆಂದರೆ, ಮೆರಿಟ್ ಇಂಟು ಡೀ-ಮೆರಿಟ್, ಡೀ-ಮೆರಿಟ್ ಇಂಟು ಮೆರಿಟ್ ಆಗಿ ಕನ್‌ವರ್ಟ್ ಆಗುತ್ತದೆ ಎನ್ನುವ ತೀರ್ಪು ಬಂದಿದೆ ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದು ಹೇಗಾಗುತ್ತದೆ ಎನ್ನುವುದಕ್ಕೆ ಹೇಳಬೇಕಾಗುತ್ತದೆ. ಸರ್ಕಾರದ ಅಧಿಕೃತವಾದಂಥ ಪ್ಲಾನಿಂಗ್ ಡಿಪಾರ್ಟ್‌ಮೆಂಟಿನ ಡಾಕ್ಯುಮೆಂಟಿನಲ್ಲಿ ಏನಿದೆ ಎಂದರೆ, ``Human Resources, Devclopement in Karnataka-The literacy rates in Raichur, Gulbarga, Bidar, Bellary, Mandya, Mysore, Kolar and Bangalore (Rural) districts are lower than the literacy rates of sub-Sahara African countries". ಆಫ್ರಿಕಾ ದೇಶದಲ್ಲಿ ಇರತಕ್ಕಂಥಾದ್ದಕ್ಕಿಂತಲೂ ಕಡಿಮೆ ರೀತಿಯಲ್ಲಿ ವಿದ್ಯಾಭ್ಯಾಸದ ಮಟ್ಟ ನಮ್ಮ ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಇದೆ ಎಂದು ನಮ್ಮ ಸರ್ಕಾರದ ಅಧಿಕೃತವಾದಂಥ ದಾಖಲೆಗಳಲ್ಲಿ ನಮೂದಾಗಿರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಈ ಭಾಗದ ಪ್ರದೇಶಗಳಿಂದ ಬಂದಿರತಕ್ಕಂಥ ಮಕ್ಕಳಿಗೆ ಮೀಸಲಾತಿ ಕೊಟ್ಟರೆ ಅಥವಾ ಅವರಿಗೆ ಹೆಚ್ಚಿಗೆ ಅಂಕಗಳನ್ನು ಕೊಟ್ಟರೆ ಅದು ತಪ್ಪಾಗುವುದಿಲ್ಲ. ಇದನ್ನು ತಪ್ಪು ಎಂದು ಯಾರು ಹೇಳುತ್ತಾರೆ, ಅದು ಯಾರೇ ಆಗಿರಬಹುದು, ಎಲ್ಲೇ ಕುಳಿತಿರಬಹುದು, ಯಾವುದೇ ಸ್ಥಾನದಲ್ಲಿರಬಹುದು, ಅವರು ತಪ್ಪಿತಸ್ಥರಾಗುತ್ತಾರೆ. ಇದು ಕೇವಲ ಕೋಲಾರ ಜಿಲ್ಲೆಯದಲ್ಲ. ಇಡೀ ರಾಜ್ಯದಲ್ಲಿ ಇರತಕ್ಕಂಥ ಪರಿಸ್ಥಿತಿ.

ಶ್ರೀ ಕೆ.ಹೆಚ್. ರಂಗನಾಥ್:— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೂಡ ನಿನ್ನೆ ಸಭೆಯಲ್ಲಿದ್ದರು. ವಿಧೇಯಕಗಳ ಪರಿಶೀಲನೆ ಮತ್ತು ಪರ್ಯಾಲೋಚನೆಯನ್ನು ತೆಗೆದುಕೊಳ್ಳಬೇಕಾಗಿದೆ. ನಾಳೆಗೆ ಸಭೆ ಮುಗಿಯಬೇಕಾಗಿದೆ. ಇದಕ್ಕೆ ಇವತ್ತು ತಾವು ಮೊದಲ ಆದ್ಯತೆ ಏಕೆ ಕೊಟ್ಟಿದ್ದೀರಿ ಎಂದರೆ, ಈ ಬಗ್ಗೆ ನಿನ್ನೆ ಕೂಡ ಚರ್ಚೆಯಾಗಿರುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಕೃಪಾಂಕದ ಗೊಂದಲಕ್ಕೆ ನಾವು ಒಳಗಾಗಿರುವುದರಿಂದ ನೇಮಕಾತಿ ಮಾಡುವುದಕ್ಕೆ ತೊಂದರೆಯಾಗಿ ಅದರಿಂದ ಇಡೀ ಅಡ್ಮಿನಿಸ್ಟ್ರೇಷನ್ ಸ್ಥಗಿತವಾಗಿದೆ.

ಹಾಗಾಗಿ ಈ ಮಸೂದೆಯನ್ನು ತಂದದ್ದಾಗಿದೆ. ಈ ಮಸೂದೆಯ ಮೂಲ ಉದ್ದೇಶವನ್ನು ಎಲ್ಲರೂ ಒಪ್ಪುತ್ತಾರೆ. ಈಗ ಎಲ್ಲಿ ಬಂದಿದೆಯೆಂದರೆ ಸರ್ಕಾರ ಶೇಕಡ 10 ಮೀಸಲಾತಿ ಎಂದು ಹೇಳಿರುವುದನ್ನು ಈ ಸಭೆಯ ಒತ್ತಾಯಕ್ಕೆ ಒಪ್ಪಿ ಅದು ಶೇಕಡ 25 ಆಗಿದೆ. ನಾವು ಪುನಃ ನೇರವಾಗಿ ಮೂಲಕ್ಕೆ ಹೊರಟುಬಿಟ್ಟರೆ, ಸ್ವಲ್ಪ ಕಷ್ಟವಾಗುತ್ತದೆ. ಏಕೆಂದರೆ ಇದು ಇವತ್ತು ಸಾಯಂಕಾಲದೊಳಗೆ ಇಲ್ಲಿ ಪಾಸ್ ಆಗದೇ ಹೋದರೆ ಮತ್ತು ನಾಳೆ ಇದು ಮೇಲ್ಮನೆಗೆ ಹೋಗಿ ಪಾಸ್ ಆಗದೇ ಹೋದರೆ ಹೀಗೆ ಮಾಡಬೇಕೆಂದು ಸದನದ ಎಲ್ಲಾ ಸದಸ್ಯರ ಉದ್ದೇಶ ಏನಿತ್ತು ಅದು ಹೊರಟು ಹೋಗುತ್ತದೆ. ಎಲ್ಲಾ ಬಿಲ್‌ಗಳು ಇಲ್ಲಿ ಇವತ್ತು ಪಾಸ್ ಆಗಬೇಕಾಗುತ್ತದೆ. ಆದ್ದರಿಂದ ನಿಗದಿತ ಸಮಯದೊಳಗೆ ಮಾತನಾಡಿ ಮುಗಿಸಿದರೆ ಒಳ್ಳೆಯದು. ಮಾನ್ಯ ಸದಸ್ಯರು ಹೇಳತಕ್ಕಂಥಾದ್ದಕ್ಕೆ ನಮ್ಮ ವಿರೋಧ ಇಲ್ಲ. ಈ ಬಿಲ್ ಇಲ್ಲಿ ಬದುಕಿದರೆ ಮುಂದೆ ದೊಡ್ಡದಾಗಿ ವಿಚಾರ ಮಾಡೋಣ. ಇದು ಬದುಕುತ್ತದೋ ಇಲ್ಲವೋ ಎನ್ನುವುದು ಸಭೆಯ ನಿರ್ಣಯಕ್ಕೆ ಬರಬೇಕಾಗಿದೆ. ಮಾನ್ಯ ಸದಸ್ಯರ ಅಭಿಪ್ರಾಯದ ಮೇಲೆ ನನ್ನ ಭಿನ್ನಾಭಿಪ್ರಾಯ ಇಲ್ಲ. ಮಾನ್ಯ ಬೈರೇಗೌಡರ ವಿಚಾರ ಧಾರೆ ಚೆನ್ನಾಗಿದೆ. ಯಾರು ಬಹಳ ವರ್ಷಗಳಿಂದ ತೊಂದರೆಗೊಳಗಾದ ಜನ ಇದ್ದಾರೆ ಅವರಿಗೆ ಹಳ್ಳಿಗಾಡಿನಲ್ಲಿ ಇವತ್ತಿಗೂ ಕೂಡ ನಾವು ಗುಣಮಟ್ಟದ ವಿದ್ಯಾಭ್ಯಾಸವನ್ನು ಕೊಡಲಿಕ್ಕೆ ಆಗಿಲ್ಲ ಎನ್ನುವುದು ನನ್ನ ಗಮನದಲ್ಲಿದೆ. ಆದರೆ ಇವತ್ತಿನ ಪರಿಸ್ಥಿತಿಗೆ ಅನುಗುಣವಾಗಿ at the given point of time, in the given circumstance ಈ ಸಭೆಗೆ ಮಸೂದೆ ಬಂದಾಗಿದೆ. ಅದಕ್ಕೆ ನಾವು ಒಪ್ಪಿಕೊಂಡು ಸಹಮತ ಕೊಟ್ಟು ಪಾಸ್ ಮಾಡಿಕೊಂಡರೆ ಮುಂದೆ ಬಜೆಟ್ ಅಧಿವೇಶನ ಬರುತ್ತದೆ ಮತ್ತೆ ಪರ್ಯಾಲೋಚನೆ ಮಾಡಿ ಚರ್ಚೆ ಮಾಡೋಣ, ಆದರಿಂದ ಏನೂ ತಪ್ಪಾಗುವುದಿಲ್ಲ. ಇಲ್ಲಿ ನಾವು ಈಗ ಬಿಲ್ ಪಾಸ್ ಮಾಡದೇ ಹೋದರೆ ಗ್ರಾಮೀಣ ಜನರಿಗೆ ತೊಂದರೆ ಆಗುತ್ತದೆ.ಆದ್ದರಿಂದ ಮಾನ್ಯ ಸದಸ್ಯರು ಸಹಕರಿಸಿದರೆ ಸ್ವಲ್ಪಮಟ್ಟಿಗೆ ಅನುಕೂಲವಾಗಬಹುದು ಎನ್ನುವುದು ನನ್ನ ಅಭಿಪ್ರಾಯ.

ಅಧ್ಯಕ್ಷರು :— ಶ್ರೀ ಬೈರೇಗೌಡರೆ, ಹೊಸ ಸದಸ್ಯರು ಮಾತನಾಡುವವರು ಇದ್ದಾರೆ ತಾವು ಸ್ವಲ್ಪ ಬೇಗ ಮಾತನಾಡಿ ಮುಗಿಸಿ.

ಶ್ರೀ ಸಿ. ಬೈರೇಗೌಡ :— ಇಲ್ಲ, ನಾನು ಮಾತನಾಡುವುದೇ ಇಲ್ಲ. ಮುಗಿಯಿತು.

ಶ್ರೀ ಹೆಚ್.ಸಿ. ಬಸವರಾಜು :— ಮಾನ್ಯ ಅಧ್ಯಕ್ಷರೆ, ನಾವು ಮಾತನಾಡುವುದೇ ಬೇಡವೆ? ನಾವು ಐದು ನಿಮಿಷಕ್ಕಿಂತ ಜಾಸ್ತಿ ಯಾವತ್ತೂ ಮಾತನಾಡುವುದಿಲ್ಲ.

ಶ್ರೀ ಎ. ಪಾಪಣ್ಣ :— ಮಾನ್ಯ ಅಧ್ಯಕ್ಷರೆ, ಕೃಪಾಂಕದ ವಿಚಾರವಾಗಿ ಐದು ನಿಮಿಷವಾದರೂ ನನಗೆ ಅವಕಾಶ ಕೊಡಬೇಕು. ಅದಕ್ಕಿಂತ ಹೆಚ್ಚು ಹೊತ್ತು ಮಾತನಾಡುವುದಿಲ್ಲ. ಅಂಕಿಅಂಶವನ್ನು ಮಾತ್ರ ನಾನು ಹೇಳುತ್ತೇನೆ. ಬಾಕಿ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು :— ಶ್ರೀ ಬೈರೇಗೌಡರೆ, ತಾವು ಮಾತನಾಡಿ ಬೇಗ ಮುಗಿಸಿ. You must understand our difficulties also. ಬೇರೆ ಹೊಸ ಸದಸ್ಯರು ಇದ್ದಾರೆ. ಅವರು ಕೂಡ ಮಾತನಾಡಬೇಕು ತಾನೆ. ನಾನು ಹೇಳುವುದನ್ನು ಒಪ್ಪಿಕೊಳ್ಳುತ್ತೀರಾ? ನಮಗೆ ಒಂದು ಸಲ ಕೂಡ ಮಾತನಾಡುವುದಕ್ಕೆ ಅಸ್ಪದ ಕೊಟ್ಟಿಲ್ಲವೆಂದು ಹೊಸ ಸದಸ್ಯರು ಹೇಳುತ್ತಿದ್ದಾರೆ. ತಾವು ದಯವಿಟ್ಟು ಬೇಗ ಮಾತನಾಡಿ ಮುಗಿಸಿ.

ಶ್ರೀ ಸಿ. ಬೈರೇಗೌಡ :— ಈ ಸಭೆಯಲ್ಲಿ ನಾವು ತಾವು ಹೇಳಿದಹಾಗೆ ಕೇಳಬೇಕಾಗಿತಕ್ಕಂಥಾದ್ದು ಎಂದು ನಿಯಮ ಮಾಡಿಕೊಂಡಿದ್ದೇವೆ. ತಾವು ಮಾತನಾಡಿದ್ದು ಸಾಕು ಎಂದು ಹೇಳಿದಿರಿ, ಅದಕ್ಕೆ ನಾನು ಕುಳಿತಿದ್ದೇನೆ. ಹೊಸಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಹೇಳಿದಿರಿ, ಅವರಿಗೆ ಅವಕಾಶ ಕೊಡಿ.

ಅಧ್ಯಕ್ಷರು :— ಸರ್ಕಾರ ಅಮೆಂಡ್‌ಮೆಂಟ್ ಬಿಲ್ ಏನು ಮೂವ್ ಮಾಡಿದ್ದಾರೆ ಅದನ್ನು ಒಟ್ಟಾರೆ ಎಲ್ಲರೂ ಒಪ್ಪಿದ್ದಾರೆ. ನಾನು ಏನು ಹೇಳುತ್ತಿದ್ದೇನೆಂದರೆ ತಾವು ಸಂಕ್ಷಿಪ್ತವಾಗಿ ಮಾತನಾಡಿ ಮುಗಿಸಿ. ದಯಮಾಡಿ ಸಂಕ್ಷಿಪ್ತವಾಗಿ ಮಾತನಾಡಿ ಮುಗಿಸಿ ಎಂದು ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ನಿಂತು ತಮ್ಮ ವಿಚಾರದಲ್ಲಿ ಹಟಕ್ಕೆ ಮಾತನಾಡುವುದಕ್ಕೆ ನಾನು ತಯಾರಿಲ್ಲ. ಇಲ್ಲಿ ನಿಂತು ನಾನು ಮಾತನಾಡಬಾರದು. ಆದ್ದರಿಂದ ನಾನು ಹೇಳುತ್ತಿದ್ದೇನೆ.

MR. SPEAKER: You must understand the sense of the members. ತಾವ ಬೇಗನೆ ಮಾತನಾಡಿ. ಬೇಗನೆ ಕನ್‌ಕ್ಲೂಡ್ ಮಾಡಿ ಎಂದು ಹೇಳಿದೆ ಅಷ್ಟೆ.

ಶ್ರೀ ಸಿ. ಬೈರೇಗೌಡ :— ಇಲ್ಲಿ ಏನಾಗಿದೆ ಎಂದರೆ 1 ರಿಂದ 10ನೇ ತರಗತಿವರೆಗೂ ಅದಮೇಲೆ ಸಹ ಪಿ.ಯು.ಸಿ.ಯಲ್ಲಿ ಕೂಡ ಏನಾಗುತ್ತದೆ ಎನ್ನುವ ಅಂಕಿಅಂಶಗಳು ಸಹಿತ ಇದೆ. The percentage of school going children attending different types of schools in Karnataka is ಮುನ್ಸಿಪಲ್ ಶಾಲೆಗಳು ಶೇಕಡ 0.4, ಮುನ್ಸಿಪಲ್ ಸ್ಕೂಲ್ಸ್‌ಗೆ ಅರ್ಬನ್ ಚಿಲ್ಡ್ರನ್ ಶೇಕಡ 1.2 ಅಟೆಂಡ್ ಆಗುತ್ತಾರೆ. ನಾನು ಆಗಲೇ ಹೇಳಿದಂತೆ ಸರ್ಕಾರಿ ಶಾಲೆಗಳು ಏನಿವೆ ಅದರಲ್ಲಿ ಶೇಕಡ 65.4ರಷ್ಟು ಇದ್ದಾರೆ. Urban children attending primary schools 33.2% ಈ ರೀತಿಯಾಗಿ ಇವತ್ತಿನ ದಿವಸ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಟ ಅವಶ್ಯಕತೆಯಾದ ಬರೆಯತಕ್ಕಂಥ ಬ್ಲಾಕ್‌ಬೋರ್ಡ್ ಇಲ್ಲದಿರತಕ್ಕಂಥ ಸರ್ಕಾರಿ ಶಾಲೆಗಳು ಸಹ ಇವೆ. ಅಂಥ ಶಾಲೆಗಳಲ್ಲಿ ಗ್ರಾಮೀಣ ಪ್ರದೇಶದಿಂದ ಬಂದಂಥ ಮಕ್ಕಳು ಇವತ್ತಿನ ದಿವಸ ಓದುತ್ತಿದ್ದಾರೆ. ಇನ್ನು ಶಾಸಕರ

ಶೇಕಡಾವಾರು ಲೆಕ್ಕ ಹಾಕಿದರೆ ಬಹಳ ಭೀಕರವಾದ ಪರಿಸ್ಥಿತಿ ಅರ್ಥವಾಗುತ್ತದೆ. Performance of urban and rural candidates in Karnataka II PUC examination held in April 2000. ಇದು ಸರ್ಕಾರದ ಅಂಕಿಅಂಶಗಳ ಪ್ರಕಾರ ಇರತಕ್ಕಂಥಾದ್ದು. ಪಟ್ಟಣ ಪ್ರದೇಶದಲ್ಲಿ ಪರೀಕ್ಷೆಗೆ ಕುಳಿತವರು 1,05,362 ಮಕ್ಕಳು, ಪಾಸಾಗಿರತಕ್ಕಂಥವರು 62,920. ಫೇಲ್ ಆಗಿರತಕ್ಕಂಥವರು 42,442 ಮಕ್ಕಳು. ಪಾಸಾದವರ ಶೇಕಡಾವಾರು 59.72 ಆಗಿದೆ. ಪಟ್ಟಣ ಪ್ರದೇಶದಲ್ಲಿ 1979 ಮಕ್ಕಳು ಡಿಸ್ಟಿಂಕ್ಷನ್‌ನಲ್ಲಿ ಪಾಸ್ ಆಗಿದ್ದಾರೆ. ಇಲ್ಲಿಯೇ ತಕರಾರು ಬಂದಿರತಕ್ಕಂಥಾದ್ದು. ಅದೇ ರೀತಿ ಗ್ರಾಮಾಂತರ ಪ್ರದೇಶಕ್ಕೆ ಬಂದರೆ ಪರೀಕ್ಷೆಗೆ ಕುಳಿತಿರುವ ಮಕ್ಕಳು 96,108 ಅದರಲ್ಲಿ 49,095 ಮಕ್ಕಳು ಪಾಸಾಗಿರತಕ್ಕಂಥವರು, ಫೇಲ್ ಆಗಿರತಕ್ಕಂಥ ಮಕ್ಕಳು 47,013. ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶದ ಮಕ್ಕಳು ಫೇಲ್ ಆಗಿರುವುದನ್ನು ಹೋಲಿಕೆ ಮಾಡಿದಾಗ the percentage of failures in the villages are more. ಇನ್ನು ಡಿಸ್ಟಿಂಕ್ಷನ್‌ನ್ನು ಲೆಕ್ಕ ಹಾಕಿ ನೋಡಿದರೆ ಪಟ್ಟಣ ಪ್ರದೇಶದಲ್ಲಿ 1979 ಮಕ್ಕಳು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದರೆ ಗ್ರಾಮೀಣ ಪ್ರದೇಶದಲ್ಲಿ ಕೇವಲ 268 ಮಕ್ಕಳು ಮಾತ್ರ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದಾರೆ. ಇವರಿಗೆ ಎಲ್ಲಿ ಕೆಲಸ ಸಿಗುತ್ತದೆ ಸ್ವಾಮಿ? ಇವರಿಗೆ ಪ್ರೊಫೆಶನಲ್ ಕಾಲೇಜಿನಲ್ಲಿ ಅಡ್ಮಿಷನ್ಸ್ ಸಿಗುತ್ತದೆಯೇ? ಅದೇ ರೀತಿ ಪಿ.ಯು.ಸಿ.ಯ ಸೈನ್ಸ್ ಕ್ಯಾಟಗರಿಯಲ್ಲಿ ಪಾಸಾಗಿರತಕ್ಕಂಥವರನ್ನು ಹೇಳುತ್ತೇನೆ. ಅರ್ಬನ್ ಏರಿಯಾದಲ್ಲಿ 1696 ಜನ ಮಕ್ಕಳು ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದರೆ ರೂರಲ್‌ನಲ್ಲಿ 197 ಮಕ್ಕಳು ಮಾತ್ರ ಡಿಸ್ಟಿಂಕ್ಷನ್‌ನಲ್ಲಿ ಪಾಸಾಗಿದ್ದಾರೆ. ಈ ಪರಿಸ್ಥಿತಿ ಇವತ್ತಿನ ದಿವಸ ಗ್ರಾಮೀಣ ಪ್ರದೇಶದಲ್ಲಿ ಇದೆ. ಇದೇ ರೀತಿ ವಾಣಿಜ್ಯ ಮತ್ತು ಕಲೆ ವಿಭಾಗದ ಮಾಹಿತಿ ಕೂಡ ಇದೆ. ಆದರೆ ನಾನು ಸದನದ ಸಮಯವನ್ನು ಹೆಚ್ಚಿಗೆ ಉಪಯೋಗಿಸಿಕೊಳ್ಳುವುದಿಲ್ಲ. ಸರ್ಕಾರದವರು ಶೇಕಡ 10ರಷ್ಟು ಗ್ರಾಮೀಣ ಮಕ್ಕಳಿಗೆ ಮೀಸಲಾತಿ ಇಡುತ್ತೇವೆ ಎಂದು ಹೇಳಿದ್ದನ್ನು ಬದಲಾಯಿಸಿ ಈಗ ಶೇಕಡ 25ಕ್ಕೆ ಬಂದು ನಿಂತಿದ್ದಾರೆ. ಇದರಿಂದ ನಮಗೆ ಪೂರ್ತಿಯಾಗಿ ಸಂತೋಷವಾಗಿದೆ ಎಂದು ನಾನಂತೂ ಹೇಳುವುದಿಲ್ಲ. ಪೂರ್ತಿಯಾಗಿ ಸಂತೋಷ ಕೂಡ ಆಗಿಲ್ಲ. ಈ ಬಿಲ್‌ನ ಬಗ್ಗೆ ಪೂರ್ತಿಯಾಗಿ ನಾವು ಒಪ್ಪಿದ್ದೇವೆಂದು ಕೂಡ ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಏನೂ ಇಲ್ಲದಿರುವ ಕಡೆ ಸ್ವಲ್ಪವಾದರೂ ಕೂಡ ಈ ಮೀಸಲಾತಿ ಬರುತ್ತದೆಯಲ್ಲಾ ಎನ್ನತಕ್ಕಂಥ, ಅಷ್ಟರಮಟ್ಟಿಗೆ ಸೀಮಿತವಾದಂಥ ಈ ಸದನದ ಒಪ್ಪಿಗೆಯನ್ನು ನಾವು ಕೊಡಬೇಕಾಗುತ್ತದೆ. ಇನ್ನು ನ್ಯಾಯಾಲಯದ ತೀರ್ಪನ್ನು ಓದಿ, ಹಿಂದೆ ಇದ್ದಂಥ ಸರ್ಕಾರ ನ್ಯಾಯಾಲಯಕ್ಕೆ ಅಂಕಿಅಂಶಗಳನ್ನು ಕೊಡಲಿಕ್ಕೆ ಆಗಲಿಲ್ಲ ಸರ್ಕಾರ ವಿಫಲವಾಯಿತು ಎಂದು ಮಾನ್ಯ ವೈ.ಕೆ. ರಾಮಯ್ಯನವರು ಹೇಳಿದರು. ಈ ವಿಚಾರದಲ್ಲಿ ನಾನು ಸ್ವಲ್ಪ ಹೇಳಬೇಕಾಗುತ್ತದೆ. ಕಾರಣವೇನೆಂದರೆ, ಈ ಕೃಪಾಂಕ ಪದ್ಧತಿಯನ್ನು ತರಬೇಕಾಗಿದ್ದರೆ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ನಾನು ಮತ್ತು ನನ್ನ ಸ್ನೇಹಿತರಾದಂಥ ಶ್ರೀ ಎಸ್.ಎಸ್. ಪಾಟೀಲರು ಮತ್ತು ಇನ್ನೂ ಅನೇಕ ನಮ್ಮ ಮಾನ್ಯ ಮಂತ್ರಿಗಳು ಬಹಳ

ಶ್ರಮವನ್ನು ವಹಿಸಿ, ನಮಗೂ ಕೂಡ ಅಲ್ಲಿ ಅಡ್ಡಿಆತಂಕಗಳೆಲ್ಲವೂ ಬಂದವು. ಇದರ ಬಗ್ಗೆ ಪರ ಇದ್ದವರೂ ಇದ್ದರು, ವಿರೋಧ ಇದ್ದವರೂ ಉಂಟು. ಅವೆಲ್ಲವನ್ನೂ ಕೂಡ ಮೆಟ್ಟಿ ನಿಂತು ಪ್ರಾರಂಭದಲ್ಲಿ ಶೇಕಡ 5 ಮೀಸಲಾತಿಯನ್ನು ಸಿ. ಅಂಡ್ ಡಿ. ವರ್ಗಕ್ಕೆ ಮಾಡಿಸಿದೆವು. ಆ ನಂತರ ಮಾನ್ಯ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾದ ಮೇಲೆ ಶೇಕಡ 10 ಕ್ರಮಾಂಕವನ್ನು ಮಾಡಿ ಅದನ್ನು 'ಎ' ಮತ್ತು 'ಬಿ' ವರ್ಗಕ್ಕೆ ಕೂಡ ಅದನ್ನು ವಿಸ್ತರಿಸುವುದಕ್ಕೆ ನಾವು ಪ್ರಯತ್ನವನ್ನು ಪಟ್ಟಿರುತ್ತೇವೆ. ಅದನ್ನು ನ್ಯಾಯಾಲಯದಲ್ಲಿ ತಡೆಹಿಡಿದಿದ್ದಾರೆ. ಅಂಕಿಅಂಶಗಳನ್ನು ಏನೂ ನೀಡಿಲ್ಲ ಎಂದು ಮಾನ್ಯ ಸದಸ್ಯರು ಹೇಳುತ್ತಾರೆ. ಸ್ವಾಮಿ, ಅಂಗೈಯಲ್ಲಿರುವ ಹುಣ್ಣಿಗೆ ನೋಡಿಕೊಳ್ಳುವುದಕ್ಕೆ ಕನ್ನಡಿ ಬೇಕೇನು? ಆಗಲೇ ಕೆಲವು ಮಾನ್ಯ ಸದಸ್ಯರು ನ್ಯಾಯದ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಹಿಂದೆ ಒಮ್ಮೆ ಶ್ರೀ ಬಿ.ಎಸ್. ನಂಬೂದರಿಪಾದ್ ಅವರು ನ್ಯಾಯಾಧೀಶರ ಬಗ್ಗೆ ಮಾತನಾಡಿದ್ದಕ್ಕೆ ಅವರು ನ್ಯಾಯಾಲಯಕ್ಕೆ 50 ರೂಪಾಯಿಗಳ ಜುಲ್ಮಾನೆ ಕೊಡಬೇಕೆಂದು ಕೂಡ ಆಗಿದೆ. ತೀರ್ಪನ್ನು ಕೊಡತಕ್ಕಂಥವರಿಗೆ ಕೂಡ ಇದೆಲ್ಲ ಗೊತ್ತಿಲ್ಲ. ಅಂಗೈಯಲ್ಲಿ ಹುಣ್ಣು ಇದೆ. ಈ ಹುಣ್ಣನ್ನು ನೋಡಿಕೊಳ್ಳುವುದಕ್ಕೆ ಕನ್ನಡಿ ಬೇಕಾಗಿಲ್ಲ ಎನ್ನತಕ್ಕಂಥದ್ದು ಈ ತೀರ್ಪು ಬರೆಯತಕ್ಕಂಥವರು ಕೂಡ ಅರ್ಥ ಮಾಡಿಕೊಳ್ಳಬೇಕಾಗಿತ್ತು. ದುರಾದೃಷ್ಟವಶಾತ್ ಆ ರೀತಿಯಾದಂಥ ಅರ್ಥವನ್ನು ಅವರು ಮಾಡಿಕೊಳ್ಳದೆ ಇವತ್ತು ತೀರ್ಪನ್ನು ಕೊಟ್ಟು ಶೇಕಡ 60 ಜನ ಏನು ತುಳಿತಕ್ಕೆ ಸಿಕ್ಕಂಥವರು ಇದ್ದಾರೆ ಅವರ ತಲೆಯ ಮೇಲೆ ಬಂಡೆ ಎಳೆಯತಕ್ಕಂಥ ಕೆಲಸ ಆಗಿದೆ. ಆದರೆ, ಸ್ವಲ್ಪ ಮಟ್ಟಿಗಾದರೂ ಈ ಮಸೂದೆ ತಂದಿದ್ದು, ಅದರ ಬಗ್ಗೆ ಬಹಳ ಚರ್ಚೆಯಾಗುತ್ತಿದೆ. ಪುನಃ ಇದು ನ್ಯಾಯಾಲಯದ ಮುಂದೆ ಹೋದಾಗ ಏನಾಗುತ್ತದೋ ಆಗಲಿ ನೋಡೋಣ. ಅಂಥ ಪರಿಸ್ಥಿತಿ ಬಂದರೆ, ಮಾನ್ಯ ಹನುಮೇಗೌಡರವರು ಹೇಳುವ ರೀತಿಯಲ್ಲಿ ಎಲ್ಲರೂ ಒಗ್ಗಟ್ಟಾಗಿ ಇದನ್ನು ತರಲು ರಾಜ್ಯಾಂಗಕ್ಕೆ ತಿದ್ದುಪಡಿ ಮಾಡುವ ಅವಶ್ಯಕತೆ ಇದೆ. ಅದರ ಬಗ್ಗೆ ಇಲ್ಲಿಯೂ ಸಹ ಚರ್ಚೆಯಾಗಬೇಕಾಗುತ್ತದೆ. ಈ ಸಂದರ್ಭದಲ್ಲಿ ಅಲ್ಲದಿದ್ದರೂ ಸಹ ಮತ್ತೊಂದು ಸಂದರ್ಭದಲ್ಲಿಯಾದರೂ ಸಹ ಇಲ್ಲಿ ಚರ್ಚಿಸಿ, ಅದನ್ನು ನಾವು ರಕ್ಷಣೆ ಮಾಡಬೇಕಾಗುತ್ತದೆ. ಅದರ ಬಗ್ಗೆ ಇಲ್ಲಿ ವಿಶೇಷವಾದ ಚರ್ಚೆ ನಡೆಸುವ ಅವಶ್ಯಕತೆ ಇದ್ದು, ಇದನ್ನು 9ನೇ ಪರಿಶಿಷ್ಟಕ್ಕೆ ಸೇರಿಸಬೇಕಾದ ಅವಶ್ಯಕತೆ ಇದೆ. ನಾವು ಅರೆ ಮನಸ್ಸಿನಿಂದ ಒಪ್ಪಿದ್ದೇವೆ. ಇಷ್ಟಾದರೂ ಇವತ್ತಿನದಿವಸ ಸೀಮಿತ ವ್ಯಾಪ್ತಿಯಲ್ಲಿ ತಂದಿರುವ ಮಸೂದೆಯನ್ನು ನಾನು ಸ್ವಾಗತಿಸಿ, ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಪಾಪಣ್ಣ (ಹುಣಸೂರು) :— ಮಾನ್ಯ ಅಧ್ಯಕ್ಷರೆ, 75ರಷ್ಟು ಭಾಗ ಗ್ರಾಮೀಣ ಪ್ರದೇಶದಲ್ಲಿ ವಾಸವಿರುವವರಿಗೆ 12 ಜನರಿಗೆ ಕೊಡುತ್ತೀರಿ, 25 ಪರ್ಸೆಂಟ್ ವಾಸ ಮಾಡುವ ನಗರ ಪ್ರದೇಶದವರಿಗೆ 38 ಜನರಿಗೆ ಕೊಡುತ್ತೀರಿ. ಎಷ್ಟು ತಾರತಮ್ಯ ಇದರಲ್ಲಿದೆ ಎನ್ನುವುದನ್ನು ತಾವು ಗಮನಿಸಬೇಕು. ರೈತನ ಹಾಲಿನ ಚೀರಿಯಿಂದ ಹಾಲು ತೆಗೆದುಕೊಂಡಿದ್ದರಿಂದ, ಅವರಿಗೆ ಅವ್ಯವಸ್ಥೆಯಾಗಿದೆ. ಒಂದರಿಂದ ಏಳನೆಯ ತರಗತಿಯವರೆಗೆ

ಎರಡು ಕೊಠಡಿ, ಒಬ್ಬರೇ ಮೇಷ್ಟರು ಅವರಿಂದಲೇ ಪಾಠ ಹೇಳಿಸಿಕೊಳ್ಳಬೇಕು. ಒಂದು ಮನೆಯಲ್ಲಿ 4 ಜನ ಮಕ್ಕಳಿದ್ದರೆ, ಅಪ್ಪನ ಆಸ್ತಿಗೆ ಮಾತ್ರ ಲಾಯರ್ ನೋಟೀಸ್ ಕಳುಹಿಸುತ್ತಾರೆ. ಟೌನ್‌ನಲ್ಲಿರುವವರಿಗೆ ಎಲ್ಲ ತರಹದ ಸವಲತ್ತುಗಳೂ ಬೇಕು. ಹಳ್ಳಿ ಮತ್ತು ಪಟ್ಟಣದಲ್ಲಿರುವವರಿಗೂ ಯಾವ್ಯಾವ ರೀತಿ ತೊಂದರೆ ಇದೆ ಎಂದು ಗಮನಿಸಿ, ತಾವು ದಯವಿಟ್ಟು ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಂಕಿ-ಅಂಶಗಳ ಆಧಾರದ ಮೇಲೆ ಕೊಡುವ ರಿಸರ್ವೇಷನ್ ಅನ್ನು ಎಲ್ಲ ವರ್ಗದವರಿಗೂ ಕೊಡಿ. ಅದರಲ್ಲಿ ಹೆಚ್ಚು ಕಡಿಮೆ ಮಾಡುವುದು ಬೇಡ. ಒಂದು ಲೀಟರ್ ಹಾಲಿಗೆ 10 ರೂಪಾಯಿಗಳಿಂದ 50 ಪೈಸೆ ಹೆಚ್ಚಿಸಿದರೆ ಧರಣಿ ಮಾಡುತ್ತಾರೆ, ಬಸ್ಸುಗಳಿಗೆ ಕಲ್ಲು ಹೊಡೆಯುತ್ತಾರೆ. ಒಂದು ಲೀಟರ್ ನೀರಿಗೆ ಚಿಲ್ಲರೆ ಸಹ ಪಡೆಯದೆ ದೊಡ್ಡಸ್ತಿಕೆಯಿಂದ ದುಡ್ಡು ಕೊಟ್ಟು ಕೊಳ್ಳುತ್ತಾರೆ. ಪಟ್ಟಣದಲ್ಲಿ ಈ ವ್ಯವಸ್ಥೆಯಿದೆ. ಮುಗ್ಧ ಗ್ರಾಮೀಣ ಜನರಿಗೆ ಅನ್ಯಾಯ ಮಾಡಿಕೊಂಡು ಬಂದಿದ್ದೀರಿ, ಇದರಲ್ಲೂ ಅನ್ಯಾಯವಾಗಬಾರದು. ಅಂಕಿ-ಅಂಶಗಳ ಆಧಾರದ ಮೇಲೆ ಅವರಿಗೆ ಪ್ರಾತಿನಿಧ್ಯ ನೀಡಬೇಕೆಂದು ನಾನು ಸರ್ಕಾರದವರಲ್ಲಿ ಕೇಳುತ್ತೇನೆ.

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) :— ಮಾನ್ಯ ಅಧ್ಯಕ್ಷರೇ, ಹಳ್ಳಿಗಳಲ್ಲಿ ಶಾಲೆ ಇದ್ದಲ್ಲಿ, ಟೀಚರ್ ಇರುವುದಿಲ್ಲ, ಟೀಚರ್ ಇದ್ದಲ್ಲಿ, ಬಿಲ್ಡಿಂಗ್ ಇರುವುದಿಲ್ಲ. ಹೀಗೆ ಅನೇಕ ತೊಂದರೆಗಳಿವೆ. ರೈತಾಪಿ ಮಕ್ಕಳು, ಕೂಲಿ ಕಾರ್ಮಿಕರ ಮಕ್ಕಳು ಆ ಭಾಗದಲ್ಲಿರುತ್ತಾರೆ. ಇವತ್ತು ಸಿಟಿಯಲ್ಲಿ ಬಹಳ ಒಳ್ಳೆಯ ಆಫೀಸರ್, ಲೀಡರ್‌ಗಳಾಗಲಿ ಒಳ್ಳೆಯ ಸ್ಕೂಲುಗಳಿಗೆ ತಮ್ಮ ಮಕ್ಕಳನ್ನು ಸೇರಿಸುತ್ತಾರೆ. ಜೊತೆಗೆ, ಅವರಿಗೆ ಟ್ಯೂಷನ್ ಸಹ ಕೊಡಿಸುತ್ತಾರೆ. ಆದರೆ, ಹಳ್ಳಿಗಳಲ್ಲಿ ಅವರಿಗೆ ಟ್ಯೂಷನ್ ಸಿಗುವುದಿಲ್ಲ. ಮಿಡ್ಲ್‌ಸ್ಕೂಲ್ ಹೈಸ್ಕೂಲುಗಳ ಟೀಚರ್ಸ್ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ ಇದೆ. ಗುಲ್ಬರ್ಗಾ ಜಿಲ್ಲೆಯ ಮೀಸಲು ಕ್ಷೇತ್ರವಾದ ಕಮಲಾಪುರದಲ್ಲಿ ಅನೇಕ ಶಾಲೆಗಳಿಗೆ ಭೇಟಿ ಕೊಟ್ಟರೆ, ಟೀಚರ್ ಇಲ್ಲ, ನಾವು ಹೇಗೆ ಪಾಸಾಗಬೇಕು? ನಾವು ಹೇಗೆ ಮುಂದೆ ಬರಬೇಕು? ಎಂದು ವಿದ್ಯಾರ್ಥಿಗಳು ಘೇರಾವು ಮಾಡಿ ಮಾತನಾಡುತ್ತಿದ್ದಾರೆ. ಇವತ್ತು-ಹೈದರಾಬಾದ್-ಕರ್ನಾಟಕ ಹಿಂದುಳಿದ ಪ್ರದೇಶವಾಗಿದ್ದು, ಅಂಥ ಅಭ್ಯರ್ಥಿಗಳು ಇವತ್ತು ಮೈಸೂರು, ಬೆಂಗಳೂರಾಗಲಿ ಆ ಭಾಗದ ಹುಡುಗರಿಗೆ ಇವರಿಗೆ ಸಮನಾಗಿ ಮುಂದೆ ಬರಲು ಸಾಧ್ಯವಾಗುತ್ತಿಲ್ಲ. ಸರ್ಕಾರ ರೈತರ, ಕೂಲಿ ಕಾರ್ಮಿಕರ ಬಗ್ಗೆ ಕಳಕಳಿ ಇದ್ದರೆ, ಜಿಲ್ಲಾ ವೈಸ್ ನೇಮಕಾತಿಯನ್ನು ಮೆರಿಟ್ ಮೇಲೆ ಕೊಟ್ಟರೆ ಒಳ್ಳೆಯದು. ನೀವು ಮಹಿಳೆಯರಿಗೆ ಮೀಸಲಾತಿ ಕೊಟ್ಟಿದ್ದು, ಟೀಚರ್ಸ್ ಅಪಾಯಿಂಟ್ ಆಗುತ್ತಿದೆ. ಹೆಣ್ಣುಮಕ್ಕಳಿಗೆ ಮೀಸಲಾತಿ ಕೊಡಿ, ಅದಕ್ಕೆ ನನ್ನ ವಿರೋಧವಿಲ್ಲ. ಸ್ಕೂಲ್ ನಡೆಯುವುದೇ ವರ್ಷದಲ್ಲಿ 200 ದಿವಸಗಳು. ಅದರಲ್ಲಿ 50 ದಿವಸ ಭಾನುವಾರ, ಎರಡನೆ ಶನಿವಾರಗಳು ಮತ್ತು ಅನೇಕ ರಜೆ ದಿನಗಳಿರುತ್ತವೆ. ಹೆಣ್ಣುಮಕ್ಕಳು ಗರ್ಭಿಣಿಯರಾದರೆ ಇಲ್ಲವೆಂದು ಹೇಳುತ್ತಾರೆ. ಅದಕ್ಕೆ ಆ ಹೆಣ್ಣು ಮಕ್ಕಳಿಗೆ ಒಬ್ಬ ಪ್ಯೂನ್ ಕೊಟ್ಟು, ಮಗು ನೋಡಿಕೊಳ್ಳಲು ಹೇಳಿದರೆ,

ಒಳ್ಳೆಯದು. ಗ್ರಾಮೀಣ ಪ್ರದೇಶದ ಹುಡುಗರು ಮುಂದೆ ಬರಲು ಅಭ್ಯಾಸ ಮಾಡಲು ಬಹಳ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿರಬಹುದು. ಅವರಿಗೆ ಎಲ್ಲಾ ರೀತಿಯಲ್ಲೂ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಈ ವಿಚಾರ ಈಗಾಗಲೇ ಎರಡು ಗಂಟೆಗಳ ಬದಲಾಗಿ, ನಾಲ್ಕು ಗಂಟೆಗಳ ಕಾಲ ಸಮಯ ತೆಗೆದುಕೊಂಡಿದೆ. I have to follow the decision of the Business Advisory Committee.

ಶ್ರೀ ಎಸ್.ಎಸ್. ಪಾಟೀಲ್ :— ತಿದ್ದುಪಡಿ ಬಗ್ಗೆ ಮಾತನಾಡಬೇಕಲ್ಲವೆ?

ಶ್ರೀ ಹೆಚ್.ಸಿ. ಬಸವರಾಜ್ :— ನಾನೂ ಮಾತನಾಡಬೇಕಾಗಿದೆ.

ಅಧ್ಯಕ್ಷರು :— ತಿದ್ದುಪಡಿಗೆ ಬಂದಾಗ ತಾವು ಮಾತನಾಡಿ. ಮಾನ್ಯ ಬಸವರಾಜ್‌ರವರೆ, ತಾವು ಅನೇಕ ವಿಷಯಗಳ ಮೇಲೆ ಮಾತನಾಡಿದ್ದೀರಿ. ಬೇಕಾದಷ್ಟು ಸಲ ತಮಗೆ ಮಾತನಾಡಲು ಸಮಯ ಕೊಟ್ಟಿದ್ದೇನೆ. ಈಗಾಗಲೇ ನಾಲ್ಕು ಗಂಟೆಗಳ ಕಾಲ ಚರ್ಚೆಯಾಗಿದೆ. ತಾವು ಇದನ್ನೂ ಅರ್ಥ ಮಾಡಿಕೊಂಡು, ಇಂದು ಸಂಜೆಯೊಳಗೆ ಇನ್ನೂ ಮೂರು ಮಸೂದೆಗಳು ಪಾಸಾಗಬೇಕಾಗಿದೆ.

+ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಅನೇಕ ಹಿರಿಯ ಸದಸ್ಯರು ಆಸಕ್ತಿಯಿಂದ ಈ ಮಸೂದೆ ಬಗ್ಗೆ ಚರ್ಚೆ ಮಾಡಿದ್ದಷ್ಟೇ ಅಲ್ಲದೆ ಅವರಿಗಿರುವ ಕೆಲವು ಶಂಕೆಗಳನ್ನು ವ್ಯಕ್ತಪಡಿಸಿದ್ದಾರೆ. ಅದೆಲ್ಲವನ್ನೂ ನಾನು ಗಮನಿಸಿದ್ದೇನೆ. ಆದರೆ, ಉಚ್ಚ ನ್ಯಾಯಾಲಯದಲ್ಲಿ ಸರ್ಕಾರಿ ವಕೀಲರು ಸರಿಯಾಗಿ ವಾದ ಮಂಡಿಸಿಲ್ಲದಿರುವುದೂ ಪ್ರಕರಣ ಬಿದ್ದುಹೋಗಲು ಕಾರಣವೆಂದು ಹೇಳಿದ್ದಾರೆ. ಆದರೆ, ನ್ಯಾಯಾಲಯ ಹೇಳಿರುವುದು,

> ``The decision of the government to grant rural weightage was not based on data justifying rural backwardeness or inadequate representation of the rural people in the services under the State. Besides, the Advocate General himself appeared before the Court and argued the case".

In my opinion the file was available to the Court. ಮುಖ್ಯವಾಗಿ, ನಾವು ಎಲ್ಲವನ್ನೂ ವಿಧಿ-ವಿಧಾನಗಳಂತೆ ಮಾಡಬೇಕಾಗುತ್ತದೆ. ನಮ್ಮದೇ ಆದ ಸಂವಿಧಾನವಿದೆ, ನಾವು ಶಾಸನಗಳನ್ನು ರಚಿಸಿದ್ದೇವೆ, ಕಾನೂನುಗಳನ್ನು ರೂಲ್ಸ್ ರೂಪದಲ್ಲಿ ತಂದಿದ್ದೇವೆ. ಸರ್ಕಾರಕ್ಕೆ ಈ ಆಲೋಚನೆ ಬಂದಿದ್ದು, ಸರ್ವೋಚ್ಚ ನ್ಯಾಯಾಲಯ ಏಕಪೀಠ ನ್ಯಾಯಾಲಯದ

ತೀರ್ಪನ್ನು ಮತ್ತು ದ್ವಿಸದಸ್ಯ ಪೀಠದ ತೀರ್ಮಾನವನ್ನು ಎತ್ತಿ ಹಿಡಿದಿದ್ದರಿಂದಾಗಿ, ಗ್ರಾಮೀಣ ಜನರಿಗೆ ತೊಂದರೆಯಾಯಿತು ಎಂಬುದು ನಮ್ಮಂಥ ಗ್ರಾಮೀಣ ಭಾಗದಿಂದ ಬಂದವರಿಗೆ ಗೊತ್ತಿದೆ. ಸ್ವಲ್ಪವಾದರೂ ಪರಿಹಾರವನ್ನು ನಮ್ಮಿಂದ ಸಾಧ್ಯವಾದಷ್ಟು ಪ್ರಯೋಗದ ರೂಪದಲ್ಲಿ ಮಾಡಬೇಕೆಂದು ನಾವೆಲ್ಲರೂ ಸೇರಿ ಸರ್ಕಾರವಷ್ಟೇ ಅಲ್ಲ ಪ್ರತಿಪಕ್ಷದ ಮುಖಂಡರ ಜೊತೆ ಚರ್ಚಿಸಿ, ನಾವು ಈ ಮಸೂದೆಯನ್ನು ಇಲ್ಲಿ ತಂದಿದ್ದೇವೆ. ಮಸೂದೆಯನ್ನೇ ಏಕೆ ತಂದಿರಿ? ನೀವು ಕೇವಲ ರೂಲ್ಸ್‌ಗೆ ಅಮೆಂಡ್‌ಮೆಂಟ್ ಮಾಡಬಹುದಿತ್ತೆಂದು ಹಿರಿಯ ಸದಸ್ಯರಾದ ಶ್ರೀ ಬಿ. ಸೋಮಶೇಖರ್‌ರವರು ಹೇಳಿದರು. ಇದನ್ನು ಕೂಡ ನಾವು ಆಲೋಚನೆ ಮಾಡಿದ್ದೇವೆ.

2.00ಪಿ.ಎಂ.

ಇಲ್ಲಿ ಮುಖ್ಯವಾದ ಪ್ರಶ್ನೆ ಏನೆಂದರೆ, ಇದನ್ನು ಏನಾದರೂ ಮಾಡಿ 9ನೇ ಷೆಡ್ಯೂಲ್‌ಗೆ ಸೇರಿಸಲಿಕ್ಕೆ ಆಗುತ್ತದೆಯೇ? ಆಗ ರಾಷ್ಟ್ರವ್ಯಾಪ್ತಿಯಾಗಿ ಆಗಬಹುದು. ಆದ್ದರಿಂದ, ಇದು ಮಸೂದೆ ರೂಪದಲ್ಲಿ ವಿಧಾನ ಸಭೆಗಳಲ್ಲಿ ಮಂಡನೆಯಾಗಿ ಪಾಸ್ ಆದರೆ ಮುಂದೆ ಇದನ್ನು ಷೆಡ್ಯೂಲ್ ಮಾಡಿ ಎಂದು ಹೇಳುವುದಕ್ಕೆ ಒಂದು ಆಧಾರ ಆಗಿರುತ್ತದೆ. Now it is limited to the State and its activities. ಇದು ಲಿಮಿಟೆಡ್ ಆದರೂ ಕೂಡ ಶಾಸನ ತಂದು ಮಾಡಿದ್ದಾರೆನ್ನುವ ಒಂದು ಅಭಿಪ್ರಾಯ ಬಂದರೆ, ಎಲ್ಲರ ಅಭಿಪ್ರಾಯವನ್ನು ನಾವು ರಿಫ್ಲೆಕ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಮನಸ್ಸಿಗೆ ಬಂದಿದ್ದನ್ನು ಆಲೋಚಿಸಿ ಮಸೂದೆ ಮಂಡನೆ ಮಾಡುವುದಕ್ಕೆ ನಾನು ಪ್ರಯತ್ನಿಸಿದ್ದೇನೆ. ಈ ಪ್ರಯತ್ನದಲ್ಲಿ ಬಹಳ ಮುಖ್ಯವಾಗಿರುವುದು ಏನೆಂದರೆ, ಮೊದಲು ಒಂದು ಪ್ರದೇಶವನ್ನು ಗುರುತಿಸುವಾಗ we have not institutionalised that. Geographical contiguity- ಫಿಕ್ಸ್ ಮಾಡಲಿಲ್ಲ, ಚಾರಿತ್ರಿಕ ಹಿನ್ನೆಲೆಯನ್ನು ಇಟ್ಟುಕೊಂಡು ತೀರ್ಮಾನಿಸಿದೆವು. ಆಗ ಅದು ಆ ಕಾಲಕ್ಕೆ ಸರಿಹೋಯಿತು. ಆಗ 20, 50, ಸಾವಿರ ಜನಸಂಖ್ಯೆ ಎಂದು ಮಾಡಿದ್ದೆವು. ಜನಸಂಖ್ಯಾಧಾರದ ಮೇಲೆ ಆಗಬಾರದು ನಾವೇ ಗುರುತಿಸಿಕೊಂಡಿರತಕ್ಕಂಥ ಸಂವಿಧಾನ ಬದ್ಧವಾಗಿರತಕ್ಕಂಥ ಸಂಸ್ಥೆಗಳು ಏನಿವೆ ಅವುಗಳನ್ನು ಗುರುತಿಸಿದರೆ ಒಂದು ಸ್ವಲ್ಪ ಪ್ರಮಾಣದಲ್ಲಿ ನಮ್ಮ ಕೆಲಸ ಹಗುರವಾಗಬಹುದು ಎನ್ನುವ ದೃಷ್ಟಿಯಿಂದ ಗ್ರಾಮ ಪಂಚಾಯಿತಿಯಿಗಳನ್ನು ಮೂಲ ಘಟಕಗಳನ್ನಾಗಿಟ್ಟುಕೊಂಡು ಇದರ ವ್ಯಾಪ್ತಿಯನ್ನು ವಿಸ್ತರಿಸಬೇಕು ಎನ್ನುವ ಆಲೋಚನೆಯನ್ನು ಮಾಡಿದೆವು. ಪುನಃ ನಾನು ವಿವರವಾದ ಚರ್ಚೆಗೆ ಹೋಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ರೂರಲ್ ರವರಿಗೆ 10 ಮಾರ್ಕ್ಸ್ ಕೊಡಬೇಕು ಎಂದು ಪ್ರಸ್ತಾಪಿಸಿದರು. ಇದರಲ್ಲಿ ಪ್ರೊಪೋಷನಲ್ ರಿಸರ್ವೇಷನ್ ಮಾಡುವುದಕ್ಕೆ ಬರುವುದಿಲ್ಲ ಎಂದು ನಿರ್ದಿಷ್ಟವಾಗಿ ಸರ್ವೋಚ್ಚ ನ್ಯಾಯಾಲಯದವರು ಹೇಳಿರುವುದರಿಂದ ನಾವು ಏನಾದರೂ ಮಾಡಿ ಹಾರಿಜಾಂಟಲ್ ರಿಸರ್ವೇಷನ್ ಮಾಡಿಕೊಳ್ಳಬೇಕು, ಇದರಲ್ಲಿ ಕೂಡ ಸಾಕಷ್ಟು ಮೀಸಲಾತಿಗಳು ಬಂದಿವೆ. ಇದರಲ್ಲಿ ಬಹಳ ಮುಖ್ಯವಾಗಿರುವುದನ್ನು ನಾನು ಹಿಂದೆ ಹೇಳಿದ್ದೇನೆ. ಹೆಣ್ಣು ಮಕ್ಕಳಿಗೆ

30 ಪರ್ಸೆಂಟ್, ಮಾಜಿ ಸೈನಿಕರಿಗೆ 10 ಪರ್ಸೆಂಟ್, ಅಂಗವಿಕಲರಿಗೆ 5 ಪರ್ಸೆಂಟ್, ಪ್ರಾಜೆಕ್ಟ್ ಡಿಸ್‌ಪ್ಲೇಸ್ ಪರ್ಸನ್ಸ್‌ಗೆ 5 ಪರ್ಸೆಂಟ್ ಇರಬೇಕು, ಇವು ಒಟ್ಟಾರೆ ನೂರು ಹುದ್ದೆ ಇದ್ದರೆ ಶೇಕಡ 50ರಷ್ಟು ಹುದ್ದೆಗಳನ್ನು ಇವರಿಗಾಗಿ ಮೀಸಲಿಡಬೇಕು ಎಂದು ಹೇಳಿದ್ದಾರೆ. ನಾವು ಈಗ ಏನು ಹೇಳುತ್ತೇವೆಂದರೆ, ಇವರನ್ನು ಸೇರಿಸಿಕೊಂಡು ಗ್ರಾಮೀಣ ಪ್ರದೇಶಕ್ಕೆ ಶೇಕಡ 25ರಷ್ಟು ಮೀಸಲಾತಿ ನೀಡಿ ಪ್ರಯೋಗ ಮಾಡೋಣವೆಂದು ಇದನ್ನು ಮಾಡಿದ್ದೇವೆ. ಇದಕ್ಕೆ ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್. ಪಾಟೀಲ್‌ರವರು, ಹೇಗೋ ಮಾಡುತ್ತಿದ್ದೀರಿ, ಇದನ್ನೇ 60:40, 70:30 ಮಾಡಿ ಎಂದು ಸಲಹೆ ಮಾಡಿದರು. ನಾನು ಇದರ ಬಗ್ಗೆ ವಿಚಾರಮಾಡಿ ನೋಡಿದೆ. ಸಂವಿಧಾನದ ಆರ್ಟಿಕಲ್ 16(1) ನಲ್ಲಿ ಹೇಳಿರುವುದನ್ನು ನಾನು ಇಲ್ಲಿ ಹೇಳುತ್ತೇನೆ.

> ``There shall be equality of opportunity for all citizens in matters relating to employment or appointment to any office under the State."

ಈ ಕ್ಲಾಸ್‌ನಲ್ಲಿ ನಾವು ಇದನ್ನು ಮಾಡುವುದಕ್ಕೆ ಪ್ರಯತ್ನಿಸಿದ್ದೇವೆ. ಆದರೆ 16(4) ನಲ್ಲಿ ಏನು ಹೇಳುತ್ತಾರೆಂದರೆ,

> ``Nothing in this article shall prevent the State from making any provision for the reservation of appointments or posts in favour of any backward class of citizens which, in the opinion of the State, is not adequately represented in the services under the State".

ಆದರೆ, ಗ್ರಾಮೀಣ ಪ್ರದೇಶವನ್ನು ಒಂದು ಕ್ಲಾಸ್ ಎಂದು ನೋಡುವುದಕ್ಕಾಗುವುದಿಲ್ಲ. ಕೆಲವರು ಮಹಾರಾಷ್ಟ್ರದ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದರು, ಒಂದು ಭಾಗವನ್ನು ತೆಗೆದು ಮೀಸಲಾತಿ ಕೊಡುವಂಥ ವಿಶೇಷವಾದ ಪ್ರಯತ್ನಗಳು ನಡೆದಿವೆ. ಉದಾಹರಣೆಗೆ ನಾರ್ಥ್ ಈಸ್ಟರ್ನ್ ರಾಜ್ಯಗಳಲ್ಲಿ ಆಗಿದೆ. ಅದನ್ನು ಮಾಡುವುದರಿಂದ ನಾವು ಇಲ್ಲಿ ಯಾವುದಾದರೊಂದು ಏರಿಯಾವನ್ನು ಪ್ರಿಸರ್ವ್ ಮಾಡಬೇಕಾಗುತ್ತದೆ. ರಾಜ್ಯವ್ಯಾಪ್ತಿಯಾಗಿ ಮಾಡುವುದಾದರೆ ನಾವು ಯಾವುದಾದರೊಂದು ಹೊಸ ಆಲೋಚನೆ ಮಾಡಬೇಕಾಗುತ್ತದೆ. ನಾನು ಇದನ್ನು ಬಹಳ ಬುದ್ಧಿವಂತಿಕೆಯಿಂದ, ಬಹಳಷ್ಟು ಶ್ರಮಿಸಿ ಏನೋ ಒಂದು ಕಾಯಿದೆ ತಂದಿದ್ದೇವೆಂದು ಅಂದುಕೊಳ್ಳುವುದಿಲ್ಲ. This is also subject to correctives. ಮುಂದೆ ನಾವು ಈ ಪ್ರಯೋಗದಲ್ಲಿ ಯಶಸ್ವಿಯಾದರೆ, ತಾವು ಹೇಳಿದ ಹಾಗೆ ಇದನ್ನು ವಿಸ್ತರಿಸುವ ಆಲೋಚನೆ ಮಾಡಬಹುದು. ಆದ್ದರಿಂದ, ಈಗ ನಾನೇನು ಪ್ರಾಯೋಗಿಕವಾಗಿ

ಈ ಮಸೂದೆಯನ್ನು ತಂದಿದ್ದೇನೆ ಇದಕ್ಕೆ ತಾವು ಎಲ್ಲರೂ ಸಮ್ಮತಿಸಬೇಕೆಂದು ಕೋರುತ್ತೇನೆ. ಈಗಾಗಲೇ ನೇಮಕಾತಿಯನ್ನು ನಿಲ್ಲಿಸಿದ್ದಾರೆನ್ನುವ ಅಪಾದನೆ ಕೂಡ ನಮ್ಮ ಮೇಲಿದೆ. ಇದಕ್ಕೆ ಗ್ರಾಮೀಣ ಕೃಪಾಂಕ ಇಲ್ಲದೇ ಇರುವುದರಿಂದ ಈ ರೀತಿಯಾಯಿತೆಂದು ಹೇಳಿದ್ದೇವೆ. ಕೃಪಾಂಕವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಜಡ್ಜ್‌ಮೆಂಟ್‌ನ್ನು ನೋಡಿ, ಈ ಒಂದು ಹಾರಿಜೆಂಟಲ್ ಮೀಸಲಾತಿಯನ್ನು ತಂದಿದ್ದೇವೆ. ನಾನು ಮತ್ತೊಮ್ಮೆ ಹೇಳುವುದಾದರೆ, ಇದನ್ನು ಪ್ರಾಯೋಗಿಕವಾಗಿ ತಂದಿದ್ದೇವೆಯೇ ವಿನಾಃ ಇದೇ ಅಂತಿಮ ವಿನಲ್ಲ. ಪುನಃ ನಿಮ್ಮಗಳ ಜೊತೆಗೆ ಚರ್ಚಿಸಿ ಇದನ್ನು ವಿಸ್ತರಿಸುವುದಕ್ಕೆ ಸಾಧ್ಯವಿದ್ದರೆ ಅದನ್ನು ಮಾಡುತ್ತೇವೆ. ಶ್ರೀಮಾನ್ ಜಗದೀಶ್ ಶೆಟ್ಟರ್ ಅವರು ಇಲ್ಲಿ ಇದ್ದಾರೆ, ಇದನ್ನು ಏನಾದರೂ ಸಂವಿಧಾನಾತ್ಮಕವಾಗಿ ತರುವುದಕ್ಕೆ ಅವಕಾಶವಿದ್ದರೆ ಒಂದು ಠರಾವು ಅನ್ನು ಇಲ್ಲಿ ಮಂಡಿಸಿ ಇದನ್ನು ಪಾಸ್ ಮಾಡಬಹುದು ಎಂದು ಮಾನ್ಯ ಸಿಂಧ್ಯಾರವರು ಸಹ ಸಲಹೆ ಕೊಟ್ಟಿದ್ದಾರೆ. ಇವೆನ್ನೆಲ್ಲಾ ನಾನು ಗಮನದಲ್ಲಿಟ್ಟುಕೊಂಡು ಮುಂದೆ ವಿಸ್ತೃತವಾದ ಹಾಗೂ ವ್ಯಾಪಕವಾದ, ವಿಶೇಷವಾದ ಕಾನೂನಿನ ತೊಡಕನ್ನು ಬಗೆಹರಿಸಿಕೊಂಡು ಮುಂದೆ ಒಳ್ಳೆಯ ಶಾಸನ ತರುವುದಕ್ಕೆ ನಾನು ಪ್ರಾಮಾಣೀಕವಾದ ಪ್ರಯತ್ನ ಮಾಡುತ್ತೇನೆಂದು ಈ ಸದನದ ಎಲ್ಲಾ ಸದಸ್ಯರಿಗೂ ಭರವಸೆ ನೀಡುತ್ತೇನೆ. ಸಧ್ಯಕ್ಕೆ ಈಗ ತಂದಿರುವ ಮಸೂದೆಯನ್ನು ಒಪ್ಪಿಕೊಂಡು ಪಾಸ್ ಮಾಡಬೇಕೆಂದು ಕೋರುತ್ತೇನೆ. ಇದರ ಅವಶ್ಯಕತೆ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ, ಆದರೆ ಇದಕ್ಕಿರುವ ಇತಿಮಿತಿಗಳೇನು ಎಂಬುದು ಕೂಡ ಗೊತ್ತಿದೆ. ಆ ಒಂದು ಇತಿಮಿತಿಯ ವ್ಯಾಪ್ತಿಯ ಒಳಗೆ ಇದನ್ನು ಮಾಡುವುದಕ್ಕೆ ಪ್ರಯತ್ನಿಸಿದ್ದೇನೆ. ಆದ್ದರಿಂದ, ಇದಕ್ಕೆ ತಾವು ಎಲ್ಲರೂ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಅಧ್ಯಕ್ಷರು :— ಅಫೀಷಿಯಲ್ ಅಮೆಂಡ್‌ಮೆಂಟ್ ಒಂದು ಬಂದಿದೆ, ಅವರೊಂದು ಅಮೆಂಡ್‌ಮೆಂಟ್ ಕಳುಹಿಸಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಆ ಸಂಬಂಧವಾಗಿ ಹೇಳುವುದಾದರೆ, ನಾನು ಮೊದಲು ಶೇಕಡ 10ರಷ್ಟು ಎಂದು ಆಲೋಚನೆ ಮಾಡಿದ್ದೆ, ಇಲ್ಲಿ ನಡೆದಂಥ ಚರ್ಚೆಯ ಸ್ವರೂಪವನ್ನು ನೋಡಿದ ಮೇಲೆ ಅದನ್ನು 25 ರಷ್ಟು ಮಾಡಬೇಕು ಎನ್ನುವ ಅಹವಾಲನ್ನು ಇಟ್ಟರು. ಆದ್ದರಿಂದ, ತಾವು ಮೊದಲು ಅಫೀಷಿಯಲ್ ಅಮೆಂಡ್‌ಮೆಂಟ್‌ನ್ನು ಒಪ್ಪಿಕೊಳ್ಳಬೇಕೆಂದು ನಾನು ಮೂವ್ ಮಾಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅಮೆಂಡ್‌ಮೆಂಟಿಗೆ ನಾವು ಒಪ್ಪುತ್ತೇವೆ ಎನ್ನುವುದಾದರೆ, ಈ ಹಂತದಲ್ಲಿಯೇ ಬೇರೆ ವ್ಯತ್ಯಾಸವನ್ನು ಇಟ್ಟುಕೊಂಡಿದ್ದೇವೆಂದು ಹೇಳಿದರೆ, ನಾನು ಅತ್ಯಂತ ಪ್ರಾಮಾಣೀಕವಾದ ಕೆಲವು ಅಭಿಪ್ರಾಯಗಳನ್ನು ಕೊಡಬೇಕಾಗುತ್ತದೆ. ನಮ್ಮ ಪಕ್ಷದ ನಾಯಕನಾಗಿ ಹಾಗೂ ನಮ್ಮ ಪಕ್ಷದ ಅಭಿಪ್ರಾಯಗಳನ್ನು ಕೊಡಬೇಕಾಗುತ್ತದೆ. ನಮ್ಮ ಪಕ್ಷದ

ನಾಯಕನಾಗಿ ಹಾಗೂ ನಮ್ಮ ಪಕ್ಷದ ಅಭಿಪ್ರಾಯಗಳನ್ನು ನಾನು ಇಲ್ಲಿ ಪ್ರತಿಬಿಂಬಿಸದೇ ಹೋದರೆ ನನ್ನ ಕರ್ತವ್ಯದಲ್ಲಿ ಚ್ಯುತಿಯಾಗುತ್ತದೆಂದು ತಿಳಿದುಕೊಂಡು ನಾನು ತಮ್ಮ ಅಪ್ಪಣೆಯನ್ನು ಕೇಳುತ್ತಿದ್ದೇನೆ. ನಾನು ಹೇಳುವುದಕ್ಕೆ ಮುಂಚಿತವಾಗಿ ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳುತ್ತಾರೆ, ನಂತರ ನಾನು ಸರ್ಕಾರದವರು ಏನು ಮಾಡಬಹುದು ಎನ್ನುವುದಕ್ಕೆ ಕೆಲವು ಅಭಿಪ್ರಾಯಗಳನ್ನು ವ್ಯಕ್ತ ಮಾಡಲಿಚ್ಛಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಅಧ್ಯಕ್ಷರೆ, ಮೊದಲನೆಯದಾಗಿ ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ಬಂಗಾರಪ್ಪನವರಿಗೆ ಅಭಿನಂದನೆಗಳನ್ನು ಹಾಗೂ ಕೃತಜ್ಞತೆಗಳನ್ನು ನಾನು ಸಲ್ಲಿಸುತ್ತೇನೆ. ಪ್ರಥಮಬಾರಿಗೆ ಹಳ್ಳಿಯ ಕಡೆ ನೋಡಿ 15 ಪರ್ಸೆಂಟ್ ಮೀಸಲಾತಿ ಕೊಟ್ಟಂಥವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅವರು 15 ಪರ್ಸೆಂಟ್ ಮಾಡಿದ್ದರು, ನಾನು ಎಲ್ಲಾ ವಾದ ಮಾಡಿ ನಮ್ಮ ಸಂಪುಟದಲ್ಲಿ ಅದನ್ನು 10 ಪರ್ಸೆಂಟ್ ಮಾಡಿದೆವು. ಬೇಕಾದರೆ ತೆಗೆದು ನೋಡಿ, 15 ಮಾರ್ಕ್ಸ್ ಎನ್ನುವುದಾದರೆ ಒಬ್ಬ ಹಳ್ಳಿಯವನಿಗೂ ಸಿಗುತ್ತಿರಲಿಲ್ಲ. 15 ಪರ್ಸೆಂಟ್ ಮಾಡಿ ಮೆರಿಟ್ ಮೇಲೆ ನೇಮಕಾತಿ ಮಾಡಿದ್ದರಿಂದ ಸಾಮಾನ್ಯವಾಗಿ 70 ಪರ್ಸೆಂಟ್ ಹಳ್ಳಿ ಮಕ್ಕಳು ಸರ್ಕಾರಿ ಅಥವಾ ಮತ್ತೊಂದರಲ್ಲಿ ನೌಕರಿ ಸಿಗುವಂಥ ಅವಕಾಶವಾಯಿತು. ನಂತರ ಅದನ್ನು ಹೇಗೋ 5 ಪರ್ಸೆಂಟ್‌ಗೆ ಇಳಿಸಿದರು. ಮುಂದೆ ನಮ್ಮ ಸರ್ಕಾರ ಬಂದಮೇಲೆ ನಮ್ಮೆಲ್ಲರ ಹಿರಿಯರಾಗಿ ಮಾನ್ಯ ದೇವೇಗೌಡರವರು ಪ್ರಧಾನ ಮಂತ್ರಿಗಳಾಗುವುದಕ್ಕಿಂತ ಮುಂಚೆ ಅವರು ಮುಖ್ಯಮಂತ್ರಿಗಳಾಗಿದ್ದಾಗ ಅವರು ಏನು ಮಾಡಿದರು ಎಂದರೆ....

ಶ್ರೀ ಕೆ.ಹೆಚ್. ರಂಗನಾಥ್ ನಮ್ಮ ಸರ್ಕಾರ, ನಮ್ಮ ಸರ್ಕಾರ ಎಂದು ಹೇಳದೇ ಜನತಾದಳದ ಸರ್ಕಾರ ಎಂದು ಹೇಳಬೇಕು.

ಶ್ರೀ ಎಸ್. ಎಸ್. ಪಾಟೀಲ್ :— ಆಯಿತು, ಜನತಾದಳ ಸರ್ಕಾರ. ನಿಮ್ಮ ಸರ್ಕಾರ ಅಂದ ಕೂಡಲೇ ಕಾಂಗ್ರೆಸ್ ಸರ್ಕಾರ ಎಂದು ಕರೆಯಬೇಕಾಗುತ್ತದೆ, ನಿಮ್ಮ ಸರ್ಕಾರ ಅನ್ನುವುದರ ಬದಲು ಕಾಂಗ್ರೆಸ್ ಸರ್ಕಾರ ಎಂದು ನಾವು ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಎಂದು ಹೇಳಿದರೆ ತಪ್ಪೇನೂ ಇಲ್ಲ. ಅವರು 15 ಪರ್ಸೆಂಟ್ ಮಾಡಿದ್ದು ಒಳ್ಳೆಯದಾಗಿತ್ತು, ಮುಂದೆ ಅದು ಹೇಗೋ 5 ಪರ್ಸೆಂಟ್‌ಗೆ ಇಳಿದಿತ್ತು. ನಮ್ಮ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾದಾಗ ಹಳ್ಳಿ ಮಗ ಏನು ಮಾಡಿದರು ಎಂದು ಮಾನ್ಯ ರಾಮಯ್ಯನವರಿಗೆ ಒತ್ತಿ ಒತ್ತಿ ಹೇಳುತ್ತೇನೆ. ಅದನ್ನು 10 ಪರ್ಸೆಂಟ್ ತಂದು ಮೆರಿಟ್ ಮೇಲೆ ಟೀಚರ್ಸ್‌ನ್ನು ಅಪಾಯಿಂಟ್ ಮಾಡಿದೆವು.

ಶ್ರೀ ವೈ.ಕೆ. ರಾಮಯ್ಯ :— ಹಳ್ಳಿಯವರಿಗೆ ಒಳ್ಳೆಯದು ಮಾಡಬೇಕು ಎನ್ನುವುದು ಯಾರದೂ ಗುತ್ತಿಗೆ ಅಲ್ಲ.

ಶ್ರೀ ಎಸ್.ಎಸ್. ಪಾಟೀಲ್ :— ಬಹಳ ಸಂತೋಷ. ನಾವು 10 ಪರ್ಸೆಂಟ್ ಮಾಡಿ ಮೆರಿಟ್ ಮೇಲೆ ನೇಮಕಾತಿ ಮಾಡಿದ್ದಕ್ಕೆ ನೂರಕ್ಕೆ 60ರಿಂದ 70 ಜನ ಹಳ್ಳಿ ಮಕ್ಕಳು ಇವತ್ತು ಸರ್ಕಾರಿ ನೌಕರಿಯನ್ನು ಕಾಣಬೇಕಾಯಿತು. 15 ಪರ್ಸೆಂಟ್ ಎಸ್.ಸಿ, 3 ಪರ್ಸೆಂಟ್ ಎಸ್.ಟಿ., 32 ಪರ್ಸೆಂಟ್ ಆಯಿತು. 15 ಪರ್ಸೆಂಟ್ ಎಸ್.ಸಿ.ಗೆ ಎಂದು ನೀವೇನು ಹೇಳುತ್ತೀರಿ ಇದರಲ್ಲಿ ಹಳ್ಳಿಯ ಎಷ್ಟು ಹರಿಜನರಿಗೆ ಕೆಲಸ ಸಿಕ್ಕಿದೆ? ಯಾರಿಗೂ ಸಿಕ್ಕಿಲ್ಲ, ಎಲ್ಲೋ ಒಬ್ಬ ಮಹಾನುಭಾವನಿಗೆ ಕೆಲಸ ಸಿಕ್ಕಿರಬಹುದು. ಇವರು ತಂದಿರತಕ್ಕಂಥ ಬಿಲ್‌ನಿಂದ ಹಳ್ಳಿಯಲ್ಲಿರತಕ್ಕಂಥ ಹರಿಜನ ಅಥವಾ ಸಾಮಾನ್ಯ ವರ್ಗದ ಜನರಿಗೆ ಯಾವುದೇ ರೀತಿಯಿಂದಲೂ ಸಹ ಅನುಕೂಲವಾಗುವುದಿಲ್ಲ. ಏನೋ ಒಂದು ದೃಷ್ಟಿ ಇಟ್ಟುಕೊಂಡು ಬಹಳ ಧೈರ್ಯ ಮಾಡಿ ಈ ಬಿಲ್‌ನ್ನು ತಂದಿರತಕ್ಕಂಥಾದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಆದರೆ ಇದರಲ್ಲಿ ಸಾಮಾಜಿಕ ನ್ಯಾಯವನ್ನು ಒದಗಿಸಿಲ್ಲ. ಇವತ್ತಿನ ದಿವಸ ಐದು ಜನರ ನೇಮಕಾತಿಯಲ್ಲಿ ಒಂದು ಹುದ್ದೆ ಹರಿಜನರಿಗೆ ಇದ್ದರೆ, ಅದು ಹಳ್ಳಿಯಲ್ಲಿರತಕ್ಕಂಥ ಹರಿಜನರಿಗೆ ಸಿಗುತ್ತಿಲ್ಲ. ಇದು ಮತ್ತೆ ಪಟ್ಟದಲ್ಲಿರುವವರಿಗೆ ಹೋಗುತ್ತದೆ. ಜನಸಂಖ್ಯೆ ಆಧಾರದ ಮೇಲೆ ಇದನ್ನು ಮಾಡಿದರೆ ಇದು ಕೋರ್ಟ್‌ಗೆ ಹೋಗುತ್ತದೆ ಎಂದು ಹೇಳುವುದನ್ನು ನೀವು ಮೊದಲು ಬಿಡಿ. ಇದು ಕೋರ್ಟ್‌ಗೆ ಹೋಗದೆ ಇರುವುದಕ್ಕೆ ಏನು ಮಾಡಬೇಕೋ ಅದನ್ನು ಮಾಡಿದರೆ ಆಯಿತು. ಈಗ ಜನಸಂಖ್ಯೆ ಆಧಾರದ ಮೇಲೆ ಏನು 25 ಪರ್ಸೆಂಟ್ ಮಾಡುತ್ತೇವೆಂದು ತಾವು ಹೇಳುತ್ತಿದ್ದೀರಿ ಆದ್ದರಿಂದ ಇದನ್ನು 25ರ ಬದಲಿಗೆ 70 ಪರ್ಸೆಂಟ್ ಮಾಡಿದರೆ ಒಳ್ಳೆಯದು. ಈಗ ತಾವು ತಂದಿರತಕ್ಕಂಥ ಬಿಲ್ ಯಾವ ರೀತಿ ಎಂದರೆ, ಮೀಸಲಾತಿಯಲ್ಲಿಯೇ ಮತ್ತೆ ಮೀಸಲಾತಿ ಕೊಟ್ಟಿದ್ದೀರಿ. ಈಗಾಗಲೇ ಕೊಡುತ್ತಿರುವ 50 ಪರ್ಸೆಂಟ್ ಮೀಸಲಾತಿಯ ಒಳಗಡೆ ಇದು ಇದೆ. ಈಗ ಇರತಕ್ಕಂಥ 50 ಪರ್ಸೆಂಟ್ ಮೀಸಲಾತಿ ಮೀರುತ್ತಿಲ್ಲ. ಇವತ್ತಿನದಿವಸ ಹಳ್ಳಿ ಜನರ ಬಗ್ಗೆ ಸರ್ಕಾರಕ್ಕೆ ಒಳ್ಳೆಯ ಬುದ್ಧಿ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಸಚಿವರಾಗಿರತಕ್ಕಂಥ ವಿಶ್ವನಾಥ್‌ರವರು ಹಳ್ಳಿಯ ಜನರಿಗೆ ಯಾವರೀತಿ ಅನ್ಯಾಯ ಮಾಡಿದ್ದಾರೆ ಎಂದರೆ, ಹಳ್ಳಿಯಲ್ಲಿರತಕ್ಕಂಥ ಜೂನಿಯರ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಇಲ್ಲವೆಂದು ಈ ಎಲ್ಲಾ ಕಾಲೇಜುಗಳನ್ನು ತೆಗೆದುಕೊಂಡು ಹೋಗಿ ಪಟ್ಟಣಕ್ಕೆ ಹಾಕಿದ್ದಾರೆ. ಮಾನ್ಯ ಸಚಿವರು ಸಹ ಹಳ್ಳಿಯಿಂದ ಬಂದರೂ ಇವತ್ತಿನದಿವಸ ಹಳ್ಳಿಯ ಜನರಿಗೆ ಅನ್ಯಾಯ ಮಾಡಿದ್ದಾರೆ. ಈಗಾಗಲೇ ಕೆಲವು ಮಾನ್ಯ ಸದಸ್ಯರು ಹೇಳಿರುವ ಹಾಗೆ ಒಬ್ಬ ವಿದ್ಯಾರ್ಥಿ 7ನೇ ತರಗತಿಯವರೆಗೆ ಹಳ್ಳಿಯಲ್ಲಿ ಓದಿ, ಅನಂತರ ಹಳ್ಳಿಯಲ್ಲಿ ಹೈಸ್ಕೂಲ್ ಇಲ್ಲದೇ ಇರುವುದರಿಂದ ಪಟ್ಟಣದಲ್ಲಿರತಕ್ಕಂಥ ಹೈಸ್ಕೂಲ್‌ನಲ್ಲಿ ವಿದ್ಯಾಭ್ಯಾಸ ಮಾಡಬೇಕಾಗಿರತಕ್ಕಂಥ ಪ್ರಸಂಗ ಇವತ್ತಿನ ದಿವಸ ಎಲ್ಲಾ ಕಡೆ ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ ಈ ಮಕ್ಕಳಿಗೆ ಅನಿವಾರ್ಯವಾಗಿ ಮೀಸಲಾತಿ ಸಿಗುವುದಿಲ್ಲ. ಹಳ್ಳಿಗಳಲ್ಲಿರತಕ್ಕಂಥ ಜೂನಿಯರ್ ಕಾಲೇಜುಗಳನ್ನು ತೆಗೆದುಕೊಂಡು ಪಟ್ಟಣಕ್ಕೆ ಶಿಫ್ಟ್ ಮಾಡುವ ಬದಲು ಡಿಗ್ರಿ ಕಾಲೇಜುಗಳನ್ನು ಶಿಫ್ಟ್

ಮಾಡಿದರೆ ಜನ ನಿಮಗೆ ಕೈ ಮುಗಿಯುತ್ತಾರೆ. ಈ ರೀತಿ ಮಾಡಿರುವುದು ಸರಿ ಇಲ್ಲವೆಂದು ನಿಮ್ಮ ಮನಸ್ಸಿಗೆ ಬಂದಿದೆ. ಆದರೆ ದುರ್ದ್ಯೆವದಿಂದ ಏಕೆ ಈ ರೀತಿಯಾಗಿ ಮಾಡಿದ್ದಾರೆ ಎಂಬುದು ನನಗೆ ತಿಳಿಯುತ್ತಿಲ್ಲ. ಈಗಾಗಲೇ ಜನಸಂಖ್ಯೆ 60ಕ್ಕಿಂತ ಮೇಲೆ ಇದೆ ಎಂದು ತಾವು ಹೇಳುತ್ತಿದ್ದೀರಿ. ಈಗಾಗಲೇ ರೈತರಿಗೆ ಯಾವ ರೀತಿ ಅನ್ಯಾಯವಾಗುತ್ತಿದೆ ಎಂಬುದನ್ನು ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ನಾನು ಎಲ್ಲಾ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಾವು ಕೇವಲ ನೇಮಕಾತಿಗೋಸ್ಕರ ಇದನ್ನು ಕೇಳುತ್ತಿಲ್ಲ. ಇವತ್ತಿನ ದಿವಸ ಒಬ್ಬ ಹಳ್ಳಿಯ ಹುಡುಗನಿಗೆ ಎಂ.ಬಿ.ಬಿ.ಎಸ್. ಅಥವಾ ಕೃಷಿ ಪದವಿ ಓದುವುದಕ್ಕೆ ಅವಕಾಶ ಸಿಗುತ್ತಿಲ್ಲ. ಕೃಷಿ ವಿಶ್ವ-ವಿದ್ಯಾನಿಲಯಕ್ಕೆ ಅಡ್ಮಿಷನ್ ಆಗಬೇಕಾದರೆ 90 ಪರ್ಸೆಂಟ್ ಇರಬೇಕೆಂದು ಹೇಳುವುದರಿಂದ, ಇವತ್ತಿನದಿವಸ ಹಳ್ಳಿಯ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತಿಲ್ಲ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೃಷಿಕರ ಮಕ್ಕಳಿಗೆ ಒಂದು ಅಥವಾ ಎರಡು ಸೀಟ್ ಇದ್ದರೂ ಸಹ, ಈ ಸೀಟ್‌ಗಳು ನಿಜವಾದ ಹಳ್ಳಿ ಹುಡುಗರಿಗೆ ಸಿಗುತ್ತಿಲ್ಲ. ಕಾರಣ ಏನೆಂದರೆ, ಕೆಲವರು ಪಟ್ಟಣದಲ್ಲಿಯೇ ಇದ್ದುಕೊಂಡು, ನಮ್ಮ ಅಪ್ಪನ ಆಸ್ತಿ ಹಳ್ಳಿಯಲ್ಲಿದೆ ಇದೆ ಎಂದು ಸುಳ್ಳು ಪ್ರಮಾಣ ಪತ್ರವನ್ನು ತೆಗೆದುಕೊಂಡು ಬಂದು ಇಂಥ ಸೀಟ್‌ಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇದು ಎಲ್ಲರಿಗೂ ಕೂಡ ಗೊತ್ತಿರತಕ್ಕಂಥ ವಿಷಯವಾಗಿದೆ. ಈ ರೀತಿಯಾಗಿ ಹಳ್ಳಿಯ ಜನರಿಗೆ ಅನ್ಯಾಯವಾಗುತ್ತಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಹಳ್ಳಿಯ ಜನರಿಗೆ ಅನ್ಯಾಯ ಆಗುತ್ತಿತ್ತು. ಆದರೆ ಈಗ ಸ್ವಾತಂತ್ರ್ಯ ಬಂದರೂ ಕೂಡ ಈ ರಾಷ್ಟ್ರದಲ್ಲಿ ಇನ್ನು ಹಳ್ಳಿ ಜನರಿಗೆ ಅನ್ಯಾಯವಾಗುತ್ತಿದೆ. ಹಳ್ಳಿ ಜನರಲ್ಲಿ ಹರಿಜನ, ಬ್ರಾಹ್ಮಣ ಮತ್ತು ಇತರರೆಂದು ಯಾವುದೇ ರೀತಿಯ ಜಾತಿ ಇಲ್ಲ. ಬೇಸಾಯ ಮಾಡತಕ್ಕಂಥ ಎಲ್ಲರೂ ಸಹ ಇದರಲ್ಲಿ ಸೇರಿದ್ದಾರೆ. ಈಗ ತಾವು ತಂದಿರತಕ್ಕಂಥ ಬಿಲ್‌ನಲ್ಲಿ ಮೀಸಲಾತಿಯನ್ನು 10 ರಿಂದ 25 ಪರ್ಸೆಂಟ್ ಮಾಡುತ್ತೇವೆಂದು ಈಗ ಹೇಳುತ್ತಿದ್ದೀರಿ. ಇವತ್ತಿನದಿವಸ 10 ಮಾಡಿ ಅಥವಾ 25 ಮಾಡಿದರೂ ಸಹ ಇದು ಕೋರ್ಟಿಗೆ ಹೋಗುತ್ತದೆ. ಆದ್ದರಿಂದ ನಾನು ನಿಶ್ಚಿತವಾಗಿ ಹೇಳುವುದೇನೆಂದರೆ, ದಯವಿಟ್ಟು ನಮ್ಮ ಜನಸಂಖ್ಯೆ ಪ್ರಕಾರ ಇದನ್ನು 70 ಪರ್ಸೆಂಟ್ ಮಾಡಿ. ಈ ರೀತಿ ಮಾಡಿದರೆ ಮಾತ್ರ ಹಳ್ಳಿಯ ಜನರಿಗೆ ನ್ಯಾಯ ಒದಗಿಸಿಕೊಟ್ಟಂತೆ ಆಗುತ್ತದೆ. ಇಲ್ಲದಿದ್ದರೆ ಖಂಡಿತವಾಗಿಯೂ ಕೂಡ ಹಳ್ಳಿಯ ಜನರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಮಾನ್ಯ ಅಧ್ಯಕ್ಷರು ಸಹ ಹಳ್ಳಿಯಿಂದ ಬಂದವರಾಗಿರುವುದರಿಂದ ಇದನ್ನು ತಾವು ಒಪ್ಪಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ತಮಗೆ ಗೊತ್ತಿರುವ ಹಾಗೆ, ನಾವು ಬಹಳ ದೂರದಿಂದ ನಡೆದುಕೊಂಡು ಬಂದು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇವೆ. ಈ ಸಂದರ್ಭದಲ್ಲಿ ನಮಗೆ ಯಾರು ಸಹಿತ ಎರಡು ರೂಪಾಯಿಯನ್ನು ಕೊಡುತ್ತಿರಲಿಲ್ಲ. ಇವತ್ತಿನದಿವಸ ಹಳ್ಳಿಯಲ್ಲಿ ಒಕ್ಕಲುತನ ಯಾವರೀತಿ ಇದೆ ಎಂಬುದು ನಮಗೆ ಚೆನ್ನಾಗಿ ಗೊತ್ತಿದೆ. ಈ ಪರಿಸ್ಥಿತಿಯಲ್ಲಿ ಹಳ್ಳಿಯಲ್ಲಿರುವಾಗ ಇವರು ಕೇವಲ 25 ಪರ್ಸೆಂಟ್‌ನಷ್ಟು

ಮೀಸಲಾತಿ ಕೊಟ್ಟರೆ ಒಬ್ಬ ಹಳ್ಳಿ ಹರಿಜನರಿಗೆ ಒಂದು ಕೆಲಸ ಸಿಗುವುದಿಲ್ಲ. ಈ ವಿಷಯದ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಮ್ಮ ನಾಯಕರು ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ನಾವು ಮೊದಲು ದೊಡ್ಡ ಹೋರಾಟ ಮಾಡಿ 10 ಪರ್ಸೆಂಟ್ ತಂದಿದ್ದೆವು. ಆದರೆ ದುರ್ದೈವದಿಂದ ಹೇಳಬೇಕಾದರೆ, ಇವತ್ತಿನ ದಿವಸ ಹಳ್ಳಿಯ ರೈತರನ್ನು ವಿರೋಧ ಮಾಡತಕ್ಕಂಥ ಜನ ನಮ್ಮ ದೇಶದಲ್ಲಿ ಬಹಳಷ್ಟು ಇದ್ದಾರೆ. ಈ ಜನ ಕೋರ್ಟಿಗೆ ಹೋಗಿ ಇದನ್ನು ತಡೆಗಟ್ಟಿದರು. ಇದು ಕೋರ್ಟಿಗೆ ಏಕೆ ಹೋಯಿತು ಎನ್ನತಕ್ಕಂಥದ್ದನ್ನು ಈಗಾಗಲೇ ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಹೇಳಿದ್ದಾರೆ. ನಮ್ಮ ಅಧಿಕಾರಿಗಳು ಎಷ್ಟರಮಟ್ಟಿಗೆ ಇದ್ದಾರೆ ಎಂಬುದರ ಬಗ್ಗೆ ನಾನು ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಾವು ಇರಬಹುದು ಅಥವಾ ನೀವು ಇರಬಹುದು ಆದರೆ ಅಧಿಕಾರಿಗಳು ಇದನ್ನು ತೆಗೆದುಕೊಂಡು ಬಂದು ಕೋರ್ಟಿಗೆ ಕೊಡಬೇಕಾಗುತ್ತದೆ. ಇವತ್ತಿನ ದಿವಸ ಅಧಿಕಾರಿಗಳು ಕುಳಿತುಕೊಂಡು ಏನು ಮಾಡುತ್ತಾರೆ ಎಂದರೆ, ಗ್ರಾಮೀಣ ಜನಸಂಖ್ಯೆಗೆ ಅನುಗುಣವಾಗಿ ಮೊನ್ನೆ ದಿವಸ ಮನೆಗಳನ್ನು ಹಂಚುತ್ತೇವೆಂದು ಹೇಳಿದರು. ಆದರೆ ಅಧಿಕಾರಿಗಳು ತಾಲ್ಲೂಕು ಮಟ್ಟದಲ್ಲಿ ಜನಸಂಖ್ಯೆ ಆಧಾರವನ್ನು ಇಟ್ಟುಕೊಂಡು ಕ್ಷೇತ್ರವಾರು ಆರ್ಡರನ್ನು ಕೊಟ್ಟಿದ್ದಾರೆ. ನಿಮ್ಮ ಕಡೆ ಇರತಕ್ಕಂಥ ಲಿಸ್ಟ್ ಕೊಡಿ ಎಂದು ಕೇಳಿದರೆ, ನಮ್ಮ ಕಡೆ ಯಾವುದೇ ಲಿಸ್ ಇಲ್ಲವೆಂದು ಹೇಳುತ್ತಾರೆ. ನಿಮ್ಮ ಕಡೆ ಲಿಸ್ಟ್ ಇಲ್ಲದಿದ್ದರೆ ಆರ್ಡರ್ ಹೇಗೆ ಮಾಡಿದರು? ಆ ನಂತರ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ಲಿಸ್ಟ್ ಕೊಟ್ಟೆ. ಅಧಿಕಾರಿಗಳು ಮಾಡಿದಂಥ ತಪ್ಪಿನಿಂದ ಕೋರ್ಟಿಗೆ ಹೋದರು ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗ ಅಲ್ಲಿ ಇರತಕ್ಕಂಥ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಈಗ ಆಗಿದ್ದು ಆಯಿತು; ಇನ್ನು ಮುಂದೆ ಸರಿಯಾಗಿ ಮಾಡುತ್ತೇವೆಂದು ಉತ್ತರ ಹೇಳುತ್ತಾರೆ. ನಾನು ಈಗಾಗಲೇ ಹೇಳಿದ ಪ್ರಕಾರ ಇದನ್ನು ಸರಿ ಮಾಡದೇ ಇರುವುದಕ್ಕೋಸ್ಕರ ಇವತ್ತಿನದಿವಸ ಕೋರ್ಟಿಗೆ ಹೋಗಿದ್ದಾರೆ. ಆದ್ದರಿಂದ ಅಲ್ಲಿ ಇದಕ್ಕೆ ಸಂಬಂಧಪಟ್ಟ ಎಲ್ಲರ ಮೇಲೆಯೂ ಸಹ ಕ್ರಮ ತೆಗೆದುಕೊಳ್ಳಬೇಕು. ಎಲ್ಲವನ್ನು ಮಂತ್ರಿಗಳು ಮಾಡುವುದಕ್ಕೆ ಆಗುವುದಿಲ್ಲವೆಂದು ನಮಗೆ ಗೊತ್ತಿದೆ. ಆದರೆ ಅಧಿಕಾರಿಗಳು ಕೂಡ ಒಳ್ಳೆಯ ಮನಸ್ಸಿನಿಂದ ಕೆಲಸ ಮಾಡಬೇಕು. ಇದು ಕೋರ್ಟಿಗೆ ಹೋಗುತ್ತದೆ ಎಂದು ತಾವು ಅಂಜಬೇಡಿ. ದಯವಿಟ್ಟು ಶೇಕಡ 100ರಲ್ಲಿ 70 ಪರ್ಸೆಂಟನಷ್ಟು ಮೀಸಲಾತಿ ಈ ಒಂದು ವರ್ಗಕ್ಕೆ ಸಿಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಎಸ್.ಎಸ್. ಪಾಟೀಲ್‌ರವರು ಈಗಾಗಲೇ ಮಾತನಾಡುತ್ತಾ 15 ಪರ್ಸೆಂಟ್ ಮಾಡಿದ್ದೇವೆಂದು ಹೇಳಿದರು. ಇದಕ್ಕೆ ಸಂಬಂಧಪಟ್ಟಂತೆ ನನ್ನ ಹತ್ತಿರ ಇರುವ ಫೈಲ್‌ನಲ್ಲಿ, ಏನಿದೆ ಎಂದರೆ:

Initially when the benefit of rural weightage was introduced with effect from 16th April 1992 as per Notification No. DPAR 5 SRR 92 dt. 31.3.92 it was confined direct recruitment to group C and Group D, and it provided for weightage of 15 marks to be added to the marks secured by the rural candidates.

ಶ್ರೀ ಎಸ್.ಎಸ್. ಪಾಟೀಲ್ :— ಈ ರೀತಿಯಾದಂಥ ಚರ್ಚೆ ಆದಾಗ, ಆ ಸಂದರ್ಭದಲ್ಲಿ ನೇಮಕಾತಿ ಯಾವರೀತಿಯಾಗಿದೆ ಎಂಬುದರ ಬಗ್ಗೆ ಮಾಹಿತಿ ತಂದುಕೊಟ್ಟಾಗ ಇದನ್ನು 15 ಪರ್ಸೆಂಟ್ ಆ ಸಂದರ್ಭದಲ್ಲಿ ಮಾಡಲಾಯಿತು.

D.B. CHANDRE GOWDA: On the question of reservation on the basis of population as suggested by the hon.member, again I go back to the judgement of the Supreme Court of India on implementation of the Mandal Commission report on reservation policy towards socially and economically backward classes. In 94(a) it is stated:

"We must however pointout that Clauses 4 speaks of adequate representation and not proportionate representation. Adequate representation cannot be read as proportionate representation. Principle of proportionate representation is accepted only in Article 313 and 332 of the Constitution and that too for limited period. These articles speak of reservation of seats in the Lok Sabha and State Legislative Assemblies in favour of Scheduled Castes and Scheduled Tribes proportionate to their population. But they are only temporary and special provisions. It is therefore not possible to accept the theory of proportionate representation, though the proportion of population of backward classes to the total population of backward classes to the total population could certainly be relevant."

ಮಾನ್ಯ ಸದಸ್ಯರು ಹೇಳಿದ ಪ್ರಕಾರ ಒಳ್ಳೆಯದು ಮಾಡಬೇಕೆಂದು ಆಸೆ ಇದ್ದರೂ ಕೂಡ ಇಲ್ಲಿ ಬಾಧಕವಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಈ ವಿಚಾರದ ಬಗ್ಗೆ ಈಗಾಗಲೇ ಸನ್ಮಾನ್ಯ ಹನುಮೇಗೌಡರು ಮತ್ತು ಸನ್ಮಾನ್ಯ ವೈ.ಕೆ. ರಾಮಯ್ಯನವರು ಹಾಗೂ ಶ್ರೀಮಾನ್ ಎಸ್.ಎಸ್. ಪಾಟೀಲ್‌ರವರು ಮತ್ತು ನಮ್ಮ ಪಕ್ಷದ ಅಧ್ಯಕ್ಷರಾಗಿರುವ ಶ್ರೀಮಾನ್ ಬೈರೇಗೌಡರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ನಾನು ಇದನ್ನು ಮತ್ತೆ ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಶ್ರೀಮಾನ್ ಸೋಮಶೇಖರ್‌ರವರು ಇದಕ್ಕೆ ಸಂಬಂಧಪಟ್ಟಂತೆ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ತಾವು ಏನೋ ಒಂದು ಮಸೂದೆಯನ್ನು ಮಂಡನೆ ಮಾಡಿದ್ದೀರಿ. This is a defective bill according to me. ತಮ್ಮ ಗಮನಕ್ಕೂ ಸಹ ಕೆಲವು ಅಭಿಪ್ರಾಯಗಳು ಬಂದಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಗ್ರಾಮಾಂತರ ಮಕ್ಕಳು ತಮ್ಮ ಹತ್ತಿರ ಬಂದು ಬಹಳ ಒತ್ತಾಯ ಮಾಡಿರತಕ್ಕಂಥಾದ್ದನ್ನು ನಾನು ಕಣ್ಣಾರೆ ನೋಡಿದ್ದೇನೆ. ಈ ಬಿಲ್ ನಲ್ಲಿ ಏನಾಗಿದೆ ಎಂದರೆ, ಕೇವಲ ಎ.ಬಿ.ಸಿ. ಮತ್ತು ಡಿ. ಗುಂಪಿನ ಜನರು ಕೆಲಸಕ್ಕೆ ಸೇರಬೇಕಾಗಿರುವಾಗ ಬೇಕಾಗಿರತಕ್ಕಂಥ ಮೀಸಲಾತಿ ಬಗ್ಗೆ ಈ ಮಸೂದೆಯನ್ನು ಮಾಡಲಾಗಿದೆಯೇ ಹೊರತು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಸಂದರ್ಭದಲ್ಲಿ ಅಡ್ಮಿಷನ್ ಆಗುವಾಗ ಬೇಕಾಗಿರತಕ್ಕಂಥ ಮೀಸಲಾತಿ ಬಗ್ಗೆ ನೀವು ಏನೂ ಮಾಡುವುದಕ್ಕೆ ಹೋಗಿಲ್ಲ. ನೇಮಕಾತಿ ಸಂದರ್ಭದಲ್ಲಿ ಇದೂ ಕೂಡ ಅನ್ವಯಿಸುತ್ತದೆ ಎಂದು ನಾವು ನಿರೀಕ್ಷೆ ಮಾಡಿದ್ದೆವು. ಅಂದರೆ, ಈ ಮಸೂದೆಯನ್ನು ಮಂಡನೆ ಮಾಡತಕ್ಕಂಥ ಸಂದರ್ಭದಲ್ಲಿ ತಾಂತ್ರಿಕ ಮತ್ತು ಮೆಡಿಕಲ್ ವಿದ್ಯಾಭ್ಯಾಸಕ್ಕೆ ಹಾಗೂ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕಾಲೇಜುಗಳಿಗೆ ಅಡ್ಮಿಷನ್ ಸಹಿತ ಇದರೊಳಗೆ ಬರುವ ಹಾಗೆ ಮಾಡಬೇಕು. ಮಾನ್ಯ ಎಸ್.ಎಸ್. ಪಾಟೀಲ್‌ರವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಏನೆಂದರೆ, ರೈತರ ಕೃಷಿಗೆ ಸಂಬಂಧಪಟ್ಟಂತೆ ಇವತ್ತಿನದಿವಸ ಕೃಷಿ ವಿಶ್ವವಿದ್ಯಾನಿಲಯ ಇದ್ದರೂ ಸಹ ರೈತರ ಮಕ್ಕಳಿಗೆ ಅಡ್ಮಿಷನ್ ಸಿಗುತ್ತಿಲ್ಲವೆಂದು ಸ್ಪಷ್ಟಪಡಿಸಿದರು. ತಾಲ್ಲೂಕು ಮಟ್ಟದ ಜನಸಂಖ್ಯೆ ಆಧಾರದ ಮೇಲೆ ನಾವು ಫಿಕ್ಸ್ ಮಾಡಿದ್ದೆವು. ಇದು ಸರ್ಕಾರದ ಆರ್ಡರ್‌ನಲ್ಲಿದೆ. ಮಸೂದೆ ರೂಪದಲ್ಲಿ ತಂದಿಲ್ಲ. ಇದು ನಿಮಗೂ ಸಹ ಗೊತ್ತಿರತಕ್ಕಂಥ ವಿಚಾರ. ಆದರೆ ಇದನ್ನು ಗ್ರಾಮವೆಂದು ತೆಗೆದುಕೊಂಡರೂ ಸಹ ಇದರ ಬಗ್ಗೆ ಸಾಕಷ್ಟು ಇನ್-ಪುಟ್ ಈ ಒಂದು ಬಿಲ್‌ನಿಂದ ಹೋಗಿಲ್ಲ, ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯವಾಗಿದೆ. ಈ ಬಗ್ಗೆ ತಾವು ಸಭೆಯನ್ನು ಕರೆದಿರುತ್ತೀರಿ, ಸಾಕಷ್ಟು ಚರ್ಚೆಯನ್ನು ಮಾಡಿರುತ್ತೀರಿ. ಈ ಆಯೋಗವನ್ನು ಮಾನ್ಯ ಮುಖ್ಯಮಂತ್ರಿಗಳು ರಚನೆ ಮಾಡಿದರು. ಆ ಆಯೋಗವನ್ನು ರಚನೆ ಮಾಡತಕ್ಕಂಥ ಸಂದರ್ಭದಲ್ಲಿ ನಮನ್ನು ಏನು ಕೇಳಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ? ಈ ಆಯೋಗದಿಂದ ನಮಗೆ ಯಾವುದೇ ಒಂದು ಮಾರ್ಗದರ್ಶನವಾಗಲಿ

ಅಥವಾ ದಾರಿದೀಪವಾಗಲಿ ಕೊಡುವುದಕ್ಕೆ ಆಗಿರುವುದಿಲ್ಲ. ಕಟ್‌ಡೌನ್ ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟಿನಲ್ಲಿ ಏನಾಗಿದೆ, ಗ್ರಾಮೀಣ ಪ್ರದೇಶದ ಜನರಿಗೆ ಕೃಪಾಂಕವನ್ನು ಕೊಡತಕ್ಕಂಥ ವಿಚಾರದಲ್ಲಿ ಪಟ್ಟಣ ಪ್ರದೇಶದಲ್ಲಿ ಓದತಕ್ಕಂಥ ಹುಡುಗರಿಗೆ ಸರಿಸಮಾನವಾಗಿ ಇರತಕ್ಕಂಥ ಸಾಕ್ಷಿ ಪುರಾವೆ ಆಧಾರವಿಲ್ಲವೆಂದು ಹೇಳಿರುತ್ತಾರೆ. ಆ ಕೆಲಸವನ್ನು ಈ ಆಯೋಗಮಾಡಿರುವುದಿಲ್ಲ. ಪರಿಪೂರ್ಣವಾದ ಸಲಹೆ ಆಗಿಲ್ಲದಿರುವುದರಿಂದ ಸರ್ಕಾರಕ್ಕೆ ನಾವು ಏನು ಸಲಹೆಯನ್ನು ಮಾಡಿದ್ದೇವೆಂದರೆ, 9 ಷೆಡ್ಯೂಲ್‌ನಲ್ಲಿ ಇದನ್ನು ಸೇರಿಸಲಿಕ್ಕೆ ಬೇಕಾಗಿರತಕ್ಕಂಥಾದ್ದಕ್ಕೆ ಅದಕ್ಕೆ ನಾವು ಎಲ್ಲರೂ ಒಪ್ಪಿದ್ದೇವೆಂದು ಹೇಳಿರುತ್ತೇವೆ. ಈ ಒಂದು ಸದನದಲ್ಲಿ ಸಂವಿಧಾನಕ್ಕೆ ತಿದ್ದುಪಡಿಯನ್ನು ತರತಕ್ಕಂಥ ಒಂದು ನಿರ್ಣಯವನ್ನು ಮಾಡಿ ಈ ವಿಚಾರದಲ್ಲಿ, ನೀವು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಿ, ಅವರು ಕೂಡ ವಿಚಾರಣೆಯನ್ನು ಮಾಡುತ್ತಾರೆ ಎನ್ನುವ ವಿಚಾರವನ್ನು ನಾವು ಸಹಿತ ಹೇಳುತ್ತೇವೆ, ಅದನ್ನು ಸಹಿತ ಇವರು ಮಾಡಲಿಲ್ಲ. ತರಾತುರಿಯಲ್ಲಿ ಇದು ಚರ್ಚೆಯಾಗಲಿ, ಇದರ ಬಗ್ಗೆ ನಾವು ಸರ್ವಪಕ್ಷದ ಸಭೆಯಲ್ಲಿ ತೀರ್ಮಾನವನ್ನು ಮಾಡಿರುತ್ತೇವೆ, ನೀವು ಆಯೋಗಕ್ಕೆ ಕೇಳಿರುತ್ತೀರಾ, ನಾನು ಈಗ ಕೂಡ ಹೇಳುತ್ತೇನೆ. ನೀವು ಕೃಪಾಂಕವನ್ನು ಕೊಡುವುದನ್ನು ಮಾಡಿರುತ್ತೀರಿ, ಅದರಲ್ಲಿ ಸಾಕ್ಷಿ ಪುರಾವೆ ಆಧಾರವನ್ನು ಕೊಡತಕ್ಕಂಥ ವಿಚಾರದಲ್ಲಿ ಫೇಲಾಗಿರುತ್ತೀರಿ, ಇದನ್ನು ಬಿಟ್ಟರೆ ಎಲ್ಲೂ ಫೇಲಾಗಿರುವುದಿಲ್ಲ. ಮಾನ್ಯ ಶ್ರೀ ಸೋಮಶೇಖರವರು ಕೊಟ್ಟಿರುವ ಸಲಹೆಯನ್ನು ನೀವು ತೆಗೆದುಕೊಂಡು ಮಾಡಬಹುದು. We don't want to be a party to this defective Bill. ನಾವು ಇದಕ್ಕೆ ಒಪ್ಪಲು ತಯಾರಿಲ್ಲ, ಸಮಗ್ರವಾದ ಒಂದು ಮಸೂದೆಯನ್ನು ತಾವು ಏನು ಮಾಡಬೇಕಾಗಿತ್ತು ಅದನ್ನು ಮಾಡಿರುವುದಿಲ್ಲ. ತಾವು ಇದನ್ನು 9ನೇ ಷೆಡ್ಯೂಲ್‌ಗೆ ಸೇರಿಸಬೇಕಾಗುತ್ತದೆ. ಇಲ್ಲದಿದ್ದರೆ ಇದರಿಂದ ಏನು ಉಪಯೋಗವಾಗುವುದಿಲ್ಲ. ತಮಿಳುನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶದಲ್ಲಿದೆ, ಇದು ನಮ್ಮಲ್ಲಿ ಏಕೆ ಆಗಬಾರದು? ಈ ಮಸೂದೆಯ ಪರಿಣಾಮ ಏನು ಎನ್ನುವುದು ತಮಗೆ ಇದರ ಬಗ್ಗೆ ಗೊತ್ತಿದೆ. ಇವರ ಪ್ರಾಮಾಣಿಕತೆಯನ್ನು ನಾನು ಎಲ್ಲಿ ಪ್ರಶ್ನೆ ಮಾಡುತ್ತೇನೆಂದರೆ, ಇವರು ಒಂದು ಕಡೆ ಹೇಳುತ್ತಾರೆ, ನಾವು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ರಿಕ್ರೂಟ್‌ಮೆಂಟ್ ನಡೆದೇ ಇದೆ. ಇದರ ಬಗ್ಗೆ ಮಾನ್ಯ ಸಗೀರ್ ಅಹ್ಮದ್‌ರವರು ಹೇಳಲಿ, ಕೆಎಸ್‌ಆರ್‌ಟಿಸಿಯ ಕಂಡಕ್ಟರ್ ಹಾಗೂ ಡ್ರೈವರ್‌ಗಳ ಆಯ್ಕೆಯನ್ನು ಮಾಡಿದ್ದಾರೆ. ಅದು ಏನು ತುರ್ತು ಇರಲಿಲ್ಲ. ಅಂದು ಮಾನ್ಯ ಗೃಹ ಮಂತ್ರಿಗಳು ಹೇಳಿದರು. ನಮ್ಮ ಲಾ ಅಂಡ್ ಆರ್ಡರ್ ಕೆಟ್ಟು ಹೋಗುತ್ತದೆ, ಅದಕ್ಕಾಗಿ ನಾವು ಸಬ್-ಇನ್ಸ್‌ಪೆಕ್ಟರ್‌ಗಳನ್ನು ತೆಗೆದುಕೊಳ್ಳುತ್ತೇವೆ, ಅದಕ್ಕಾಗಿ ನಾವು 100 ಜನರವರೆಗೆ ತೆಗೆದುಕೊಳ್ಳಲು ಹೇಳಿದೆವು. ಡಾಕ್ಟರ್‌ಗಳನ್ನು ತೆಗೆದುಕೊಳ್ಳಿ ಎಂದು ಹೇಳಿದೆವು. ಬಾಕಿ ಎಲ್ಲದಕ್ಕೂ ರಿಕ್ರೂಟ್‌ಮೆಂಟ್ ಮಾಡಿಕೊಂಡು ಹೋಗುತ್ತಿದ್ದೀರಿ, ಅದಕ್ಕೆ ನಾವು ಪ್ರಶ್ನೆ ಮಾಡಬೇಕಾಗುತ್ತದೆ, ಮಾಡಿದ್ದೇವೆ. ಇದೊಂದು ಡಿಫೆಕ್ಟಿವ್ ಬಿಲ್ ಇರುವುದರಿಂದ ಇದಕ್ಕೆ ನಾವು ಪಾರ್ಟಿಯಾಗುವುದಕ್ಕೆ

ತಯಾರಿಲ್ಲ, ಇದರ ಬದಲಾಗಿ ತಾವು ಇದನ್ನು 9 ನೇ ಷೆಡ್ಯೂಲ್‌ಗೆ ಸೇರಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಒಂದು ರೆಸಲ್ಯೂಷನ್ ಪಾಸ್ ಮಾಡಿ, ಈಗ ಇರತಕ್ಕಂಥ ರೂಲ್ಸ್‌ನ್ನು ಅಮೆಂಡ್‌ಮೆಂಟ್ ಮಾಡಿ; ತಮಗೆ ನಾವು ಅಂಕಿಗಳನ್ನು ಕೊಟ್ಟಿದ್ದೇವೆ. ಎಲ್ಲಾ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅನುಕೂಲವಾಗುವ ಹಾಗೆ ತಾವು ಕಾನೂನಿನಿಂದ ಮಾಡಿದ್ದರೆ ಚೆನ್ನಾಗಿ ಇರುತ್ತಿತ್ತು. ಆದ್ದರಿಂದ ತಾವು ಇದನ್ನು ತರಾತುರಿಯಲ್ಲಿ ತಂದಿರುತ್ತೀರಿ ಇದಕ್ಕೆ ನಾವು ಪಾರ್ಟಿಯಾಗುವುದಕ್ಕೆ ತಯಾರಿಲ್ಲ, ಇದನ್ನು ತಾವು ಮಾಡಿಕೊಳ್ಳಿ, ನಾವು ಸಭಾತ್ಯಾಗವನ್ನು ಮಾಡುತ್ತೇವೆ.

(ಈ ಹಂತದಲ್ಲಿ ಜನತಾದಳ (ಯು) ಪಕ್ಷದ ಸದಸ್ಯರು ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯರವರ ನೇತೃತ್ವದಲ್ಲಿ ಸಭಾತ್ಯಾಗವನ್ನು ಮಾಡಿದರು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಈ ಗ್ರಾಮೀಣ ಕೃಪಾಂಕ ಬಿಲ್ ನಿನ್ನೆ ಸಾಯಂಕಾಲ ಮಂಡನೆಯಾಗಿದೆ, ಇದರ ಬಗ್ಗೆ ಚರ್ಚೆಯಾಗಿರುತ್ತದೆ, ಇದರ ಬಗ್ಗೆ ನಾವು ಬೆಳಿಗ್ಗೆ ಕೆಲವೊಂದು ಪ್ರಪೋಸಲ್‌ಗಳನ್ನು ಕೊಟ್ಟಿರುತ್ತೇವೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಶೇಕಡಾ 10 ಎಂದು ಹೇಳಿದರು. ಇದಕ್ಕೆ ನಾವು 25 ಪರ್ಸೆಂಟ್ ಮಾಡಲು ಹೇಳಿದೆವು. ಇದಕ್ಕೆ ಮಾನ್ಯ ಕಾನೂನು ಸಚಿವರು ಒಪ್ಪಿಕೊಂಡಿದ್ದಾರೆ. ಇದನ್ನು ಸಂವಿಧಾನ ಮತ್ತು ಕಾನೂನು ರೀತ್ಯ ತರಬೇಕಾಗಿರುತ್ತದೆ. ಇದರ ಬಗ್ಗೆ ನಮಗೆಲ್ಲರಿಗೂ ಕಳಕಳಿ ಇದೆ, ಗ್ರಾಮೀಣ ವಿದ್ಯಾರ್ಥಿಗಳಿಗೆ ಕೃಪಾಂಕವನ್ನು ಕೊಡಬೇಕು. ಇದೊಂದು ಪ್ರಯೋಗ ಮಾತ್ರ. ಇದನ್ನು 9 ನೇ ಷೆಡ್ಯೂಲ್‌ನಲ್ಲಿ ಸೇರಿಸಬೇಕೆಂದು ಹೇಳಿದ್ದೇನೆ, ಇದರ ಬಗ್ಗೆ ಚಿಂತನೆಯಾಗಬೇಕು. ಈ ಬಿಲ್ ಪಾಸ್ ಆದನಂತರ ಇದನ್ನು ಇಲ್ಲಿಗೆ ಮುಕ್ತಾಯ ಮಾಡುವುದು ಬೇಡ. 9 ನೇ ಷೆಡ್ಯೂಲ್‌ನಲ್ಲಿ ಸೇರಿಸುವ ಬಗ್ಗೆ ಲೀಗಲ್ ಎಕ್ಸ್‌ಪರ್ಟ್‌ಗಳ ಓಪಿನಿಯನ್ ತೆಗೆದುಕೊಂಡು ತಮಿಳುನಾಡಿನಲ್ಲಿ 9 ನೇ ಷೆಡ್ಯೂಲ್‌ನಲ್ಲಿ 69 ಪರ್ಸೆಂಟ್ ಮೀಸಲಾತಿಯನ್ನು ಸೇರಿಸಿರುತ್ತಾರೆ. ಅದರ ಬಗ್ಗೆ ಇವತ್ತು ಯಾರೂ ಕೂಡ ಚಾಲೆಂಜ್ ಮಾಡಿಲ್ಲ, ಅದರ ಬಗ್ಗೆ ಯಾರು ಕೋರ್ಟಿಗೆ ಹೋಗಿರುವುದಿಲ್ಲ. ಅದರ ಬಗ್ಗೆ ಚರ್ಚೆಯಾಗಲಿ, ಅದರ ಬಗ್ಗೆ ಓಪಿನಿಯನ್ ತೆಗೆದುಕೊಳ್ಳಿ, 25 ಪರ್ಸೆಂಟ್ ಮೀಸಲಾತಿ ಬಗ್ಗೆ ಪ್ರಾಯೋಗಿಕವಾಗಿ 4-5 ತಿಂಗಳು ಇದರ ಉಪಯೋಗದ ಬಗ್ಗೆ ಟ್ರೈಮಾಡಬೇಕು. ಇದು ಸರಿಯಾಗಿ ಹೋದರೆ ಇನ್ನಷ್ಟು ಇನ್‌ಕ್ರೀಸ್ ಮಾಡಬಹುದು, ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲವಾದರೆ ಇನ್ನಷ್ಟು ಹೆಚ್ಚಿಗೆ ಏರಿಕೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ನಾವು ಬೆಂಬಲವನ್ನು ಕೊಡಬೇಕಾಗುತ್ತದೆ, ಒಬ್ಬೊಬ್ಬರದ್ದು ಒಂದೊಂದು ರೀತಿಯಾದ ಅಭಿಪ್ರಾಯ ಇರುತ್ತದೆ, ಇದಕ್ಕೆ ನಾವು ಬೆಂಬಲವನ್ನು ಕೊಟ್ಟಿದ್ದೇವೆ, ಈ ಬಿಲ್ ಪಾಸ್ ಮಾಡುವುದಕ್ಕೆ ನಾವು ವೆಲ್‌ಕಂ ಮಾಡುತ್ತೇವೆ. 25 ಪರ್ಸೆಂಟ್‌ಗಿಂತ ಜಾಸ್ತಿ ಮೀಸಲಾತಿಯನ್ನು ಕೊಡಬೇಕು

ಹಾಗೂ 9 ನೇ ಷೆಡ್ಯೂಲ್‌ನಲ್ಲಿ ಇದನ್ನು ಸೇರಿಸಬೇಕು, ಇಂದಿನಿಂದ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳಿ, ಈ ಬಿಲ್ ಪಾಸ್ ಮಾಡುವುದಕ್ಕೆ ನಾವು ಬೆಂಬಲವನ್ನು ಕೊಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಆಭಾರಿಯಾಗಿದ್ದೇನೆ. ನಮ್ಮಲ್ಲಿ ಒಂದು ಗಾದೆ ಮಾತನ್ನು ಹೇಳುತ್ತಾರೆ. ಬರೀ ಕೈಗಿಂತ ಹಿತ್ತಾಳೆ ಕಡಗ ವಾಸಿ ಎಂದು ನಮಗೆ ಚಿನ್ನದ ಕಡಗವನ್ನು ಹಾಕುವುದಕ್ಕೆ ಆಗದಿರುವುದರಿಂದ ನಾವು ಮಾಡಿರುವುದು ಇಷ್ಟೇ ಆಗಿದೆ. ಹಿತ್ತಾಳೆ ಕಡಗವನ್ನು ಹಾಕುವುದಕ್ಕೆ ಆಗದಿರುವುದರಿಂದ ನಾವು ಮಾಡಿರುವುದು ಇಷ್ಟೇ ಆಗಿದೆ. ಹಿತ್ತಾಳೆ ಕಡಗವನ್ನು ಹಾಕುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಮುಂದೆ ನಾವು ಬೆಳ್ಳಿ ಅಥವಾ ಚಿನ್ನದ ಕಡಗವನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ :— ಇದರ ಜೊತೆಗೆ 1-7ನೇ ತರಗತಿಯವರೆಗೆ ಕೃಪಾಂಕ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :— ನಾನು ಮೊದಲನೆಯದಾಗಿ ಇದೊಂದು ಪ್ರಯೋಗವೆಂದು ಹೇಳಿರುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರುವ ಸಲಹೆಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. 9ನೇ ಷೆಡ್ಯೂಲ್‌ನಲ್ಲಿ ಸೇರಿಸುವುದಕ್ಕೆ ನಾವು ನೀವು ಕೂಡಿಕೊಂಡು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡೋಣ. 69 ಪರ್ಸೆಂಟ್ ಮೀಸಲಾತಿ ತಮಿಳುನಾಡಿನಲ್ಲಿ ಇದೆ, ಇದು ಇಂದ್ರಸಹಾನಿ ಜಡ್ಜ್‌ಮೆಂಟ್ ಬರುವ ಮುಂಚೆ ಮಾಡಿರುವುದು; ನಂತರ ಇದನ್ನು 9ನೇ ಷೆಡ್ಯೂಲ್ ಅಮೆಂಡ್‌ಮೆಂಟ್‌ಗೆ ಅವರು ಹಾಕಿದರು, ಇದು ಸುಪ್ರೀಂಕೋರ್ಟಿನಲ್ಲಿ ಪೆಂಡಿಂಗ್‌ನಲ್ಲಿರುತ್ತದೆ. ನಮ್ಮ ಕೇಸ್ ಕೂಡ ಪೆಂಡಿಂಗ್‌ನಲ್ಲಿದೆ. ಅವರದ್ದು ಕೂಡ ಡಿಸ್‌ಪೋಸಲ್ ಆಗಿರುವುದಿಲ್ಲ. ನೀವು ಕೊಟ್ಟಿರುವ ಸಲಹೆಯನ್ನು ನಾನು ಪರಿಪೂರ್ಣವಾಗಿ ಒಪ್ಪುತ್ತೇನೆ. ಉದ್ಯೋಗವನ್ನು ಕೊಡುವುದಕ್ಕೆ ಮಿನಿಮಮ್ ವೈಟೇಜ್ ಯಾವುದೆಂದರೆ ಎಸ್‌ಎಸ್‌ಎಲ್‌ಸಿ ಇರುತ್ತದೆ. ಯಾವುದಕ್ಕೂ ಎಸ್‌ಎಸ್‌ಎಲ್‌ಸಿ ಮಾಡಿದ್ದೇವೆ ಹೊರತು ಬೇರೆ ಯಾವುದಕ್ಕೂ ಅಲ್ಲ. ನನಗೆ ಬಹಳ ಆಶ್ಚರ್ಯವಾಗುವುದೆಂದರೆ, ವಿಪರೀತ ಮಾತನಾಡಿ, ಇದೊಂದು ಪ್ರೋಗ್ರೆಸ್ಸಿವ್ ಬಿಲ್ ಇದನ್ನು ತರಲು ಬಹಳ ಪ್ರಯತ್ನವನ್ನು ಮಾಡಿರುತ್ತೀರಿ, ಇದೊಂದು ಒಳ್ಳೆಯ ಸಲಹೆ ಎಂದು ಹೇಳಿ, ಅವರು ಹೇಳಿರುವುದನ್ನು ನಾವು ಸಾವಧಾನದಿಂದ ಕೇಳಿ, ಒಳಗಡೆ ಕರೆದು ಕುಳಿತುಕೊಂಡು ಮಾತನಾಡಿ ಇಲ್ಲಿ ಸದನದಿಂದ ಹೊರಗಡೆ ಹೋದರೆ ಏನು ಇದರ ಸಂದೇಶ? ಗ್ರಾಮೀಣ ಪ್ರದೇಶದ ಜನರ ಬಗ್ಗೆ ಕಳಕಳಿಯಿದೆ ಎಂದು ಸಂದೇಶವೇ?

ನಮ್ಮ ಸರ್ಕಾರಕ್ಕೆ ಕೋಡು, ಅಥವಾ ಕಿರೀಟ ಬರುತ್ತದೆಂದು ನಾವು ಮಾಡಿರುವುದಿಲ್ಲ. ಗ್ರಾಮಾಂತರ ಪ್ರದೇಶದ ಜನರಿಗೆ ಒಂದು ಸಹಾಯವಾಗಲಿ ಎಂದು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದೇವೆ, ಇದರ ಬಗ್ಗೆ ಮಾನ್ಯ ಹನುಮೇಗೌಡರ ಜೊತೆಯಲ್ಲಿ ಕೂಡ ಕುಳಿತುಕೊಂಡು ನಾನು ಚರ್ಚೆಯನ್ನು ಮಾಡಿರುತ್ತೇನೆ. ಇಲ್ಲಿ ಮಾತನಾಡಿ ರಾಜಕೀಯ ಮಾಡುವ ಪ್ರಯತ್ನ ಏನಿದೆ? ಹಿಂದೆ ಮಾಡಿದ್ದು ಕೂಡ ಅವರಿಂದಾಗಿಯೇ ಹೋಗಿದೆ. ಸಿ-ಡಿ ಗ್ರೂಪ್‌ಗೆ ಮಾತ್ರ ಇತ್ತು, ಎ-ಬಿ ಗ್ರೂಪ್‌ಗೆ ಮುಂದುವರೆಸಿರುವುದರಿಂದ ಇದು ಹೋಗಿದೆ. ಅವರೇ ಇವತ್ತು ಸಭಾತ್ಯಾಗ ಮಾಡುತ್ತಾರೆ. ಅವರು ಮಾಡಿರುವ ಪರಿಣಾಮದಿಂದ ಕೋರ್ಟಿಗೆ ಹೋಯಿತು, ಆದರ ಪರಿಣಾಮವಾಗಿ ಇವತ್ತು ವಜಾ ಆಯಿತು. ಅಷ್ಟಕ್ಕೆ ಮಾತ್ರ ಸೀಮಿತವಾಗಿದ್ದರೆ ಇವತ್ತು ಈ ಬಿಲ್ ಯಾರು ಪ್ರಶ್ನೆ ಮಾಡುತ್ತಿರಲಿಲ್ಲ. ಅವರಿಗೆ ಸಭಾತ್ಯಾಗ ಮಾಡುವ ಸ್ವಾತಂತ್ರ್ಯ ಇದೆ, ಅದರ ಬಗ್ಗೆ ನಾನು ಹೇಳುವುದಿಲ್ಲ. ನಮ್ಮ ಕಳಕಳಿಯ ಪ್ರಶ್ನೆಯನ್ನು ಮಾಡಿ ಹೊರಗಡೆ ಹೋಗುವುದು ಬೇಡ. ನಮ್ಮ ಪ್ರಾಮಾಣಿಕತೆಯ ಪ್ರಶ್ನೆಯನ್ನು ಮಾಡಿ ಅವರು ಸಭಾತ್ಯಾಗ ಮಾಡಿದ್ದಾರೆ. ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡಿ ಈ ಮಸೂದೆಯನ್ನು ತಂದಿರುತ್ತೇನೆ, ಮಾನ್ಯ ವಿರೋಧ ಪಕ್ಷದವರು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿರುವುದರಿಂದ ಅವರು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ.

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ) :— ಮಾನ್ಯ ಅಧ್ಯಕ್ಷರೆ, ನಾವು ಹೈದರಾಬಾದ್ ಕರ್ನಾಟಕ ಗಡಿ ಪ್ರದೇಶದಲ್ಲಿ ಬರುತ್ತೇವೆ. ಇಂಜನಿಯರಿಂಗ್ ಮೆಡಿಕಲ್ ಐಟಿಐ, ಎಂಬಿಬಿಎಸ್, ಬಿ.ಎಡ್ ಕಾಲೇಜುಗಳನ್ನು ಜಿಲ್ಲಾವಾರು ಮಾಡಬೇಕು. ನಮ್ಮದು ಬಹಳ ಹಿಂದುಳಿದ ಪ್ರದೇಶ, ಡಾ: ಅಂಬೇಡ್ಕರ್‌ರವರು ಕೊಟ್ಟಿರುವ ಕೊಡುಗೆ ನಮಗೆ ಸಾರ್ಥಕವಾಗಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ :— ಇದನ್ನು ನೇಮಕಾತಿಯ ಸಲುವಾಗಿ ಮಾತ್ರ ಮಾಡಲಾಗಿದೆ. ಇದು 25 ಪರ್ಸೆಂಟ್ ಎಲ್ಲಾ ಗ್ರೂಪ್‌ನವರಿಗೂ ಹೋಗುತ್ತದೆ. ಜಿಲ್ಲಾವಾರು ಮಾಡಬೇಕೆನ್ನುವ ವಾದ ನಿಮ್ಮದು ಏನಿದೆ, ಅದನ್ನು ಆಂತರಿಕವಾಗಿ ಕುಳಿತುಕೊಂಡು ಚರ್ಚೆ ಮಾಡಿ ಪರಿಣಾಮಗಳನ್ನು ಆಲೋಚನೆ ಮಾಡಬೇಕೇ ಹೊರತು, ಇವತ್ತು ಅದನ್ನು ಇಲ್ಲಿ ಹೇಳುವುದಕ್ಕೆ ನಾನು ತಯಾರಾಗಿರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹಸಚಿವರು) :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಒಂದು ಕ್ಯಾಬಿನೆಟ್ ಸಬ್-ಕಮಿಟಿಯನ್ನು ಕಾನ್ಸ್ಟಿಟ್ಯೂಟ್ ಮಾಡಿದ್ದಾರೆ. ಕೆಲವು ಏರಿಯಾಗಳಲ್ಲಿ ಉದ್ಯೋಗ ಅವಕಾಶಗಳು ಸಿಗುವುದಿಲ್ಲ ಮತ್ತು ಮೆಡಿಕಲ್, ಇಂಜಿನಿಯರಿಂಗ್ ಸೀಟುಗಳಾಗಲಿ, ಮತ್ತು ನೌಕರಿಗಳಲ್ಲಿಯೂ ಕೂಡ ಅವರಿಗೆ ಪ್ರಾತಿನಿಧ್ಯವು ಸಿಗುವುದಿಲ್ಲ, ಆದಕ್ಕಾಗಿ ಆಂಧ್ರ ಹಾಗೂ ಮಹಾರಾಷ್ಟ್ರ ಮಾದರಿಯಲ್ಲಿ

ತೆಲಂಗಾಣ ಜಿಲ್ಲೆಗಳಿಗೆ ಹೊಂದಿದ ಹಾಗೆ ಕೆಲವು ಕಾನೂನುಗಳು, ವಿದರ್ಭಕ್ಕೆ ಹೊಂದಿದಂತಹ ಕೆಲವು ಕಾನೂನುಗಳು ಏನು ಮಾಡಿದ್ದಾರೆ ಅದನ್ನು ಒಟ್ಟುಗೂಡಿಸಿ, ಪರಿಶೀಲಿಸಿ ನಮ್ಮ ರಾಜ್ಯದಲ್ಲಿಯೂ ಕೂಡ ಅದನ್ನು ಮಾಡುವುದಕ್ಕೆ ಬರುತ್ತದೆಯೇ, ಹೇಗೆ ಎನ್ನುವುದರ ಬಗ್ಗೆ ಒಂದು ಸಬ್ ಕಮಿಟಿಯನ್ನು ರಚಿಸಿದ್ದಾರೆ. ಅದು ಸಂವಿಧಾನದ 371ಕಲಂನ ಪ್ರಕಾರ ಅದಕ್ಕೆ ಹೊಸ ಸೆಕ್ಷನ್‌ಗಳು ಆ್ಯಡ್ ಮಾಡಿ ನಾವು ಅದಕ್ಕೆ ಹೇಗೆ ರೆಪ್ರಸೆಂಟೇಷನ್‌ನ್ನು ಕೊಡಬೇಕೆಂಬುದರ ಬಗ್ಗೆ ಈಗಾಗಲೇ ಅದರ ಬಗ್ಗೆ ಕಾಗದಪತ್ರಗಳನ್ನು ತರಿಸಿಕೊಂಡು ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ನಾವು ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದು ಅದನ್ನೂ ಕೂಡ ಷೆಡ್ಯೂಲ್ ನಲ್ಲಿ ಇನ್ ಕ್ಲೂಡ್ ಆಗಬೇಕಾಗುತ್ತದೆ, ಯಾವ ರೀತಿಯಾಗಿ ಎಂದರೆ ಮಿಜೋರಾಂ, ನಾಗಾಲ್ಯಾಂಡ್, ತೆಲಂಗಾಣ, ವಿದರ್ಭ, ಗುಜರಾತ್‌ನಲ್ಲಿ ಕೆಲವು ಕಡೆ ಹೇಗೆ ಪ್ರಾತಿನಿಧ್ಯವನ್ನು ಕೊಟ್ಟಿದ್ದಾರೆ, ಅದೇ ರೀತಿಯಾಗಿ ಇದನ್ನು ಕೂಡ ಮಾಡುವುದಕ್ಕೆ ಕೇಳಬೇಕಾಗುತ್ತದೆ. ಇದನ್ನು ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡು ಸಬ್ ಕಮಿಟಿಯನ್ನು ರಚಿಸಿದ್ದಾರೆ. ಆ ಉಪಸಮಿತಿಯು ಬೇಗನೆ ಒಂದು ಪ್ರಪೋಸಲ್‌ನ್ನು ಮಂಡಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೇವೆ.

ಅಧ್ಯಕ್ಷರು :— ಈಗ ಪರ್ಯಾಲೋಚನಾ ಪ್ರಸ್ತಾಪವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ, "2000ರ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕವನ್ನು ಪರ್ಯಾಲೋಚಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>

<u>ಖಂಡ-2</u>

ಅಧ್ಯಕ್ಷರು :— "ಖಂಡ 2 ಸೇರಿದಂತೆ ವಿಧೇಯಕದ ಅಂಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>(ಖಂಡ -2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)</u>

ಅಧ್ಯಕ್ಷರು :— ಖಂಡ-3ಕ್ಕೆ ಶ್ರೀಮಾನ್ ಕೆ.ಹೆಚ್.ಹನುಮೇಗೌಡರು, ಎಸ್.ಎಸ್. ಪಾಟೀಲರು, ಶ್ರೀ ಜಗದೀಶ್ ಶೆಟ್ಟರ್, ಶ್ರೀಹೆಚ್.ಎಸ್. ಮಹದೇವಪ್ರಸಾದ್, ಶ್ರೀ ಕೆ.ಬಿ. ಮಲ್ಲಿಕಾರ್ಜುನ್‌ರವರು ಇವರು ಕೆಳಕಂಡ ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ತಾವೇನಾದರೂ ಪ್ರೆಸ್ ಮಾಡುತ್ತೀರಾ?

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಸಹಿ ಹಾಕಿರತಕ್ಕಂತಹ ನಾವುಗಳೆಲ್ಲರೂ ಆ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. We don't press it.

MR. SPEAKER :— The amendment is withdrawn. ಈಗ ಸರ್ಕಾರದವರು ಮತ್ತೊಂದು ಅಮೆಂಡ್‌ಮೆಂಟ್‌ನ್ನು ಕೊಟ್ಟಿದ್ದಾರೆ, ಸದರಿಖಂಡ-3ಕ್ಕೆ ಸದರಿ ವಿಧೇಯಕದ ಖಂಡ-3ರಲ್ಲಿ "ಶೇಕಡ ಹತ್ತರಷ್ಟನ್ನು" ಎಂಬ ಪದಗಳ ಬದಲಾಗಿ "ಶೇಕಡ ಇಪ್ಪತ್ತೈದರಷ್ಟನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

CLAUSE-3

ಖಂಡ-3

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :— ಮಾನ್ಯ ಅಧ್ಯಕ್ಷರೆ, ಖಂಡ-3ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"ಸದರಿ ವಿಧೇಯಕದ ಖಂಡ-3ರಲ್ಲಿ ಶೇಕಡ ಹತ್ತರಷ್ಟನ್ನು ಎಂಬ ಪದಗಳ ಬದಲಾಗಿ ಶೇಕಡ ಇಪ್ಪತ್ತೈದರಷ್ಟನ್ನು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, ಸದರಿ ವಿಧೇಯಕದ ಖಂಡ-3ರಲ್ಲಿ ಶೇಕಡ ಹತ್ತರಷ್ಟನ್ನು ಎಂಬ ಪದಗಳ ಬದಲಾಗಿ ಶೇಕಡ ಇಪ್ಪತ್ತೈದರಷ್ಟನ್ನು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ-3 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, ಖಂಡ-3 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ-3 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

<u>ಖಂಡ 4 ಮತ್ತು 5</u>

ಅಧ್ಯಕ್ಷರು :— "ಖಂಡ 4 ಮತ್ತು 5 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಖಂಡ 4 ಮತ್ತು 5 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

<u>ಖಂಡ 1 ಇತ್ಯಾದಿ</u>

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, ಮೊದಲನೆಯ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

<u>ಪ್ರಸ್ತಾವದ ಅಂಗೀಕಾರ</u>

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) :— ಮಾನ್ಯ ಅಧ್ಯಕ್ಷರೆ 2000ರ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, ``2000ರ ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕವನ್ನು ಅಂಗೀಕರಿಸುವುದು"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.</u>

<u>(2) ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕ, 2000.</u>

<u>ಪರ್ಯಾಲೋಚನಾ ಪ್ರಸ್ತಾವ</u>

ಶ್ರೀ ಬಿ.ಕೆ. ಚಂದ್ರಶೇಖರ್ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ